# ಕರ್ನಾಟಕ ಸರ್ಕಾರ

# ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಬಾಲಕರು ಮತ್ತು ಬಾಲಕಿಯರಿಗಾಗಿ ಜಾರಿಯಾಗಿರುವ ಶುಚಿ ಸಂಭ್ರಮ ಕಿಟ್ ಯೋಜನೆಯ ಮೌಲ್ಯಮಾಪನ


ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಕರ್ನಾಟಕ ಸರ್ಕಾರ

ಫೆಬ್ರವರಿ 2020

# ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಬಾಲಕರು ಮತ್ತು ಬಾಲಕಿಯರಿಗಾಗಿ ಜಾರಿಯಾಗಿರುವ ಶುಚಿ ಸಂಭ್ರಮ ಕಿಟ್ ಯೋಜನೆಯ ಮೌಲ್ಯಮಾಪನ

**ಡಾ. ಆರ್. ಇಂದಿರಾ**

**ಪ್ರಧಾನ ಸಂಶೋಧಕರು**

**ಔಟ್‌ರಿಚ್ ಅಸೋಸಿಯೇಷನ್ ಆಫ್ ವಾಲೆಂಟಿಯರ್ಸ್**

**ಫಾರ್ ರೂರಲ್ ಡೆವಲಪ್‌ಮೆಂಟ್**

**ಬೆಂಗಳೂರು**

**ಸಮಾಜ ಕಲ್ಯಾಣ ಇಲಾಖೆ**

**ಕರ್ನಾಟಕ ಸರ್ಕಾರ**

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ**

**ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ**

**ಕರ್ನಾಟಕ ಸರ್ಕಾರ**

**ಫೆಬ್ರವರಿ 2020**

@ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

ಪ್ರಕಟನೆ 2020

**ಇವರಿಗಾಗಿ**

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
#542, 5ನೇ ಮಹಡಿ, 2ನೇ ಹಂತ
ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀಧಿ
ಬೆಂಗಳೂರು – 560001

**ಇವರಿಂದ**

ಔಟ್‌ರಿಚ್ ಅಸೋಸಿಯೇಷನ್ ಆಫ್ ವಾಲೆಂಟಿಯರ್ಸ್ ಫಾರ್ ರೂರಲ್ ಡೆವಲಪ್‌ಮೆಂಟ್
#205, ಎಚ್.ಬಿ.ಆರ್. ಲೇ ಔಟ್, 1ನೇ ಹಂತ ಬಡಾವಣೆ
2ನೇ ಬ್ಲಾಕ್, 80 ಅಡಿ ರಸ್ತೆ, ಬೆಂಗಳೂರು – 560043

**ಟೈಪ್‌ಸೆಟ್ ಮತ್ತು ಮುದ್ರಣ**

ನ್ಯಾಷನಲ್ ಪ್ರಿಂಟಿಂಗ್ ಪ್ರೆಸ್
#580, ಕೆ.ಆರ್. ಗಾರ್ಡನ್
ಕೋರಮಂಗಲ
ಬೆಂಗಳೂರು – 560095

# ಮುನ್ನುಡಿ

ವೈಯಕ್ತಿಕ ಶುಚಿತ್ವವನ್ನು ಕಾಪಾಡುವ ಅಭ್ಯಾಸಗಳು ಅಂಚಿನಲ್ಲಿರುವ ಗುಂಪುಗಳ ಅನೇಕ ಮಕ್ಕಳಲ್ಲಿ ಅಸ್ತಿತ್ವದಲ್ಲಿ ಇಲ್ಲದಿರುವುದೇ ಸೋಂಕು ತಗಲುವ ರೋಗಗಳು ಹರಡಲು ಹಾಗೂ ಮಕ್ಕಳ ಸಮಗ್ರ ಅಭಿವೃದ್ಧಿ ಆಗದಿರಲು ಕಾರಣವಾಗುವಂಥವು. ಮಕ್ಕಳಲ್ಲಿ ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡುವ ಉದ್ದೇಶದಿಂದ ಸಮಾಜ ಕಲ್ಯಾಣ ಇಲಾಖೆ "ಶುಚಿ ಸಂಭ್ರಮ ಕಿಟ್ ಯೋಜನೆ"ಯನ್ನು ಜಾರಿಗೆ ತಂದಿದ್ದು, ಈ ಕಿಟ್‌ಗಳನ್ನು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿರುವ ನಿವಾಸಿಗಳಿಗೆ ಒದಗಿಸುವ ಜವಾಬ್ದಾರಿಯನ್ನು ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ ಸಂಸ್ಥೆಗೆ 2015-16 ರಿಂದ ವಹಿಸಿದೆ. ಈ ಯೋಜನೆಯ ಪರಿಣಾಮಕತ್ವವನ್ನು ಮೌಲ್ಯಮಾಪನ ಮಾಡುವ ಜವಾಬ್ದಾರಿಯನ್ನು ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರವು (KEA**),** ಔಟ್‌ರಿಚ್ ಸಂಸ್ಥೆಗೆ **(**KEA ಯಿಂದ empanel ಆಗಿರುವ ಸಂಸ್ಥೆ) ವಹಿಸಿತ್ತು.

ಈ ಅಧ್ಯಯನ ಪ್ರಾಥಮಿಕ ಮತ್ತು ಅನುಷಂಗಿಕ ಮಾಹಿತಿಗಳೆರಡನ್ನೂ ಒಳಗೊಂಡಿದೆ. ಪ್ರಾಥಮಿಕ ಮಾಹಿತಿಯ ಸಂಗ್ರಹಣೆಗಾಗಿ, ಕರ್ನಾಟಕ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಿಂದ ಆಯ್ದ ಒಂಬತ್ತು ಜಿಲ್ಲೆಗಳಲ್ಲಿರುವ 262 ಮೆಟ್ರಿಕ್ ಪೂರ್ವ ಮತ್ತು 101 ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿರುವ 7600 ವಿದ್ಯಾರ್ಥಿಗಳನ್ನು ಮಾದರಿಯನ್ನಾಗಿ ಆಯ್ಕೆ ಮಾಡಲಾಗಿತ್ತು. ಈ ಅಧ್ಯಯನದ ಪ್ರಮುಖ ಫಲಿತಾಂಶಗಳೆಂದರೆ-ವೈಯಕ್ತಿಕ ನೈರ್ಮಲ್ಯದ ಬಗ್ಗೆ ವಿದ್ಯಾರ್ಥಿಗಳ ಹೆಚ್ಚಿರುವ ಅರಿವು (94.2**%),** ಕಿಟ್‌ಗಳು ಕ್ರಮಬದ್ಧವಾಗಿ ವಸತಿನಿಲಯಗಳಿಗೆ ಸರಬರಾಜಾಗುತ್ತಿರುವುದು, ಆರೋಗ್ಯದ ಬಗ್ಗೆ ಹೆಚ್ಚುತ್ತಿರುವ ಅರಿವಿನ ಕಾರಣದಿಂದಾಗಿ ಕಡಿಮೆಯಾಗುತ್ತಿರುವ ವೈದ್ಯರ ಭೇಟಿ ಹಾಗೂ ಸಾಮಾನ್ಯ ಆರೋಗ್ಯ ಸ್ಥಿತಿ ಉತ್ತಮಗೊಂಡಿರುವುದು. ನೈರ್ಮಲ್ಯದ ಬಗೆಗಿನ ಅರಿವು ಮಕ್ಕಳಿಂದ ಅವರ ಕುಟುಂಬಗಳಿಗೂ ಹರಡಿರುವುದು ಅಧ್ಯಯನದಿಂದ ಹೊರಹೊಮ್ಮಿರುವ ಮತ್ತೊಂದು ಗಮನಾರ್ಹವಾದ ಅಂಶ. ಈ ಅಧ್ಯಯನ ಮಾಡಿರುವ ಪ್ರಮುಖ ಶಿಫಾರಸ್ಸುಗಳೆಂದರೆ- ಕಿಟ್‌ನಲ್ಲಿರುವ ಸೋಪು ಮತ್ತು ಎಣ್ಣೆಯ ಪ್ರಮಾಣವನ್ನು ಹೆಚ್ಚಿಸುವುದು, ಹಾಗೆಯೇ ಟಾಲ್ಕಂ ಪೌಡರ್, ಶಾಂಪೂ, ಮೆಡಿಕೇರ್ ಮುಂತಾದ ವಸ್ತುಗಳನ್ನು ಹೊಸದಾಗಿ ಸೇರ್ಪಡೆ ಮಾಡುವುದು, ಆರೋಗ್ಯ ತಪಾಸಣಾ ಕ್ಯಾಂಪುಗಳನ್ನು ಕ್ರಮಬದ್ಧವಾಗಿ ಆಯೋಜಿಸುವುದು, 104 ಆರೋಗ್ಯ ಸಹಾಯವಾಣಿಯ ಬಗ್ಗೆ ವಸತಿನಿಲಯಗಳ ನಿವಾಸಿಗಳಿಗೆ ಮಾಹಿತಿ ನೀಡುವುದು, ಕಿಟ್‌ನಲ್ಲಿರುವ ವಸ್ತುಗಳ ಗುಣಮಟ್ಟವನ್ನು ಆಗಿಂದಾಗ್ಗೆ ಪರಿಶೀಲಿಸುವುದು**,** ವಸತಿನಿಲಯಗಳ ಮೌಲಸೌಕರ್ಯ ಸ್ಥಿತಿಯನ್ನು ಉತ್ತಮಗೊಳಿಸುವುದು ಹಾಗೂ ಶುಚಿ ಸಂಭ್ರಮ ಕಿಟ್ ಯೋಜನೆಯನ್ನು ಪರಿವೀಕ್ಷಣೆಗೆ ಒಳಪಡಿಸುವುದು.

ಪ್ರಸಕ್ತ ಅಧ್ಯಯನದ ಫಲಿತಾಂಶಗಳು ಹಾಗೂ ಶಿಫಾರಸ್ಸುಗಳು ಸರ್ಕಾರ ಮತ್ತು ಸಮಾಜ ಕಲ್ಯಾಣ ಇಲಾಖೆಗಳಿಗೆ, ಕಿಟ್ ಯೋಜನೆಯಲ್ಲಿ ಸೂಕ್ತ ಬದಲಾವಣೆಗಳನ್ನು ತರಲು ಹಾಗೂ ಈ ಯೋಜನೆಯ ವಿನ್ಯಾಸದಲ್ಲಿ ಮಾರ್ಪಾಡುಗಳನ್ನು ಮಾಡಿ, ಭವಿಷ್ಯದಲ್ಲಿ ಅದು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ನೆರವಾಗುತ್ತವೆ ಎಂದು ಆಶಿಸುತ್ತೇನೆ.

ಈ ಅಧ್ಯಯನಕ್ಕೆ ಕರ್ನಾಟಕ ಸರ್ಕಾರದ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಅಪರ ಮುಖ್ಯ ಕಾರ್ಯದರ್ಶಿಗಳು ಬೆಂಬಲ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಈ ವರದಿಯನ್ನು ಟೆಕ್ನಿಕಲ್ ಸಮಿತಿಯ 45ನೇ ಸಭೆಯಲ್ಲಿ ಅನುಮೋದಿಸಲಾಗಿದೆ. ಕರಡು ವರದಿಯ ಮೌಲ್ಯಮಾಪನವನ್ನು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಟೆಕ್ನಿಕಲ್ ಸಮಿತಿಯ ಸದಸ್ಯರು ಹಾಗೂ ಸ್ವತಂತ್ರ ಮೌಲ್ಯಮಾಪಕರು ಕೈಗೊಂಡಿದ್ದು, ಉಪಯುಕ್ತ ಸಲಹೆ-ಸೂಚನೆಗಳನ್ನು ನೀಡಿದ್ದಾರೆ. ಈ ಅಧ್ಯಯನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ನೆರವಾದ ಎಲ್ಲರ ಕೊಡುಗೆಗಳನ್ನೂ ನಾನು ಸ್ಮರಿಸುತ್ತೇನೆ.

ಪ್ರಧಾನ ಮೌಲ್ಯಮಾಪನ ಅಧಿಕಾರಿ<br>ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

# ಕೃತಜ್ಞತೆಗಳು

"ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಬಾಲಕರು ಮತ್ತು ಬಾಲಕಿಯರಿಗಾಗಿ ಜಾರಿಯಾಗಿರುವ ಶುಚಿ ಸಂಭ್ರಮ ಕಿಟ್ ಯೋಜನೆಯ ಮೌಲ್ಯಮಾಪನ" ಎಂಬ ಅಧ್ಯಯನದ ಜವಾಬ್ದಾರಿಯನ್ನು ಔಟ್‌ರಿಚ್ ಅಸೋಸಿಯೋಷನ್ ಆಫ್ ವಾಲೆಂಟಿಯರ್ಸ್ ಫಾರ್ ರೂರಲ್ ಡೆವಲಪ್‌ಮೆಂಟ್ ಸಂಸ್ಥೆಗೆ ವಹಿಸಿದ್ದಕ್ಕಾಗಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಕಾರ್ಯಕ್ರಮದ ಪರಿಣಾಮಕತ್ವವನ್ನು ಮೌಲ್ಯಮಾಪನ ಮಾಡುವುದೇ ಈ ಅಧ್ಯಯನದ ಪ್ರಮುಖ ಗುರಿಯಾಗಿತ್ತು. ಈ ಅಧ್ಯಯನದ ಪ್ರಧಾನ ಉದ್ದೇಶಗಳೆಂದರೆ ವಸತಿನಿಲಯಗಳ ನಿವಾಸಿಗಳಲ್ಲಿ ಶುಚಿ ಸಂಭ್ರಮ ಕಿಟ್ ಯೋಜನೆಯನ್ನು ಕುರಿತ ಅರಿವು, ಈ ಯೋಜನೆಯ ಉಪಯೋಗ ಮತ್ತು ಪರಿಣಾಮಕತ್ವದ ಸ್ವರೂಪ, ಫಲಾನುಭವಿಗಳ ಮತ್ತು ಅವರ ಕುಟುಂಬಗಳ ಮೇಲೆ ಯೋಜನೆಯ ಪ್ರಭಾವ, ನೈರ್ಮಲ್ಯವನ್ನು ಕಾಪಾಡುವ ದೃಷ್ಟಿಯಿಂದ ನೀಡಿರುವ ಕಿಟ್ಟನ್ನು ಕುರಿತಂತೆ ವಿದ್ಯಾರ್ಥಿಗಳ ಸಮಾಧಾನದ ಮಟ್ಟ, ಯೋಜನೆಯ ಕಾರ್ಯನಿರ್ವಹಣೆ ಹಾಗೂ ಕಿಟ್‌ಗಳನ್ನು ಪಡೆದು ವಿತರಿಸುವಲ್ಲಿ ಎದುರಾಗುವ ಸವಾಲುಗಳು – ಇವೇ ಮುಂತಾದ ವಿಚಾರಗಳನ್ನು ಪರಿಶೀಲಿಸುವುದೇ ಆಗಿತ್ತು.

ಈ ಅಧ್ಯಯನವನ್ನು ಯಶಸ್ವಿಯಾಗಿ ಸಂಪೂರ್ಣಗೊಳಿಸಲು ಬೆಂಬಲ ಹಾಗೂ ಭಾಗವಹಿಸುವಿಕೆಯ ಅನುಕೂಲವನ್ನು ನಮಗೆ ನೀಡಿದವರು ಸಮಾಜ ಕಲ್ಯಾಣ ಇಲಾಖೆಯ ಪ್ರತಿನಿಧಿಗಳು, ವಸತಿನಿಲಯಗಳ ನಿಲಯಪಾಲಕರು, ಯೋಜನೆಯ ವಿದ್ಯಾರ್ಥಿ ಫಲಾನುಭವಿಗಳು, ಪ್ರಧಾನ ಸಂಶೋಧಕರು, ಪ್ರಧಾನ ಸಂಶೋಧನಾ ತಂಡ, ಸಂಶೋಧನಾ ಸಹಾಯಕರು, ಮಾಹಿತಿ ವಿಶ್ಲೇಷಕರು ಹಾಗೂ ಔಟ್‌ರಿಚ್ ಸಂಸ್ಥೆಯ ಸಿಬ್ಬಂದಿ ವರ್ಗ. ವಿಶೇಷವಾಗಿ ನಮ್ಮ ಕೃತಜ್ಞತೆಗಳನ್ನು ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ನಿಲಯಪಾಲಕರು-ಇವರಿಗೆ ಸಲ್ಲಿಸುತ್ತೇನೆ. ಈ ಅಧ್ಯಯನವನ್ನು ಬೆಂಬಲಿಸಿದ ಎಲ್ಲರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಎನ್.ಡಿ. ತಿವಾರಿ **IFS**(ನಿವೃತ್ತ)
ಕಾರ್ಯನಿರ್ವಾಹಕ ನಿರ್ದೇಶಕರು
ಔಟ್‌ರಿಚ್ ಅಸೋಸಿಯೇಷನ್ ಆಫ್ ವಾಲೆಂಟಿಯರ್ಸ್
ಫಾರ್ ರೂರಲ್ ಡೆವಲಪ್‌ಮೆಂಟ್
ಬೆಂಗಳೂರು

# ಪರಿವಿಡಿ

ಪುಟ ಸಂಖ್ಯೆ


**1. ಕಾರ್ಯನಿರ್ವಾಹಕ ಸಾರಾಂಶ** 1

a. ಅಧ್ಯಯನದ ಹಿನ್ನಲೆ ಮತ್ತು ಉದ್ದೇಶಗಳು 1

b. ಶುಚಿ ಸಂಭ್ರಮ ಕಿಟ್ ಯೋಜನೆಯನ್ನು ಕುರಿತು 1

c. ಶುಚಿ ಸಂಭ್ರದ ಕಿಟ್‌ನಲ್ಲಿರುವ ವಸ್ತುಗಳು ಮತ್ತು ಪ್ರಮಾಣ 2

d. ಶುಚಿ ಸಂಭ್ರಮದ ಕಿಟ್ ತರಿಸಿಕೊಳ್ಳುವ ಮತ್ತು ವಿತರಿಸುವ ವಿಧಾನ 2

e. ಅಧ್ಯಯನದ ಮಾದರಿ 3

f. ಮಾಹಿತಿ ಸಂಗ್ರಹಣಾ ತಂತ್ರಗಳು 3

g. ಅಧ್ಯಯನದ ಪ್ರಮುಖ ಫಲಿತಾಂಶಗಳು 4

h. ಶಿಫಾರಸ್ಸುಗಳು 6

**2. ಅಧ್ಯಯನದ ಹಿನ್ನಲೆ** 9

a. ಸರ್ಕಾರದ ಮಧ್ಯಸ್ಥಿಕೆಯ ಅಗತ್ಯ 9

b. ಶುಚಿ ಸಂಭ್ರಮ ಕಿಟ್ ಯೋಜನೆ 10

c. ಶುಚಿಸಂಭ್ರಮ ಕಿಟ್: ಅದರೊಳಗಿರುವ ವಸ್ತುಗಳು ಮತ್ತು ಪ್ರಮಾಣ 11

d. ಶುಚಿ ಸಂಭ್ರಮ ಕಿಟ್ ಯೋಜನೆಯ ಧ್ಯೇಯೋದ್ದೇಶಗಳು 11

e. ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಆಡಳಿತಾತ್ಮಕ ವ್ಯವಸ್ಥೆ 12
ಉಸ್ತುವಾರಿ ವ್ಯವಸ್ಥೆ 13

f. ಶುಚಿಸಂಭ್ರಮ ಕಿಟ್ ವಿತರಣೆಯ ಪ್ರಸ್ತುತ ಸ್ಥಿತಿ 13

g. ಸಂಬಂಧಿಸಿದ ಸಾಹಿತ್ಯಾವಲೋಕನ 16

h. ಸಾಹಿತ್ಯಾಧ್ಯಯನದಿಂದ ಮೂಡಿ ಬಂದ ಪ್ರಮುಖಾಂಶಗಳು

**3. ಮೌಲ್ಯಮಾಪನ ವೈಧಾನಿಕತೆ** 19

a. ಅಧ್ಯಯನದ ಉದ್ದೇಶ ಮತ್ತು ಗುರಿಗಳು 19

b. ಸಂಶೋಧನಾ ವಿನ್ಯಾಸ 19

c. ಮಾದರಿ ಆಯ್ಕೆಯ ಪ್ರಕ್ರಿಯೆ 20

d. ಮಾಹಿತಿ ಸಂಗ್ರಹಣಾ ವಿಧಾನಗಳು 25

e. ಮಾಹಿತಿ ಸಂಗ್ರಹಣಾ ಪ್ರಕ್ರಿಯೆ 26

f. ಬದಲಾವಣೆಯ ಸಿದ್ಧಾಂತ: ಅಧ್ಯಯನದ ಚೌಕಟ್ಟು 26

g. ಮಾಹಿತಿಯ ವಿಶ್ಲೇಷಣೆ 27

**4. ಮೌಲ್ಯಮಾಪನ ಅಧ್ಯಯನದ ಫಲಿತಾಂಶಗಳು** 28

a. ಶುಚಿಸಂಭ್ರಮ ಕಿಟ್‌ನ ಬಳಕೆ ಹಾಗೂ ವೈಯಕ್ತಿಕ ನೈರ್ಮಲ್ಯವನ್ನು ಕುರಿತಂತೆ ವಿದ್ಯಾರ್ಥಿಗಳ ಅರಿವಿನ ಮಟ್ಟ ಹಾಗೂ ಗ್ರಹಿಕೆ 28

b. ವಿದ್ಯಾರ್ಥಿಗಳಲ್ಲಿ ವೈಯಕ್ತಿಕ ನೈರ್ಮಲ್ಯಕ್ಕೆ ಸಂಬಂಧಿಸಿದ ಅಭ್ಯಾಸಗಳು 31

c. ಋತುಚಕ್ರದ ನೈರ್ಮಲ್ಯಕ್ಕೆ ಸಂಬಂಧಿಸಿದ ಅಭ್ಯಾಸಗಳು 33

d. ಮೆಟ್ರಿಕ್ ನಂತರದ ವಸತಿನಿಲಯಗಳ ವಿದ್ಯಾರ್ಥಿಗಳಿಗೆ ಸುಚಿ ಸಂಭ್ರಮ ಕಿಟ್ ಒದಗಿಸುವ ಅಗತ್ಯತೆಯ ಬಗ್ಗೆ 34

e. ಕಿಟ್‌ನಲ್ಲಿರುವ ವಸ್ತುಗಳ ಪ್ರಮಾಣದ ಬಗ್ಗೆ ವಿದ್ಯಾರ್ಥಿಗಳಲ್ಲಿ ಕಂಡು ಬಂದಂಥ ತೃಪ್ತಿಯ ಮಟ್ಟ 34

f. ಶುಚಿ ಸಂಭ್ರಮ ಕಿಟ್ ವಿತರಣೆಯಲ್ಲಿನ ಕ್ರಮಬದ್ಧತೆ ಹಾಗೂ ಪ್ರತಿ ತಿಂಗಳೂ ಸರಬರಾಜಿಗೆ ತಗಲುವ ಸರಾಸರಿ ಸಮಯ 37

g. ಕಾರ್ಯಕ್ರಮದ ತಲುಪುವಿಕೆ (Reach): ದುರುಪಯೋಗದ ಪ್ರಕರಣಗಳೇನಾದರೂ ಇವೆಯೇ **?** 38

h. ದಾಖಲಿಕೆ ಮತ್ತು ಉಸ್ತುವಾರಿ ವ್ಯವಸ್ಥೆ 39

i. ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳ ಮೇಲೆ ಶುಚಿ ಸಂಭ್ರಮ ಕಿಟ್ ಯೋಜನೆಯ ಪ್ರಭಾವ 41

**5. ಶಿಫಾರಸ್ಸುಗಳು** 43

**6. ಅನುಬಂಧ** 46

## ಕೋಷ್ಟಕಗಳ ಪಟ್ಟಿ

**ಕೋಷ್ಟಕ 1**: ಕಿಟ್‌ನಲ್ಲಿ ಹಾಲಿ ಇರುವ ವಸ್ತುಗಳ ಸಂಖ್ಯೆ ಮತ್ತು ಪ್ರಮಾಣ ಮತ್ತು ಈಗ ಶಿಫಾರಸ್ಸು ಮಾಡಿರುವುದು 6

**ಕೋಷ್ಟಕ 2**: ಅಧ್ಯಯನಕ್ಕೆ ಒಳಪಟ್ಟ ವಸತಿನಿಲಯಗಳ ಸಂಖ್ಯೆ 21

**ಕೋಷ್ಟಕ 3**: ವಸತಿನಿಲಯಗಳ ಲಿಂಗ ಹಾಗೂ ಪ್ರದೇಶವಾರು ಹಂಚಿಕೆ 22

**ಕೋಷ್ಟಕ 4**: ಮಾದರಿ ವಿದ್ಯಾರ್ಥಿಗಳು ಜಿಲ್ಲೆ, ವಸತಿನಿಲಯದ ಬಗೆ ಮತ್ತು ಲಿಂಗವಾರು ಹಂಚಿಕೆ 24

**ಕೋಷ್ಟಕ 5:** ವೈಯಕ್ತಿಕ ನೈರ್ಮಲ್ಯವನ್ನು ಕುರಿತಂತೆ ವಿದ್ಯಾರ್ಥಿಗಳ ಅರಿವಿನ ಮಟ್ಟದ ಬಗ್ಗೆ ನಿಲಯಪಾಲಕರ ಅಭಿಪ್ರಾಯ 29

**ಕೋಷ್ಟಕ 6:** ಅಧ್ಯಯನ ಜಿಲ್ಲೆಗಳಲ್ಲಿ ಶುಚಿ ಸಂಭ್ರಮ ಕಿಟ್‌ನಲ್ಲಿ ಒದಗಿಸಿರುವ ವಸ್ತುಗಳ ಪ್ರಮಾಣದ ಬಗ್ಗೆ ಕಂಡು ಬರುವ ತೃಪ್ತಿಯ ಮಟ್ಟ 35

**ಕೋಷ್ಟಕ 7**: ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ವಿದ್ಯಾರ್ಥಿಗಳಿಂದ ಹೆಚ್ಚುವರಿ/ಇತರ ಬ್ರಾಂಡುಗಳ ಪ್ರಸಾಧನಗಳ ಕೊಳ್ಳುವಿಕೆ 36

**ಕೋಷ್ಟಕ 8**: ಅಧ್ಯಯನ ಜಿಲ್ಲೆಗಳಲ್ಲಿ ಶುಚಿ ಸಂಭ್ರಮ ಕಿಟ್‌ಗಳ ಸರಬರಾಜಿನಲ್ಲಿ ಕ್ರಮಬದ್ಧತೆ**:** ನಿಲಯಪಾಲಕರ ನೋಟಗಳು 38

**ಕೋಷ್ಟಕ 9:** ಕಿಟ್‌ಗಳನ್ನು ಪಡೆಯುವ ಮತ್ತು ವಿತರಿಸುವ ಪ್ರಕ್ರಿಯೆಗಳ ದಾಖಲಿಕೆ 39

**ಕೋಷ್ಟಕ 10:** ಮೇಲಧಿಕಾರಿಗಳಿಂದ ವಸತಿನಿಲಯಗಳ ಭೇಟಿಯ ಪರಿ 40

**ಕೋಷ್ಟಕ 11**: ಕಿಟ್‌ನಲ್ಲಿ ಹಾಲಿ ಇರುವ ವಸ್ತುಗಳ ಸಂಖ್ಯೆ ಮತ್ತು ಪ್ರಮಾಣ ಮತ್ತು ಈಗ ಶಿಫಾರಸ್ಸು ಮಾಡಿರುವುದು 43

# ಶುಚಿ ಸಂಭ್ರಮ

# ಕಾರ್ಯನಿರ್ವಾಹಕ ಸಾರಾಂಶ

## ಅಧ್ಯಯನದ ಹಿನ್ನಲೆ ಮತ್ತು ಉದ್ದೇಶಗಳು

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಶುಚಿ ಸಂಭ್ರಮ ಕಿಟ್ ಯೋಜನೆ ಕುರಿತಂತೆ ಮೌಲ್ಯಮಾಪನದ ಅಧ್ಯಯನ ಕೈಗೊಳ್ಳುವ ಜವಾಬ್ದಾರಿಯನ್ನು ಔಟ್‌ರಿಚ್ ಅಸೋಸಿಯೇಷನ್ ಆಫ್ ವಾಲೆಂಟಿಯರ್ಸ್ ಫಾರ್ ರೂರಲ್ ಡೆವಲಪ್‌ಮೆಂಟ್, ಬೆಂಗಳೂರು, ಇವರಿಗೆ ವಹಿಸಿತು. ಈ ಅಧ್ಯಯನದ ಶೀರ್ಷಿಕೆ **"ಕರ್ನಾಟಕದಲ್ಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಶುಚಿ ಸಂಭ್ರಮದ ಕಿಟ್‌ನ ಮೌಲ್ಯಮಾಪನ"** ಎಂಬುದಾಗಿದ್ದು, ಅದು ಕೆಳಕಂಡ ಪ್ರಾಥಮಿಕ ಉದ್ದೇಶಗಳನ್ನು ಹೊಂದಿತ್ತು:

1. ಫಲಾನುಭವಿಗಳಲ್ಲಿ ವೈಯಕ್ತಿಕ ಶುಚಿತ್ವವನ್ನು ಕುರಿತ ಅರಿವು, ಗ್ರಹಿಕೆ ಮತ್ತು ಅಭ್ಯಾಸಗಳ ಬಗ್ಗೆ ತಿಳಿಯುವುದು.
2. ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳ ವಿದ್ಯಾರ್ಥಿಗಳಲ್ಲಿ ಈ ಯೋಜನೆಯನ್ನು ಕುರಿತು ಇರುವ ಜ್ಞಾನವನ್ನು ಗ್ರಹಿಸುವುದು.
3. ಫಲಾನುಭವಿಗಳು ಮತ್ತು ಅವರ ಕುಟುಂಬಗಳಿಗೆ ಈ ಯೋಜನೆಯ ಉಪಯುಕ್ತತೆ ಹಾಗೂ ಅದರ ಪ್ರಭಾವದ ಪ್ರಮಾಣವನ್ನು ನಿರ್ಣಯಿಸುವುದು.
4. ವೈಯಕ್ತಿಕ ಶುಚಿತ್ವ ಕಾಪಾಡಲು ಒದಗಿಸಲಾಗಿರುವ ಈ ಕಿಟ್ ಫಲಾನುಭವಿಗಳಿಗೆ ಎಷ್ಟು ಸಂತೃಪ್ತಿ ತಂದಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು.
5. ಶುಚಿ ಸಂಭ್ರಮ ಕಿಟ್ ಯೋಜನೆಯ ಮೇಲುಸ್ತುವಾರಿ ವ್ಯವಸ್ಥೆಯನ್ನು ಪರಿಶೀಲಿಸುವುದು.
6. ಈ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಕಿಟ್‌ಗಳನ್ನು ತರಿಸುವ ಮತ್ತು ವಿವಿಧ ಫಲಾನುಭವಿಗಳಿಗೆ ವಿತರಿಸುವುದನ್ನು ಒಳಗೊಂಡಂತೆ ಎದುರಾಗಬಹುದಾದ ಸಮಸ್ಯೆಗಳು ಹಾಗೂ ಸವಾಲುಗಳನ್ನು ಗುರುತಿಸುವುದು.
7. ಈ ಯೋಜನೆಯು ಉದ್ದೇಶಿತ ಗುರಿಯನ್ನು ಸಾಧಿಸಲು ಹಾಗೂ ಇನ್ನಷ್ಟು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಹಕಾರಿಯಾಗುವಂತೆ ಸೂಕ್ತ ಸಲಹೆಗಳನ್ನು ನೀಡುವುದು ಹಾಗೂ ಸಮರ್ಪಕವಾದ ಮತ್ತು ಸಾಧ್ಯವಾಗಬಲ್ಲ ಪರ್ಯಾಯ ಮಾದರಿಗಳನ್ನು ಗುರುತಿಸುವುದು.

## ಶುಚಿ ಸಂಭ್ರಮ ಕಿಟ್ ಯೋಜನೆಯನ್ನು ಕುರಿತು

ರಾಜ್ಯದಲ್ಲಿನ ವಸತಿನಿಲಯಗಳಲ್ಲಿ ವಾಸಿಸುವ ವಿದ್ಯಾರ್ಥಿಗಳಲ್ಲಿ ವೈಯಕ್ತಿಕ ಸ್ವಚ್ಛತೆಯ ಕಾಪಾಡುವಿಕೆಯನ್ನು ಪ್ರೋತ್ಸಾಹಿಸಲು ಮತ್ತು ಅಗತ್ಯ ಸಾಮಗ್ರಿಗಳನ್ನು ಒದಗಿಸುವುದರ ಜೊತೆಗೆ ಅದರ ಬಗ್ಗೆ ಅರಿವನ್ನು ಮೂಡಿಸುವ ಉದ್ದೇಶದೊಂದಿಗೆ 1994ರಲ್ಲಿ ಕರ್ನಾಟಕ ರಾಜ್ಯದಲ್ಲಿ ಶುಚಿ ಸಂಭ್ರಮ ಕಿಟ್ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿದ್ದು 2015-16ರ ವರೆಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಮಾತ್ರ ಈ ಯೋಜನೆ ಒಳಗೊಂಡಿತ್ತು. 2015-16ರ ನಂತರ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ ಎಲ್ಲಾ ವಸತಿ ಶಾಲೆಗಳಿಗೂ ಇದನ್ನು ವಿಸ್ತರಿಸಲಾಯಿತು. 2016-17 ರಿಂದೀಚೆಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳನ್ನೂ ಈ ಯೋಜನೆಯಡಿ ತರಲಾಯಿತು. ಪ್ರಸ್ತುತ ಈ ಕಿಟ್‌ಗಳನ್ನು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಸಂಸ್ಥೆಗಳು, ಮೊರಾರ್ಜಿ ದೇಸಾಯಿ ಮತ್ತು ನವೋದಯ ಶಾಲೆ ಮೊದಲಾದ, ಇಲಾಖೆಯ ವತಿಯಿಂದ ನಡೆಸಲಾಗುತ್ತಿರುವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ.

ವಿದ್ಯಾರ್ಥಿಗಳಿಗೆ ಸ್ವಚ್ಛತೆಯ ಕಿಟ್‌ಗಳನ್ನು ನೀಡುವ ಹೊಣೆಗಾರಿಕೆಯನ್ನು **ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿ.** ಇವರಿಗೆ ನೀಡಲಾಗಿದೆ.

## ಶುಚಿ ಸಂಭ್ರದ ಕಿಟ್‌ನಲ್ಲಿರುವ ವಸ್ತುಗಳು ಮತ್ತು ಪ್ರಮಾಣ

ಶುಚಿ ಸಂಭ್ರಮ ಕಿಟ್ ಅಥವಾ 'ವೇವ್ ಕಿಟ್' ಕೆಳಕಂಡ ವಸ್ತುಗಳನ್ನು ಹೊಂದಿದ್ದು ಪ್ರತಿ ವಸ್ತುವಿನ ಮುಂದೆ ಅದರ ಪ್ರಮಾಣವನ್ನು ತಿಳಿಸಲಾಗಿದೆ.

| | **ವಸ್ತುಗಳು** | **ಮೊತ್ತ** |
|---|---|---|
| **ಬಾಲಕಿಯರು** | 1. ಮೈಸೂರು ಸ್ಯಾಂಡಲ್ ಸಾಬೂನು<br>2. ಮೈಸೂರು ಸ್ಯಾಂಡಲ್‌ನ ಕೊಬ್ಬರಿ ಎಣ್ಣೆ<br>3. ಮೈಸೂರು ಸ್ಯಾಂಡಲ್ ಪೌಡರ್<br>4. ಎಂ.ಡಿ.ಸಿ. ಡಿಟರ್ಜೆಂಟ್ ಸಾಬೂನು<br>5. ಅಜಂತಾ ಟೂತ್ ಪೇಸ್ಟ್ ಮತ್ತು ಬ್ರಷ್ | 75 ಗ್ರಾಂ, 1<br>100 ಎಂ.ಎಲ್ – 1<br>50 ಗ್ರಾಂ – 1<br>150 ಗ್ರಾಂ – 2<br>ಅಜಂತಾ ಟೂತ್ ಪೇಸ್ಟ್ – 50 ಗ್ರಾಂ 1<br>ಅಜಂತಾ ಟೂತ್ ಬ್ರಷ್ -1 |
| **ಬಾಲಕರು** | 1. ಮೈಸೂರು ಸ್ಯಾಂಡಲ್ ಸಾಬೂನು<br>2. ಮೈಸೂರು ಸ್ಯಾಂಡಲ್‌ನ ಕೊಬ್ಬರಿ ಎಣ್ಣೆ<br>3. ಎಂ.ಡಿ.ಸಿ. ಡಿಟರ್ಜೆಂಟ್ ಸಾಬೂನು<br>4. ಅಜಂತಾ ಟೂತ್ ಪೇಸ್ಟ್ ಮತ್ತು ಬ್ರಷ್ | 75 ಗ್ರಾಂ, 1<br>100 ಎಂ.ಎಲ್ – 1<br>50 ಗ್ರಾಂ – 1<br>150 ಗ್ರಾಂ – 2<br>ಅಜಂತಾ ಟೂತ್ ಪೇಸ್ಟ್ – 50 ಗ್ರಾಂ 1<br>ಅಜಂತಾ ಟೂತ್ ಬ್ರಷ್ - 1 |

## ಶುಚಿ ಸಂಭ್ರಮದ ಕಿಟ್ ತರಿಸಿಕೊಳ್ಳುವ ಮತ್ತು ವಿತರಿಸುವ ವಿಧಾನ

ಶುಚಿ ಸಂಭ್ರಮದ ಕಿಟ್ ತರಿಸಿಕೊಳ್ಳುವ ಮತ್ತು ವಿತರಿಸುವ ವಿಧಾನವನ್ನು ಈ ಕೆಳಗೆ ತೋರಿಸಲಾಗಿದೆ.

| | | |
|---|---|---|
| ಪ್ರತಿ ಎರಡು/ಮೂರು ತಿಂಗಳಿಗೊಮ್ಮೆ ವಸತಿನಿಲಯದ ನಿಲಯಪಾಲಕರು, ವಸ್ತುಗಳ ಬೇಡಿಕೆ ಪಟ್ಟಿಯನ್ನು ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರಿಗೆ ಸಲ್ಲಿಸುತ್ತಾರೆ. | ಸಹಾಯಕ ನಿರ್ದೇಶಕರು ಒಂದು ಸಮಗ್ರವಾದ ಬೇಡಿಕೆ ಪಟ್ಟಿಯನ್ನು, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆಗೆ ಕಳುಹಿಸುವರು. | ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು, ಎಲ್ಲ ಬೇಡಿಕೆ ಪಟ್ಟಿಗಳನ್ನು ಅನುಮೋದಿಸುವರು, ಹಾಗೂ ಹಣಕಾಸಿನ ವರ್ಷದ ಆರಂಭದಲ್ಲಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಇವರಿಗೆ ಕಳುಹಿಸುವರು. |

ಒಮ್ಮೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರಿಂದ ಅನುಮೋದನೆಯ ಪತ್ರ ದೊರೆತಾದ ಮೇಲೆ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ ಇವರು ಕಿಟ್‌ಗಳನ್ನು ತಾಲ್ಲೂಕುಗಳಿಗೆ ಕಳುಹಿಸುತ್ತಾರೆ ಮತ್ತು ತಾಲ್ಲೂಕುಗಳಿಂದ ಆಯಾ ವಸತಿನಿಲಯಪಾಲಕರಿಂದ ಬಂದಿರುವ ಪಟ್ಟಿಗೆ ಬೇಡಿಕೆ ಅನುಗಣವಾಗಿ ನಿಲಯಪಾಲಕರಿಗೆ ವಿತರಿಸಲಾಗುತ್ತದೆ.

ವರ್ಷದಲ್ಲಿ ಹತ್ತು ತಿಂಗಳು ಕಿಟ್ಟನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ಶುಚಿ ಸಂಭ್ರಮ ಕಿಟ್ ವಿತರಣಾ ಪುಸ್ತಕದಲ್ಲಿ ಪ್ರತಿ ವಿದ್ಯಾರ್ಥಿಯ ಸಹಿಯನ್ನು ನಿಲಯಪಾಲಕರು ಪಡೆದು ನಿಲಯದ ಎಲ್ಲಾ ನಿವಾಸಿಗಳಿಗೆ ನೀಡುವರು. ತಿಂಗಳ ಮೊದಲ ವಾರದಲ್ಲಿ ಈ ಕಿಟ್ಟನ್ನು ನೀಡಲಾಗುವುದು ಹಾಗೂ ವಿದ್ಯಾರ್ಥಿಗಳು ಕಿಟ್‌ನಲ್ಲಿರುವ ವಸ್ತುಗಳನ್ನು ತಿಂಗಳು ಪೂರ್ತಿ ಬಳಸಬೇಕಾಗುತ್ತದೆ. ಒಂದು ವೇಳೆ ಬಳಸಲಾಗುತ್ತಿದ್ದ ವಸ್ತುಗಳು ಖಾಲಿಯಾದರೆ, ಅವರು ಮುಂದಿನ ತಿಂಗಳವರೆಗೂ ಕಾಯಬೇಕು ಇಲ್ಲವೇ ತಮ್ಮ ಸ್ವಂತ ಖರ್ಚಿನಲ್ಲಿ ಖರೀದಿಸಬೇಕಾಗುತ್ತದೆ.

## ವೈಧಾನಿಕತೆ

## ಅಧ್ಯಯನದ ಮಾದರಿ

ಮೌಲ್ಯಮಾಪನ ಅಧ್ಯಯನವನ್ನು ಕರ್ನಾಟಕ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ, ಪ್ರತಿ ವಿಭಾಗಕ್ಕೆ ಎರಡು ಜಿಲ್ಲೆಗಳಂತೆ ಎಂಟು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಪ್ರತಿ ವಿಭಾಗದಲ್ಲಿ ಒಂದು ಜಿಲ್ಲೆಯನ್ನು ಪರಿಶಿಷ್ಟ ಜಾತಿ ಜಿಲ್ಲೆಯೆಂದು ಮತ್ತೊಂದನ್ನು ಪರಿಶಿಷ್ಟ ಪಂಗಡದ ಜಿಲ್ಲೆಯೆಂದು ಆಯ್ಕೆಮಾಡಲಾಯಿತು. ವಲಸೆಯ ಪರಿಣಾಮವನ್ನು ಅಧ್ಯಯನ ಮಾಡಲು ಬಳ್ಳಾರಿ ಜಿಲ್ಲೆಯನ್ನು ಆಯ್ಕೆ ಮಾಡಲಾಗಿ, ಅಧ್ಯಯನ ರಾಜ್ಯದ ಒಟ್ಟು ಒಂಬತ್ತು ಜಿಲ್ಲೆಗಳಲ್ಲಿ ನಡೆದಿದೆ.

ಈ ಅಧ್ಯಯನವು 262 ಮೆಟ್ರಿಕ್ ಪೂರ್ವ ಮತ್ತು 101 ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ವಾಸಿಸುವ 7600 ವಿದ್ಯಾರ್ಥಿಗಳನ್ನು ಮಾದರಿಯಾಗಿ ಒಳಗೊಂಡಿತ್ತು. ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ (ಇಲ್ಲಿ 101 ಬಾಲಕಿಯರು ಮತ್ತು 221 ಬಾಲಕರು ನಿಯಂತ್ರಿತ ಗುಂಪಾಗಿ ಮಾದರಿಗೆ ಸೇರ್ಪಡೆಯಾಗಿದ್ದರು), ಮೆಟ್ರಿಕ್ ಪೂರ್ವ ವಸತಿನಿಲಯಗಳಲ್ಲಿ 869 ಪರಿಶಿಷ್ಟ ಜಾತಿಯ ಬಾಲಕಿಯರು ಮತ್ತು 3664 ಬಾಲಕರು ಹಾಗೂ 207 ಪರಿಶಿಷ್ಟ ಪಂಗಡಗಳ ಬಾಲಕಿಯರು ಮತ್ತು 455 ಬಾಲಕರು ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ಅನುಕ್ರಮವಾಗಿ 751 ಮತ್ತು 924 ಪರಿಶಿಷ್ಟ ಜಾತಿಯ ಬಾಲಕಿಯರು ಮತ್ತು ಬಾಲಕರು ಆಯ್ಕೆಯಾಗಿದ್ದಾರೆ. 185 ಪರಿಶಿಷ್ಟ ಪಂಗಡಗಳ ಬಾಲಕಿಯರು ಮತ್ತು 223 ಬಾಲಕರನ್ನು ಮೆಟ್ರಿಕ್ ನಂತರದ ವಸತಿನಿಲಯಗಳಿಂದ ಆಯ್ಕೆ ಮಾಡಲಾಗಿದೆ.

225 ನಿಲಯಪಾಲಕರು (ವಾರ್ಡನ್) ಹಾಗೂ ಸಮಾಜ ಕಲ್ಯಾಣ ಇಲಾಖೆಯ 49 ಅಧಿಕಾರಿಗಳು ಅಧ್ಯಯನದಲ್ಲಿ ಭಾಗವಹಿಸಿದ್ದರು. ಮೆಟ್ರಿಕ್ ಪೂರ್ವ ವಸತಿನಿಲಯಗಳ ಪೈಕಿ 22 ಹೆಣ್ಣು ಮಕ್ಕಳ ಹಾಗೂ 150 ಗಂಡು ಮಕ್ಕಳ ವಿದ್ಯಾರ್ಥಿ ನಿಲಯಗಳು ಗ್ರಾಮಾಂತರ ಪ್ರದೇಶದಲ್ಲಿದ್ದರೆ, 35 ಹೆಣ್ಣು ಮಕ್ಕಳ ಮತ್ತು 55 ಗಂಡುಮಕ್ಕಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ನಗರ ಪ್ರದೇಶದಲ್ಲಿದ್ದವು ಹಾಗೆಯೇ ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ಒಂದು ಹೆಣ್ಣು ಮಕ್ಕಳ, ಹಾಗೂ ಏಳು ಗಂಡುಮಕ್ಕಳ ವಿದ್ಯಾರ್ಥಿ ನಿಲಯಗಳು ಗ್ರಾಮಾಂತರ ಪ್ರದೇಶದಲ್ಲಿದ್ದರೆ, 45 ಹೆಣ್ಣು ಮಕ್ಕಳ ಮತ್ತು 48 ಗಂಡು ಮಕ್ಕಳ ವಿದ್ಯಾರ್ಥಿ ನಿಲಯಗಳು ನಗರ ಪ್ರದೇಶದಲ್ಲಿದ್ದವು.

## ಮಾಹಿತಿ ಸಂಗ್ರಹಣಾ ತಂತ್ರಗಳು

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ನೀಡಿರುವ ಉಲ್ಲೇಖದ ನಿಯಮಗಳಲ್ಲಿ (Terms of Reference-ToR) ಸೂಚಿತವಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದರೆ, 3 ಸಂದರ್ಶನ ಅನುಸೂಚಿಗಳನ್ನು (Interview Schedule) ಮತ್ತು ಒಂದು ಚರ್ಚಾ ಮಾರ್ಗಸೂಚಿಯನ್ನು ತಯಾರಿಸಲಾಯಿತು, ಅವುಗಳ ವಿವರಗಳು ಕೆಳಕಂಡಂತಿವೆ:

1. ಸಂದರ್ಶನ ಅನುಸೂಚಿ I- ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ
2. ಸಂದರ್ಶನ ಅನುಸೂಚಿ II – ವಸತಿನಿಲಯಗಳ ನಿಲಯಪಾಲಕರಿಗೆ
3. ಸಂದರ್ಶನ ಅನುಸೂಚಿ III – ಜಿಲ್ಲಾ ಮತ್ತು ರಾಜ್ಯ ಮಟ್ಟದ ಅಧಿಕಾರಿಗಳಿಗೆ

4. ಗುಣಾತ್ಮಕ ಮಾಹಿತಿಯ ಸಂಗ್ರಹಣೆಗಾಗಿ ಕೇಂದ್ರೀಕೃತ ಗುಂಪು ಸಂದರ್ಶನ (Focus Group Discussion) ಮತ್ತು ಆಳವಾದ ಸಂದರ್ಶನ ಮಾರ್ಗಸೂಚಿಗಳನ್ನು (Indepth Interview - IDI) ಬಳಸಿಕೊಳ್ಳಲಾಯಿತು.

ವಿದ್ಯಾರ್ಥಿಗಳು, ನಿಲಯಪಾಲಕರು ಹಾಗೂ ಇಲಾಖಾ ಅಧಿಕಾರಿಗಳೊಂದಿಗೆ ನಡೆಸಿದ ಕೇಂದ್ರೀಕೃತ ಗುಂಪು ಸಂದರ್ಶನಗಳು ಹಾಗೂ ಆಳವಾದ ಸಂದರ್ಶನಗಳ ಮೂಲಕ ಒಂಬತ್ತು (9) ಕ್ಷೇತ್ರ ಪರಿವೀಕ್ಷಕರನ್ನು (Investigators), ಒಳಗೊಂಡ ಸಂಶೋಧನಾ ತಂಡದಿಂದ ಮಾಹಿತಿ (ದತ್ತಾಂಶ) ಸಂಗ್ರಹಿಸಲಾಯಿತು. 41 ಕೇಂದ್ರೀಕೃತ ಸಂದರ್ಶನಗಳು ಹಾಗೂ 90 ಆಳವಾದ ಸಂದರ್ಶನಗಳನ್ನು ನಡೆಸಲಾಯಿತು, ಸಂದರ್ಶನಗಳು ಹಾಗೂ ಚರ್ಚೆಗಳನ್ನು ವಸತಿನಿಲಯಗಳಲ್ಲಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಕಛೇರಿಗಳಲ್ಲಿ ನಡೆಸಲಾಯಿತು.

## ಅಧ್ಯಯನದ ಪ್ರಮುಖ ಫಲಿತಾಂಶಗಳು

1. ಈ ಅಧ್ಯಯನಕ್ಕಾಗಿ ಸಂಪರ್ಕಸಿದ ಎಲ್ಲಾ ವಿದ್ಯಾರ್ಥಿಗಳು ಶುಚಿ ಸಂಭ್ರಮ ಕಿಟ್ ಯೋಜನೆಯನ್ನು ಕುರಿತು ವಸತಿನಿಲಯಗಳಿಗೆ ಸೇರಿದ ನಂತರವಷ್ಟೇ ತಿಳಿದುಕೊಂಡಿರುವುದು. ಬಹುತೇಕ ವಿದ್ಯಾರ್ಥಿಗಳು ಅಲ್ಲಿಗೆ ಬಂದು ಸೇರಿದ ನಂತರವಷ್ಟೇ ಕ್ರಮಬದ್ಧವಾಗಿ ಕಿಟ್‌ನಲ್ಲಿರುವ ವಸ್ತುಗಳನ್ನು ಬಳಸಲು ಆರಂಭಿಸಿರುವುದು. ರಾಯಚೂರು ಮತ್ತು ವಿಜಯಪುರ ಜಿಲ್ಲೆಗಳ ಮೆಟ್ರಿಕ್ ನಂತರದ ವಸತಿನಿಲಯಗಳನ್ನು ಹೊರತುಪಡಿಸಿದರೆ, ಉಳಿದ ಎಲ್ಲಾ ಜಿಲ್ಲೆಗಳಲ್ಲಿನ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ, ವೈಯಕ್ತಿಕ ಶುಚಿತ್ವಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡುವ ಪ್ರಮುಖ ವ್ಯಕ್ತಿಯೆಂದರೆ ನಿಲಯಪಾಲಕರು. ಈ ಎರಡು ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಹೇಳುವ ಹಾಗೆ, ಪೋಷಕರು ಪ್ರಧಾನ ಮಾಹಿತಿದಾರರು.
2. ವೈಯಕ್ತಿಕ ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಅರಿವಿನ ಮಟ್ಟ ಮೆಟ್ರಿಕ್ ಪೂರ್ವ ವಸತಿನಿಲಯಗಳಲ್ಲಿ ವಾಸಿಸುವ ವಿದ್ಯಾರ್ಥಿಗಳಿಗಿಂತ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಲ್ಲಿ ಅಧಿಕವಿತ್ತು. ಇದಕ್ಕೆ ಕಾರಣವೆಂದರೆ, ಅವರು ವಯಸ್ಸಿನಲ್ಲಿ ಹಿರಿಯರಾಗಿದ್ದರು, ಹಾಗೂ ಹೆಚ್ಚಿನ ಅರಿವು ಇದ್ದು, ಅದಕ್ಕಿಂತ ಮುಖ್ಯವಾಗಿ ಬಹುತೇಕ (ಶೇಕಡ 92.07%) ಮೆಟ್ರಿಕ್ ನಂತರದ ವಸತಿನಿಲಯಗಳು ನಗರ ಪ್ರದೇಶಗಳಲ್ಲಿ ಇದಿದ್ದರಿಂದ.
3. ಶುಚಿ ಸಂಭ್ರಮ ಯೋಜನೆಯಲ್ಲಿರುವ ಕೆಲವು ಪ್ರಮುಖ ವೈಯಕ್ತಿಕ ನೈರ್ಮಲ್ಯದ ಅಭ್ಯಾಸಗಳೆಂದರೆ: ಪ್ರತಿನಿತ್ಯ ಸ್ನಾನವನ್ನು ಮಾಡುವುದು, ಬಟ್ಟೆಗಳನ್ನು ದಿನಕ್ಕೆರೆಡು ಬಾರಿ ಬದಲಿಸುವುದು, ಹದಿನೈದು ದಿನಗಳಿಗೊಮ್ಮೆ ಉಗುರುಗಳನ್ನು ಕತ್ತರಿಸುವುದು, ಊಟದ ನಂತರ ಹಲ್ಲುಗಳನ್ನುಜ್ಜುವುದು ಮತ್ತು ಶೌಚಾಲಯವನ್ನು ಬಳಸಿದ ನಂತರ ಕೈಗಳನ್ನು ತೊಳೆಯುವುದು. ಬಾಲಕಿಯರಿಗೆ ಸಂಬಂಧಿಸಿದಂತೆ, ಋತುಚಕ್ರದ ಸಮಯದಲ್ಲಿ ತಮ್ಮನ್ನು ಶುಚಿಯಾಗಿಟ್ಟುಕೊಳ್ಳಬೇಕೆಂಬ ಅರಿವು ಹೆಚ್ಚಿದೆ. ಆದರೆ ಇದು ಸಮರ್ಪಕ ನೀರು ಹಾಗೂ ಸ್ಯಾನಿಟರಿ ಪ್ಯಾಡ್‌ಗಳ ಲಭ್ಯತೆಯನ್ನು ಅವಲಂಬಿಸಿದೆ.
4. ಆರೋಗ್ಯ ರಕ್ಷಣೆಯ ಮೇಲೆ ಬರಬಹುದಾದ ಸ್ವಂತ ಖರ್ಚು ಶೇಕಡ 48ರಷ್ಟು ಕಡಿಮೆಯಾಗಿದೆ. ಆರೋಗ್ಯ ರಕ್ಷಣೆಯ ಮೇಲೆ ಸ್ವಂತ ಖರ್ಚಿನ ಕಡಿತ ಅಧ್ಯಯನಕ್ಕೆ ಒಳಪಟ್ಟ ಎಲ್ಲಾ ವಸತಿನಿಲಯಗಳಲ್ಲೂ ಕಂಡುಬರುವಂಥ ಒಂದು ಪ್ರವೃತ್ತಿ.
5. ಶುಚಿ ಸಂಭ್ರಮ ಯೋಜನೆಯ ಅಡಿಯಲ್ಲಿ ಒದಗಿಸಲಾಗಿರುವ ಎಲ್ಲಾ ಪದಾರ್ಥಗಳನ್ನು ವಿದ್ಯಾರ್ಥಿಗಳೆಲ್ಲರೂ ಬಳಸುತ್ತಿರುವರು, ಆದರೆ ಒದಗಿಸಲಾಗಿರುವ ಸಾಮಗ್ರಿಗಳು ತಿಂಗಳಿಡೀ ಇರುವುದಿಲ್ಲವಾದ್ದರಿಂದ ಅವುಗಳ ಪ್ರಮಾಣ (quantity) ಹೆಚ್ಚಿಸುವ ಅವಶ್ಯಕತೆಯಿದೆ, ಅದರಲ್ಲೂ ವಿಶಿಷ್ಟವಾಗಿ ಸಾಬೂನು ಮತ್ತು ಟೂತ್‌ಪೇಸ್ಟ್. ಶೇಕಡ 75.75 ಮೆಟ್ರಿಕ್ ಪೂರ್ವ ಹಾಗೂ ಶೇಕಡ 87.44 ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಈ ಕೊರತೆಯನ್ನು ನೀಗಿಸಲು ಹೊರಗಿನ ಅಂಗಡಿಗಳಿಂದ ಸಾಮಗ್ರಿಗಳನ್ನು ಖರೀದಿಸುತ್ತಾರೆ. ಇದು ವಿದ್ಯಾರ್ಥಿಯ ಕೊಳ್ಳುವ ಸಾಮರ್ಥ್ಯವನ್ನು ಅವಲಂಬಿಸಿರುವುದರಿಂದ ಮತ್ತು ಎಲ್ಲಾ ವಿದ್ಯಾರ್ಥಿಗಳ ಬಳಿಯೂ ಅಷ್ಟೊಂದು ಸಂಪನ್ಮೂಲಗಳು ಇಲ್ಲದಿರುವುದರಿಂದ

ಕಿಟ್ಟಿನಲ್ಲಿ ಒದಗಿಸುತ್ತಿರುವ ಸಾಮಗ್ರಿಗಳನ್ನು ಹೆಚ್ಚಿಸುವ ಅಗತ್ಯವಿದೆ. ವೈಯಕ್ತಿಕ ನೈರ್ಮಲ್ಯದ ಮಹತ್ವವನ್ನು ಆಂತರೀಕರಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಈ ಯೋಜನೆ ನೆರವಾಗಿರುವುದು ಎದ್ದು ಕಾಣುತ್ತದೆ.

6. ವೈಯಕ್ತಿಕ ನೈರ್ಮಲ್ಯದ ಅಭ್ಯಾಸಗಳನ್ನು ಅಳವಡಿಸಿಕೊಂಡ ಮೇಲೆ ಅತಿಸಾರ ಭೇದಿ (diarrhea) ಮತ್ತ ತುರಿಗಜ್ಜಿ (scabies) ಪ್ರಕರಣಗಳು ಸಾಕಷ್ಟು ಕಡಿಮೆಯಾಗಿರುವುದು ಕಂಡು ಬರುತ್ತದೆ. ವಿದ್ಯಾರ್ಥಿಗಳು ತಿಳಿಸಿದ ಒಂದು ಪ್ರಮುಖ ಬದಲಾವಣೆಯೆಂದರೆ ವೈದ್ಯರನ್ನು ಭೇಟಿಯಾಗುವ ಪ್ರಮಾಣ ಕಡಿಮೆಯಾಗಿದೆಯೆಂಬುದು. ಮತ್ತೊಂದು ಕಣ್ಣಿಗೆದ್ದು ಕಾಣುವ ಪ್ರಭಾವವೆಂದರೆ ಸಾಬೂನಿನ ಬಳಕೆ ಮತ್ತು ವೈಯಕ್ತಿಕ ಆರೈಕೆಯ ಕಾರಣಗಳಿಂದಾಗಿ ತಮ್ಮನ್ನು ಸ್ವಚ್ಛವಾಗಿರಿಸಿಕೊಳ್ಳಲು ಸಾಧ್ಯವಾದುದ್ದರಿಂದ ಹೆಣ್ಣು ಮಕ್ಕಳು ತಮ್ಮ ತಿಂಗಳ ಸಮಸ್ಯೆಯ ಸಂದರ್ಭದಲ್ಲಿ ಎದುರಿಸುತ್ತಿದ್ದ ಮುಜುಗರ ಕಡಿಮೆಯಾಗಿದೆ. ಇದರಿಂದಾದ ಪರೋಕ್ಷ ಪ್ರಭಾವವೆಂದರೆ, ಈ ಬಾಲಕಿಯರು ತಮ್ಮ ಮನೆಗಳಲ್ಲಿರುವ ಇತರ ಹೆಣ್ಣು ಮಕ್ಕಳನ್ನು ಋತುಚಕ್ರದ ಸಮಯದಲ್ಲಿ ಸ್ಯಾನಿಟರಿ ಪ್ಯಾಡ್‌ಗಳ/ಸ್ವಚ್ಛವಾಗಿರುವ ಬಟ್ಟೆಗಳ ಉಪಯೋಗವನ್ನು ಕುರಿತು ಅರಿವು ಮೂಡಿಸಿರುವುದು.

7. ಈ ಯೋಜನೆಯ ಬಗ್ಗೆ ಹಾಗೂ ಕಿಟ್‌ನಲ್ಲಿರುವ ಪದಾರ್ಥಗಳ ಬಗ್ಗೆ ಎಲ್ಲಾ ವಿದ್ಯಾರ್ಥಿಗಳೂ ಸಂತೃಪ್ತಿಯನ್ನು ವ್ಯಕ್ತ ಪಡಿಸಿದರು. ಗಂಡುಮಕ್ಕಳು ಹಾಗೂ ಹೆಣ್ಣು ಮಕ್ಕಳಿಬ್ಬರಿಗೂ ಹೆಚ್ಚುವರಿ ಸಾಮಗ್ರಿಗಳನ್ನು ಕಿಟ್‌ನಲ್ಲಿ ಸೇರಿಸುವುದರಿಂದ ವೈಯಕ್ತಿಕ ಸ್ವಚ್ಛತೆಯ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸಬಹುದು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಅವುಗಳೆಂದರೆ, ಗಂಡು-ಹೆಣ್ಣು ಮಕ್ಕಳಿಬ್ಬರಿಗೂ ಶಾಂಪೂ ಮತ್ತ ಹೇನು ನಿವಾರಕ ಔಷಧಿಗಳು, ಹಾಗೂ ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ನ್ಯಾಪ್‌ಕಿನ್‌ಗಳು ಹಾಗೂ ಟಾಲ್‌ಕಮ್ ಪೌಡರ್ ಮತ್ತು ಗಂಡುಮಕ್ಕಳಿಗೆ ಶೇವಿಂಗ್ ಕಿಟ್.

8. ಶುಚಿ ಸಂಭ್ರಮ ಕಿಟ್ ಯೋಜನೆ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಿರ್ವಹಿಸಲ್ಪಡುತ್ತಿದೆ. ವಿವಿಧ ಹಂತಗಳಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆ. ವಸತಿನಿಲಯಗಳಲ್ಲಿ ಈ ಕಿಟ್‌ಗಳನ್ನು ಸಂರಕ್ಷಿಸಿ ಪ್ರತಿ ತಿಂಗಳ ಆರಂಭದಲ್ಲಿ ಅದನ್ನು ವಿತರಿಸುವ ಜವಾಬ್ದಾರಿಯು ನಿಲಯಪಾಲಕರದ್ದಾಗಿದೆ. ಯೋಜನೆಯ ಅನುಷ್ಠಾನವನ್ನು ಕುರಿತು ತಾಲ್ಲೂಕು ಕಲ್ಯಾಣಾಧಿಕಾರಿಯು ಆಗಾಗ್ಗೆ ಭೇಟಿ ನೀಡಿ ಪರಿಶೀಲಿಸುತ್ತಾರೆ. ಆದರೆ, ಅಧಿಕಾರ ಶ್ರೇಣಿಯಲ್ಲಿ ಮೇಲ್ಮಟ್ಟದಲ್ಲಿರುವ ಅಧಿಕಾರಿಗಳ ಭೇಟಿಯು ಅತಿ ವಿರಳವೆಂದು ವರದಿಯಾಗಿದೆ.

9. ಮೆಟ್ರಿಕ್ ನಂತರದ ಕೆಲ ವಸತಿನಿಲಯಗಳಲ್ಲಿ ಅನಧಿಕೃತವಾಗಿ ವಾಸವಿರುವ ಹಳೆಯ ವಿದ್ಯಾರ್ಥಿಗಳು ಕಂಡು ಬಂದರು. ಇಂತಹ ವಿದ್ಯಮಾನಗಳನ್ನು ತಡೆಹಿಡಿಯಬೇಕಾಗುತ್ತದೆ. ಏಕೆಂದರೆ ಅದು ಕಾನೂನು ರೀತ್ಯ ವಾಸಿಸುವ ನಿವಾಸಿಗಳಲ್ಲಿ ಭಯವನ್ನು ಸೃಷ್ಟಿಸುತ್ತದೆ.

10. ಬಳ್ಳಾರಿ ಜಿಲ್ಲೆಯಲ್ಲಿ ಕಾಲಮಾನಕ್ಕೆ ಅನುಗುಣವಾಗಿ ವಲಸೆ ಕಂಡು ಬರುತ್ತದೆ. ಆದರೆ, ಪೋಷಕರ ಈ ವಲಸೆಯು, ವಸತಿನಿಲಯಗಳಲ್ಲಿ ವಾಸವಿರುವ ಮಕ್ಕಳ ಮೇಲೆ ಯಾವಾಗಲೂ ನಕಾರಾತ್ಮಕ ಪ್ರಭಾವ ಬೀರುತ್ತದೆ ಎಂದು ಹೇಳಲಾಗದು. ಕೆಲವು ನಿಲಯಪಾಲಕರು ಗಮನಿಸಿರುವಂತೆ, ಪೋಷಕರ ವಲಸೆಯ ಕಾರಣದಿಂದಾಗಿ ಮೆಟ್ರಿಕ್ ಪೂರ್ವ ವಸತಿನಿಲಯಗಳಲ್ಲಿ ಬೇಡಿಕೆ ಹೆಚ್ಚಾಗುತ್ತದೆ. ಏಕೆಂದರೆ ಪೋಷಕರು ತಮ್ಮ ಮಕ್ಕಳನ್ನು ಎಲ್ಲೆಂದರಲ್ಲಿ ಕರೆದೊಯ್ಯುವುದಕ್ಕಿಂತ ವಸತಿನಿಲಯಗಳಲ್ಲಿ ಅವರು ಸುರಕ್ಷಿತವಾಗಿ ಇರಬೇಕೆಂದು ಬಯಸುತ್ತಾರೆ.

11. ಕ್ಷೇತ್ರಕಾರ್ಯ ಕೈಗೊಂಡಂಥ ಸಂದರ್ಭದಲ್ಲಿ, ಕೆಲವು ವಸತಿನಿಲಯಗಳಲ್ಲಿ [(102)-28%] ಶೌಚಾಲಯಗಳಿಗೆ ಬಾಗಿಲುಗಳಿಲ್ಲದಿರುವುದು, ನೀರಿನ ಅಭಾವ ಮೊದಲಾದ ಮೂಲಭೂತ ಸೌಕರ್ಯಗಳಿಲ್ಲದಿರುವುದು ಕಂಡು ಬಂದಿದೆ. ಹಾಗೆಯೇ ಬೆಳಕಿಗೆ ಬಂದ ಮತ್ತೊಂದು ಅಂಶವೆಂದರೆ, ವಸತಿನಿಲಯಗಳಲ್ಲಿ ವಾಸಿಸುವ ನಿವಾಸಿಗಳ ಸಂಖ್ಯೆಗೂ ಶೌಚಾಲಯಗಳ ಸಂಖ್ಯೆಗೂ ನಡುವೆ ವ್ಯತ್ಯಾಸವಿದೆ ಎಂಬುದು.

## ಶಿಫಾರಸ್ಸುಗಳು

ಅಧ್ಯಯನದ ಶಿಫಾರಸ್ಸುಗಳನ್ನು ಈ ಕೆಳಕಂಡ ಮೂರು ವರ್ಗಗಳಲ್ಲಿ ವಿಂಗಡಿಸಲಾಗಿದೆ:

- ಕಿಟ್‌ಗಳಲ್ಲಿ ಸುಧಾರಣೆ
- ಆರೋಗ್ಯ ಸೇವೆ ಮತ್ತು ಆಪ್ತ ಸಮಾಲೋಚನೆ
- ಯೋಜನೆಯ ಮೇಲುಸ್ತುವಾರಿ

ಕಿಟ್‌ನಲ್ಲಿರಬೇಕಾದ ವಸ್ತುಗಳಲ್ಲಿ ಆಗಬೇಕಾದ ಬದಲಾವಣೆಯಿಂದ ಆರಂಭಿಸೋಣ

## ಕಿಟ್‌ನಲ್ಲಿ ಆಗಬೇಕಾಗಿರುವ ಬದಲಾವಣೆ

ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಎರಡೂ ವಸತಿನಿಲಯಗಳಲ್ಲಿ ಶುಚಿ ಸಂಭ್ರಮ ಕಿಟ್ ಯೋಜನೆಯನ್ನು ಮುಂದುವರೆಸಬೇಕು. ಆದರೆ, ಕೆಲವೊಂದು ಪದಾರ್ಥಗಳನ್ನು ಕಿಟ್‌ನಲ್ಲಿ ಸೇರಿಸಬೇಕಿದೆ. ಕೋಷ್ಟಕ 1ರಲ್ಲಿ ಇದಕ್ಕೆ ಸಂಬಂಧಿಸಿದ ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ 1: ಕಿಟ್‌ನಲ್ಲಿ ಹಾಲಿ ಇರುವ ವಸ್ತುಗಳ ಸಂಖ್ಯೆ ಮತ್ತು ಪ್ರಮಾಣ ಮತ್ತು ಈಗ ಶಿಫಾರಸ್ಸು ಮಾಡಿರುವುದು**

| | **ವಸ್ತು** | **ಹಾಲಿ ಇರುವ ವಸ್ತುಗಳು** | **ಶಿಫಾರಸ್ಸು ಮಾಡಿರುವ ವಸ್ತುಗಳು ಮತ್ತು ಪ್ರಮಾಣ** |
|---|---|---|---|
| **ಬಾಲಕಿಯರು** | 1. ಮೈಸೂರು ಸ್ಯಾಂಡಲ್ ಸಾಬೂನು<br>2. ಮೈಸೂರು ಸ್ಯಾಂಡಲ್‌ನ ಕೊಬ್ಬರಿ ಎಣ್ಣೆ<br>3. ಮೈಸೂರು ಸ್ಯಾಂಡಲ್ ಪೌಡರ್<br>4. ಎಂ.ಡಿ.ಸಿ. ಡಿಟರ್ಜೆಂಟ್ ಸಾಬೂನು<br>5. ಅಜಂತಾ ಟೂತ್ ಪೇಸ್ಟ್ ಮತ್ತು ಬ್ರಷ್ | 75 ಗ್ರಾಂ<br>100 ಎಂ.ಎಲ್<br>50 ಗ್ರಾಂ<br>150 ಗ್ರಾಂ<br>ಅಜಂತಾ ಟೂತ್ ಪೇಸ್ಟ್ – 50 ಗ್ರಾಂ<br>ಅಜಂತಾ ಟೂತ್ ಬ್ರಷ್ - 1 | 1. ಸ್ಯಾಂಡಲ್ ಸಾಬೂನು: 2 ಪ್ರತಿಯೊಂದು 75 ಗ್ರಾಂ<br>2. ಎಣ್ಣೆ: 150 ಎಂ.ಎಲ್<br>3. ಟಾಲ್ಕಂ ಪೌಡರ್: ಬದಲಾವಣೆಯ ಅಗತ್ಯವಿಲ್ಲ<br>4. ಡಿಟರ್ಜೆಂಟ್ ಸೋಪ್: 150 ಗ್ರಾಂ -3<br>5. ಟೂತ್ ಪೇಸ್ಟ್: 100 ಗ್ರಾಂ<br>**ಹೊಸದಾಗಿ ಸೇರ್ಪಡೆಯಾಗಬೇಕಾದದ್ದು**<br>6. ತಲೆ ಹೇನಿಗೆ ಮೆಡಿಕೇರ್: 1 ಶೀಷೆ<br>7. ಶಾಂಪೂ: 100 ಎಂ.ಎಲ್ ಶೀಷೆ |
| **ಬಾಲಕರು** | 1. ಮೈಸೂರು ಸ್ಯಾಂಡಲ್ ಸಾಬೂನು<br>2. ಮೈಸೂರು ಸ್ಯಾಂಡಲ್‌ನ ಕೊಬ್ಬರಿ ಎಣ್ಣೆ | 75 ಗ್ರಾಂ, 1<br>100 ಎಂ.ಎಲ್ – 1<br>50 ಗ್ರಾಂ – 1<br>150 ಗ್ರಾಂ – 2 | 1. ಸೋಪು: 2 (75 ಗ್ರಾಂ)<br>2. ಎಣ್ಣೆ: ಇನ್ನೂ 50 ಗ್ರಾಂ<br>3. ಡಿಟರ್ಜೆಂಟ್ ಸೋಪು: 150 ಗ್ರಾಂ 3 |

| | | | |
|---|---|---|---|
| | 3. ಎಂ.ಡಿ.ಸಿ. ಡಿಟರ್ಜೆಂಟ್ ಸಾಬೂನು<br>4. ಅಜಂತಾ ಟೂತ್ ಪೇಸ್ಟ್ ಮತ್ತು ಬ್ರಷ್ | ಅಜಂತಾ ಟೂತ್ ಪೇಸ್ಟ್ – 50 ಗ್ರಾಂ 1<br>ಅಜಂತಾ ಟೂತ್ ಬ್ರಷ್ - 1 | 4. ಟೂತ್ ಪೇಸ್ಟ್: 100 ಗ್ರಾಂ<br>**ಹೊಸದಾಗಿ ಸೇರ್ಪಡೆಯಾಗಬೇಕಾದ್ದು**<br>5. ಟಾಲ್ಕಂ ಪೌಡರ್: 50 ಗ್ರಾಂ<br>6. ತಲೆ ಹೇನಿಗೆ ಮೆಡಿಕೇರ್: 1 ಶೀಷೆ<br>7. ಶಾಂಪೂ: 100 ಎಂ.ಎಲ್<br>8. ಶೇವಿಂಗ್ ಕಿಟ್ |

## ಆರೋಗ್ಯ ಸೇವೆ ಮತ್ತು ಆಪ್ತ ಸಮಾಲೋಚನೆ

- ❖ ಶುಚಿ ಸಂಭ್ರಮ ಯೋಜನೆಯ ಅನುಷ್ಠಾನದಿಂದ ಕುಟಂಬಗಳು, ಅತಿಸಾರ ಭೇದಿ ಹಾಗೂ ತುರಿಗಜ್ಜಿ ಖಾಯಿಲೆಗಳ ಚಿಕಿತ್ಸೆಗೆ ಆಸ್ಪತ್ರೆಗಳಿಗೆ ಅಲೆದಾಡುವುದು ಶೇಕಡ 50ರಷ್ಟು ಕಡಿಮೆಯಾಗಿರುವುದರಿಂದ, ಈ ಯೋಜನೆಯು ಆರೋಗ್ಯ ರಕ್ಷಣೆಗಾಗಿ ಹೆಚ್ಚುವರಿ ಹಣ ಖರ್ಚಾಗುವುದನ್ನು ತಡೆಯುತ್ತದೆ. ಈ ಹಿನ್ನಲೆಯಲ್ಲಿ ನಿರಂತರ ಆರೋಗ್ಯ ತಪಾಸಣೆ ಅತಿ ಮುಖ್ಯವಾಗುತ್ತದೆ.
- ❖ ವಸತಿನಿಲಯಗಳಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸುವುದರಿಂದ ವಯೋಮಾನಕ್ಕನುಗುಣವಾಗಿ ಹಾಗೂ ಜೀವನ ಶೈಲಿಯಿಂದಾಗಿ ಬರಬಹುದಾದ ಕಾಯಿಲೆಗಳನ್ನು ಗುರುತಿಸಿ, ಸೂಕ್ತ ಔಷಧೋಪಾಚಾರ ಹಾಗೂ ಆರೋಗ್ಯ ಸಲಹೆ ನೀಡುವುದರಿಂದ ಶುಚಿ ಸಂಭ್ರಮ ಕಾರ್ಯಕ್ರಮವನ್ನು ಮತ್ತಷ್ಟು ಬಲಪಡಿಸಬಹುದು.
- ❖ ಎಲ್ಲಾ ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಆಪ್ತ ಸಮಾಲೋಚನಾ ಕೇಂದ್ರಗಳಿರುತ್ತವೆ. ಈ ಕೇಂದ್ರಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿರುವ ವೈದ್ಯರು ತಮ್ಮ ವ್ಯಾಪ್ತಿಯಲ್ಲಿ ಬರುವ ವಸತಿನಿಲಯಗಳಿಗೆ ತಿಂಗಳಿಗೆ ಒಮ್ಮೆಯಾದರೂ ಭೇಟಿಕೊಟ್ಟು ವಸತಿನಿಲಯಗಳಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ ಆಪ್ತ ಸಮಾಲೋಚನೆ ನಡೆಸಬೇಕು.
- ❖ 104 ಟೋಲ್ ಫ್ರೀ ಕಾಲ್ ಸೆಂಟರ್ (ಸಹಾಯವಾಣಿ) ನಂಬರ್ ಆಗಿದ್ದು, ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತದೆ. 104 ಆರೋಗ್ಯ ಹೆಲ್ಪ್‌ಲೈನ್ ಸಣ್ಣ ಪುಟ್ಟ ಆರೋಗ್ಯದ ಸಮಸ್ಯೆಗಳಿಗೆ ಕಾಲ್ ಸೆಂಟರ್‌ಗೆ ಕರೆ ಮಾಡಿದಾಗ, ಉಚಿತ ಫೋನ್ ಕರೆಯ ಮೂಲಕ ಚಿಕಿತ್ಸೆ ನೀಡುವುದರ ಜೊತೆಗೆ, SMSನ ಮೂಲಕ ಔಷಧಿಯನ್ನು ತೆಗೆದುಕೊಳ್ಳಲು ಸಲಹೆಯನ್ನು ನೀಡಲಾಗುತ್ತದೆ. ಅಲ್ಲದೆ ತಜ್ಞರು, ಆಪ್ತ ಸಮಾಲೋಚನೆಯ ಮೂಲಕ ಖಿನ್ನತೆ, ಆತ್ಮಹತ್ಯಾ ಪ್ರವೃತ್ತಿ, ಮಾದಕ ವಸ್ತುಗಳ ಚಟ ಹಾಗೂ ಇನ್ನೂ ಮುಂತಾದ ಹಲವು ಖಾಯಿಲೆಗಳಿಗೆ ದೈಹಿಕ – ಮಾನಸಿಕ ಚಿಕಿತ್ಸೆಯನ್ನು ನೀಡುವರು. ಈ ಸೌಲಭ್ಯವನ್ನು ಕರ್ನಾಟಕದ ಆರೋಗ್ಯ ಮತ್ತು ಕುಟಂಬಕಲ್ಯಾಣ ಇಲಾಖೆಯ ವತಿಯಿಂದ ಜಾರಿಗೆ ತರಲಾಗಿದೆ. ಆರೋಗ್ಯ Helpline 104 ಬಗ್ಗೆ ಮಾಹಿತಿ ಎಲ್ಲಾ ವಸತಿನಿಲಯಗಳಲ್ಲಿ ಲಭ್ಯವಿರಬೇಕು. ಹಾಗೆಯೇ 104 Helpline ಅನ್ನು ವಿದ್ಯಾರ್ಥಿಗಳು ಬಳಸಲು ಒಂದು ಕಾರ್ಯನಿರತ ದೂರವಾಣಿ ಸೌಲಭ್ಯವನ್ನು ವಸತಿನಿಲಯಗಳಲ್ಲಿ ಒದಗಿಸಬೇಕು.

## ಯೋಜನೆಯ ಮೇಲುಸ್ತುವಾರಿ

- ಕಿಟ್‌ನಲ್ಲಿ ಒದಗಿಸಲಾಗಿರುವ ಎಲ್ಲಾ ಸಾಮಗ್ರಿಗಳ ಗುಣಮಟ್ಟವನ್ನು ಆಗಿಂದಾಗ್ಗೆ ಪರಿಶೀಲಿಸಬೇಕು.
- ವಸತಿನಿಲಯಗಳ ನಿಲಯಪಾಲಕರು ಹೊಸದಾಗಿ ಬಂದವರಿಗೆ ಪರಿಚಯಾತ್ಮಕ ಕಾರ್ಯಕ್ರಮವನ್ನು ಆಯೋಜಿಸಿ, ಕಿಟ್‌ನಲ್ಲಿರುವ ಸಾಮಗ್ರಿಗಳ ಬಳಕೆಯ ಬಗ್ಗೆ ಹಾಗೂ ಅದು ಏಕೆ ಮತ್ತು ಹೇಗೆ ಬಳಸಬೇಕು ಎಂಬುದನ್ನು ತಿಳಿಸಬೇಕು.
- ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿರುವ ಮೂಲ ಸೌಕರ್ಯಗಳ ಸ್ಥಿತಿಯನ್ನು ಪರಿಶೀಲಿಸಬೇಕಾಗುತ್ತದೆ, ಮತ್ತು ಮೂಲ ಸೌಕರ್ಯಗಳ ವೃದ್ಧಿಗಾಗಿ ಬೇಕಾಗುವ ಕಾರ್ಯಯೋಜನೆಯನ್ನು ಜಾರಿಗೊಳಿಸಬೇಕು. ಈ ಕಾರ್ಯಕ್ರಮವು ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕಾದರೆ, ಮೂಲ ಸೌಕರ್ಯದ ಅವಶ್ಯಕತೆಯನ್ನು ಶುಚಿ ಸಂಭ್ರಮ ಯೋಜನೆಯ ನೀತಿ ನಿಯಮಾವಳಿಗಳ ದಾಖಲೆ (Document)ಯಲ್ಲಿ ಸೇರಿಸಬೇಕಾಗಿದೆ.
- ಶಾಲೆ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು (School Development and Monitoring Committee-SDMC) ತಮ್ಮ ವ್ಯಾಪ್ತಿಗೆ ಬರುವ ಶಾಲೆಗಳಿಗೆ ದಾಖಲಾಗುವ ವಿದ್ಯಾರ್ಥಿ – ವಿದ್ಯಾರ್ಥಿನಿಯರು ಮೆಟ್ರಿಕ್ ಪೂರ್ವ ವಸತಿನಿಲಯಗಳಲ್ಲಿದ್ದರೆ, ಅಂಥ ನಿಲಯಗಳಲ್ಲಿ ಶುಚಿ ಸಂಭ್ರಮ ಯೋಜನೆಯ ಕಾರ್ಯನಿರ್ವಹಣೆಯ ಜವಾಬ್ದಾರಿಯನ್ನು ಈ ಸಮಿತಿಗಳಿಗೆ ವಹಿಸಬೇಕು. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಮುಖ್ಯ ಆಶಯವೇ ಶಾಲೆಗಳ ಶೈಕ್ಷಣಿಕ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಉತ್ತಮ ಪಡಿಸುವುದೇ ಆಗಿರುವುದರಿಂದ ಸಮಿತಿಯ ಸದಸ್ಯರು ತಮ್ಮ ಶಾಲೆಯ ಮಕ್ಕಳು ಎಲ್ಲಿ ನೆಲೆಸಿರುವರೋ ಅಂತಹ ಕಡೆ ವರ್ಷಕ್ಕೆ ಎರಡು ಬಾರಿಯಾದರೂ ಭೇಟಿ ನೀಡಬೇಕಾಗುತ್ತದೆ.
- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ರಾಜ್ಯ ಮತ್ತು ನಾಗರಿಕ ಸಮಾಜದ ಪ್ರತಿನಿಧಿಗಳನ್ನು ಒಳಗೊಂಡಿರುವುದರಿಂದ, ಶುಚಿ ಸಂಭ್ರಮ ಯೋಜನೆಯ ಪರಿಣಾಮಕಾರಿ ನಿರ್ವಹಣೆಗೆ ಅಗತ್ಯವಾಗಿ ಬೇಕಾಗಿರುವ ಕೆಲವು ಸೌಲಭ್ಯಗಳಾದ ಪೆಟ್ಟಿಗೆಗಳು, ಅಲಮಾರುಗಳು, ಟ್ರಂಕ್‌ಗಳು ಮತ್ತು ಕೀಲಿಗಳನ್ನು ಇವರ ನೆರವಿನಿಂದ ಪಡೆಯಬಹುದು.
- ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯೊಳಗೆ ಬರುವ ವಸತಿನಿಲಯಗಳಿಗೆ ಹಿರಿಯ ಅಧಿಕಾರಿಗಳ ಭೇಟಿಯ ಸಂಖ್ಯೆ ಹೆಚ್ಚಾಗಬೇಕಾದ ಅಗತ್ಯವಿದೆ. ಉಪ-ನಿರ್ದೇಶಕರು ತಮ್ಮ ಜಿಲ್ಲೆಯಲ್ಲಿರುವ ವಸತಿನಿಲಯಗಳಿಗೆ ಮೂರು ತಿಂಗಳಿಗೊಮ್ಮೆ ಭೇಟಿ ನೀಡಬೇಕು ಹಾಗೂ ಸಮಾಜಕಲ್ಯಾಣ ಇಲಾಖೆಯ ಆಯುಕ್ತರು, ಎಲ್ಲಾ ವಸತಿನಿಲಯ ಗಳಿಗೂ ಆರು ತಿಂಗಳಿಗೊಮ್ಮೆಯಾದರೂ ಭೇಟಿ ನೀಡಬೇಕು.
- ಶುಚಿ ಸಂಭ್ರಮ ಕಿಟ್ ಯೋಜನೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ವಸತಿನಿಲಯಗಳಲ್ಲಿರುವವ ರೆಲ್ಲರೂ ತಮ್ಮ ಅನುಭವವನ್ನು ಹಂಚಿಕೊಳ್ಳಲು, ಕಾಳಜಿಗಳನ್ನು ವ್ಯಕ್ತಪಡಿಸಲು ಹಾಗೂ ಸಲಹೆಗಳನ್ನು ನೀಡಲು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಒಂದು Online Portal ಅನ್ನು ಸೃಷ್ಟಿಮಾಡಬೇಕು.

****************

# I

# ಅಧ್ಯಯನದ ಹಿನ್ನೆಲೆ

ಉತ್ತಮ ಆರೋಗ್ಯವನ್ನು ಹೊಂದಲು ನೀರು, ನೈರ್ಮಲ್ಯ ಹಾಗೂ ಶುಚಿತ್ವ ಒಂದಕ್ಕೊಂದು ಪೂರಕವಾಗಿರುತ್ತವೆ. ಸ್ವಚ್ಛವಾದ ಪರಿಸರವು ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಲು ಇರುವ ಅಡಿಪಾಯ. ವೈಯಕ್ತಿಕ ಸ್ವಚ್ಛತೆಯು ದೇಹದ ವಿವಿಧ ಭಾಗಗಳನ್ನು ಸ್ವಚ್ಛವಾಗಿರಿಸಿಕೊಳ್ಳುವುದನ್ನು ಒಳಗೊಂಡಿದೆ. ಒಂದು ಮಗವು ತನ್ನ ಬಾಲ್ಯಾವಸ್ಥೆಯಲ್ಲಿ ವೈಯಕ್ತಿಕ ಸ್ವಚ್ಛತೆಯನ್ನು ರಕ್ಷಿಸಿಕೊಳ್ಳಲು ಪಡೆದ ತರಬೇತಿಯೇ, ಸ್ವಾಸ್ಥ್ಯವನ್ನು ಕಾಪಾಡಲು ಅಗತ್ಯವಾದ ಮನೋಭಾವವನ್ನು ಬೆಳೆಸಿಕೊಳ್ಳಲು ಹಾಗೂ ಸುರಕ್ಷಿತ ಮತ್ತು ಆರೋಗ್ಯಕರ ಜೀವನಶೈಲಿಯನ್ನು ನಿರ್ವಹಿಸಲು ನೆರವಾಗುವಂಥ ಅಂಶ.

ಓರ್ವ ವ್ಯಕ್ತಿಯ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳುವಲ್ಲಿ ವೈಯಕ್ತಿಕ ನೈರ್ಮಲ್ಯ ಬಹು ಮುಖ್ಯ ಪಾತ್ರ ವಹಿಸುತ್ತದೆ. ಆರೋಗ್ಯವನ್ನು ಕಾಪಾಡಿಕೊಳ್ಳುವುದೆಂದರೆ ಹಲ್ಲುಗಳನ್ನು ಉಜ್ಜುವುದು, ಬಾಯಿ ಮುಕ್ಕಳಿಸುವುದು, ಬಾಯಿ ವಾಸನೆಯಿಲ್ಲದಿರುವಂತೆ ನೋಡಿಕೊಳ್ಳುವುದು, ಮತ್ತು ದೇಹವನ್ನು ಅಂದವಾಗಿರಿಸಿಕೊಳ್ಳುವುದು, ಎಂದರೆ, ಕೈ-ಕಾಲುಗಳನ್ನು ನಿಯಮಿತವಾಗಿ ತೊಳೆಯುವುದು, ಸ್ನಾನ ಮಾಡುವುದು, ಶುಭ್ರವಾದ ಬಟ್ಟೆಗಳನ್ನು ಧರಿಸುವುದು, ಕೂದಲು ಮತ್ತು ಚರ್ಮವನ್ನು ಕಾಪಾಡಿಕೊಳ್ಳುವುದು, ಉಗುರುಗಳನ್ನು ಕತ್ತರಿಸಿಕೊಳ್ಳುವುದು ಮತ್ತು ಸಮರ್ಪಕ ಪಾದರಕ್ಷೆಯನ್ನು ಉಪಯೋಗಿಸುವುದು-ಈ ಅಭ್ಯಾಸಗಳನ್ನು ಒಳಗೊಂಡಿದೆ.

ವೈಯಕ್ತಿಕ ನೈರ್ಮಲ್ಯ ಹಾಗೂ ಅದನ್ನು ಕಾಪಾಡಿಕೊಳ್ಳುವುದು ಆಯಾ ಸಂಸ್ಕೃತಿಯ ಹಾಗೂ ಕುಟುಂಬದ ಆದ್ಯತೆಗಳಾಗಿವೆ. ಸಾಮಾನ್ಯವಾಗಿ ಮಕ್ಕಳ ವೈಯಕ್ತಿಕ ನೈರ್ಮಲ್ಯವನ್ನು ಆರಂಭದಿಂದಲೂ ಕಾಪಾಡುವ ವ್ಯಕ್ತಿಯೆಂದರೆ ತಾಯಿಯೇ. ಕುಟುಂಬದ ಪ್ರಧಾನ ಪಾಲಕಳಾಗಿ, ಆಕೆ ತನ್ನ ಮಕ್ಕಳಿಗೆ ವಯೋಗುಣಗಳಿಗನುಗುಣವಾಗಿ ವೈಯಕ್ತಿಕ ನೈರ್ಮಲ್ಯದ ಬಗ್ಗೆ ಹಾಗೂ ದೇಹದ ಆರೋಗ್ಯದ ಬಗ್ಗೆ ತಿಳುವಳಿಕೆಯನ್ನು, ನೈಪುಣ್ಯತೆಯನ್ನು ಕಲಿಸಿಕೊಡುತ್ತಾಳೆ.

ವೈಯಕ್ತಿಕ ನೈರ್ಮಲ್ಯವನ್ನು ಪೋಷಣೆ ಮಾಡಬೇಕಾದರೆ ಟೂತ್ ಪೇಸ್ಟ್, ಟೂತ್ ಬ್ರಷ್, ಸೋಪ್, ಬಾಚಣಿಗೆ, ಟಾಲ್ಕಮ್ ಪೌಡರ್, ಉಗುರು ಕತ್ತರಿಸುವ ಕತ್ತರಿ ಮೊದಲಾದ ಸಾಮಗ್ರಿಗಳ ಅವಶ್ಯಕತೆಯಿದೆ. ಈ ಎಲ್ಲಾ ಸಾಮಗ್ರಿಗಳನ್ನು ತರಿಸಿಕೊಳ್ಳುವುದು ಸಂಪನ್ಮೂಲಗಳನ್ನು ಅವಲಂಬಿಸಿರುತ್ತದೆ ಮತ್ತು ಆಗಿಂದಾಗ್ಗೆ ಅವುಗಳನ್ನು ಖರೀದಿಸಬೇಕಾಗುತ್ತದೆ.

ಬೆಳೆಯುತ್ತಾ ಹೋದಂತೆ ಅನೇಕ ಮಕ್ಕಳು ಉನ್ನತ ವ್ಯಾಸಂಗ ಮಾಡಲು ತಮ್ಮ ಮನೆಗಳನ್ನು ಬಿಟ್ಟು ಹೊರಬರುತ್ತಾರೆ. ವಿದ್ಯಾರ್ಥಿಗಳಿಗೆ ಸೌಕರ್ಯಗಳನ್ನು ಒದಗಿಸಲು ಅನೇಕ ವಸತಿನಿಲಯಗಳೂ ಇವೆ. ಸಮಾಜದಲ್ಲಿನ ದುರ್ಬಲ ವರ್ಗದ ಮಕ್ಕಳ ಅನುಕೂಲಕ್ಕಾಗಿ ಸರ್ಕಾರವೇ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳನ್ನು ನಿರ್ವಹಿಸುತ್ತಿದೆ. ಎಲ್ಲಾ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳು ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ಸೌಕರ್ಯಗಳನ್ನು ಒದಗಿಸುತ್ತವೆ. ಏಕೆಂದರೆ ಅವರು ಸಾಮಾಜಿಕವಾಗಿ ಅನನುಕೂಲ ಪರಿಸ್ಥಿತಿಗಳನ್ನು ಎದುರಿಸುತ್ತಿರುವವರಲ್ಲಿ ಅತ್ಯಂತ ಅಂಚಿನಲ್ಲಿರುವ ಗುಂಪುಗಳಾಗಿರುವುದರಿಂದ.

## ಸರ್ಕಾರದ ಮಧ್ಯಸ್ಥಿಕೆಯ ಅಗತ್ಯ

ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಶಾಲಾ ಮಕ್ಕಳಲ್ಲಿನ ಕನಿಷ್ಠ ವೈಯಕ್ತಿಕ ನೈರ್ಮಲ್ಯದ ಅಭ್ಯಾಸಗಳು ಆತಂಕ ತರುವ ವಿಷಯವೇ ಆಗಿದೆ. ಕ್ರಮೇಣವಾಗಿ ಮಕ್ಕಳ ಆಮೂಲಾಗ್ರ ಬೆಳವಣಿಗೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುವ

ಸಾಂಕ್ರಾಮಿಕ ರೋಗಗಳ ಪರಿಣಾಮದಿಂದ ಈ ವಿಚಾರವನ್ನು ಅತ್ಯಂತ ತುರ್ತಾಗಿ ಪರಿಗಣಿಸಿ ಪರಿಹರಿಸಬೇಕಿದೆ. ಅತಿಸಾರ ಭೇದಿ, ಚರ್ಮದ ಸಮಸ್ಯೆಗಳು, ಹುಳುಗಳ ಸೊಂಕು ಮತ್ತು ಹಲ್ಲಿನ ಸಮಸ್ಯೆಗಳು-ಇವುಗಳು ಸಾಮಾನ್ಯವಾಗಿ ಅತಿ ಕನಿಷ್ಠ ವೈಯಕ್ತಿಕ ನೈರ್ಮಲ್ಯದ ಜೊತೆ ಸಂಬಂಧಿಸಿರುವ ಆರೋಗ್ಯ ಸಮಸ್ಯೆಗಳು. ಮಕ್ಕಳು ಎದುರಿಸುವ ಮುಖ್ಯ ಸಮಸ್ಯೆಗಳಲ್ಲಿ ಒಂದು ಸೋಂಕು ತಗಲುವಿಕೆ. ಸೊಂಕಿಗೆ ಮೂಲ ಕಾರಣ ಕಳಪೆ ವೈಯಕ್ತಿಕ ನೈರ್ಮಲ್ಯದ ಅಭ್ಯಾಸಗಳು. ವೈಯಕ್ತಿಕ ನೈರ್ಮಲ್ಯ ಕೊರತೆಯ ಜೊತೆಗೆ ಕಳಪೆ ಶುಚಿತ್ವವು ವ್ಯಕ್ತಿಯಿಂದ-ವ್ಯಕ್ತಿಗೆ ಹರಡುವುದು. ಯಾವ ಶಾಲಾ ಮಕ್ಕಳು ವೈಯಕ್ತಿಕ ಶುಚಿತ್ವದ (ನೈರ್ಮಲ್ಯದ) ಬಗ್ಗೆ ಉತ್ತಮ ಜ್ಞಾನ ಮತ್ತು ಅಭ್ಯಾಸಗಳನ್ನು ಅಳವಡಿಸಿಕೊಂಡಿರುತ್ತಾರೋ ಅಂತಹ ಮಕ್ಕಳು ಅನಾರೋಗ್ಯಕ್ಕೆ ಒಳಗಾಗುವುದು ಕಡಿಮೆ ಮತ್ತು ಶಾಲೆಯ ಹಾಜರಾತಿಯಲ್ಲಿ ಪ್ರಗತಿ ಇದ್ದು, ಉತ್ತಮ ಅಂಕಗಳನ್ನು ಗಳಿಸುತ್ತಾರೆಂದು ಅಧ್ಯಯನಗಳು ತೋರಿಸಿವೆ (Sreenivasan et.al.2016, Ansari et.al.2014, Vismita, 2014, Mane,et.al.2014, Sarkar 2013, Vikas et.al.2010). ಈ ಅಧ್ಯಯನಗಳು ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿರುವ ವ್ಯತ್ಯಾಸಗಳು, ಆರ್ಥಿಕ ಸ್ಥಿತಿ, ಲಿಂಗ ಮತ್ತು ವೈಯಕ್ತಿಕ ನೈರ್ಮಲ್ಯದ ಅಭ್ಯಾಸಗಳ ಬಗ್ಗೆಯೂ ಬೆಳಕು ಚೆಲ್ಲಿವೆ. ಒಂದು ಸಾಮಾನ್ಯ ಅಭಿಪ್ರಾಯವೆಂದರೆ, ಗ್ರಾಮಾಂತರ ಪ್ರದೇಶವಾಸಿಗಳಿಗಿಂತ ನಗರವಾಸಿಗಳು, ಬಾಲಕರಿಗಿಂತಲೂ ಬಾಲಕಿಯರು, ಬಡವರಿಗಿಂತಲೂ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವವರು ವೈಯಕ್ತಿಕ ನೈರ್ಮಲ್ಯದ ಮಹತ್ವದ ಬಗ್ಗೆ ಹೆಚ್ಚಾಗಿ ಅರಿತಿರುವರು ಎಂಬುದು.

ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡುವುದರ ಮಹತ್ವ ಅರಿತಿರುವವರೂ ಸಹ ಅದನ್ನು ಯಾವಾಗಲೂ ಕಾಪಾಡಲು ಸಾಧ್ಯವಿಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ ಬಡತನ, ಮನೆ ಮತ್ತು ಶಾಲೆಗಳಲ್ಲಿ ಅಗತ್ಯ ಸೌಕರ್ಯಗಳ ಕೊರತೆ ಹಾಗೂ ಶಾಲೆ ಮತ್ತು ವಸತಿನಿಲಯಗಳಲ್ಲಿರುವ ಕಳಪೆ ಮೂಲ ಸೌಕರ್ಯಗಳು. ಆದ್ದರಿಂದ ಕೇವಲ ಅರಿವು ಮೂಡಿಸಿದರಷ್ಟೇ ಸಾಲದು ಅದರ ಜೊತೆಗೆ ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಲು ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನೂ ಕಲ್ಪಿಸಬೇಕು. (ಹೆಗ್ಡೆ 2016; ಉಮಾರಾಣಿ 2014).

ಭಾರತದಲ್ಲಿ, ಸಾರ್ವಜನಿಕ ಆರೋಗ್ಯದ ವಿಚಾರಕ್ಕೆ ಬಂದಾಗ ರಾಜ್ಯ ಬಹು ಮುಖ್ಯ ಪಾತ್ರ ವಹಿಸುತ್ತದೆ. ಖಾಸಗಿ ಆರೋಗ್ಯ ಕೇಂದ್ರಗಳು ಅಗಾಧ ಪ್ರಮಾಣದಲ್ಲಿ ವಿಸ್ತರಣೆಯಾಗುತ್ತಿದ್ದು, ಆರೋಗ್ಯ ರಕ್ಷಣೆಯ ಮೇಲೆ ಆಗುವ ಸಾಮಾಜಿಕ ವೆಚ್ಚದ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ, ರಾಜ್ಯವು ನಿವಾರಿಸಬಹುದಾದ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟುವಲ್ಲಿ ಕ್ರಮ ಕೈಗೊಳ್ಳಬೇಕಿದೆ. ಹಾಗೆಯೇ ನೈರ್ಮಲ್ಯ ಕಾಪಾಡಿಕೊಳ್ಳುವಲ್ಲಿ ಬೇಕಾದ ಅರಿವು ಮೂಡಿಸುವುದಲ್ಲದೆ, ದುರ್ಬಲ ವರ್ಗದವರಿಗೆ ಅಗತ್ಯ ಸಂಪನ್ಮೂಲಗಳನ್ನು ಒದಗಿಸಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನವು ಮುಖ್ಯವೆನಿಸುತ್ತದೆ.

## ಶುಚಿ ಸಂಭ್ರಮ ಕಿಟ್ ಯೋಜನೆ

ರಾಜ್ಯದಲ್ಲಿ ಸರ್ಕಾರಿ ವಸತಿನಿಲಯಗಳಲ್ಲಿದ್ದು ಓದುತ್ತಿರುವ ವಿದ್ಯಾರ್ಥಿಗಳಿಗೆ ವೈಯಕ್ತಿಕ ನೈರ್ಮಲ್ಯದ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಅಗತ್ಯ ಸಂಪನ್ಮೂಲಗಳನ್ನು ಒದಗಿಸುವ ಉದ್ದೇಶದೊಂದಿಗೆ ಶುಚಿ ಸಂಭ್ರಮ ಕಿಟ್ ಯೋಜನೆಯನ್ನು ಕರ್ನಾಟಕದಲ್ಲಿ 1994ರಲ್ಲಿ ಅನುಷ್ಠಾನಗೊಳಿಸಲಾಯಿತು. ಈ ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿದ್ದು 2015-16ರ ವರೆಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಮಾತ್ರ ಇದು ಒಳಗೊಂಡಿತ್ತು. 2015-16ರ ನಂತರ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ ಎಲ್ಲಾ ವಸತಿ ಶಾಲೆಗಳಿಗೂ ಇದನ್ನು ವಿಸ್ತರಿಸಲಾಯಿತು. 2016-17 ರಿಂದೀಚೆಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳನ್ನೂ ಈ ಯೋಜನೆಯಡಿ ತರಲಾಯಿತು. ಪ್ರಸ್ತುತ ಈ ಕಿಟ್‌ಗಳನ್ನು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಸಂಸ್ಥೆಗಳು, ಮೊರಾರ್ಜಿ ದೇಸಾಯಿ ಮತ್ತು ನವೋದಯ ಶಾಲೆ ಮೊದಲಾದ, ಇಲಾಖೆಯ ವತಿಯಿಂದ ನಡೆಸಲಾಗುತ್ತಿರುವ

ವಸತಿನಿಲಯಗಳ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಸ್ವಚ್ಛತೆಯ ಕಿಟ್‌ಗಳನ್ನು ನೀಡುವ ಜವಾಬ್ದಾರಿಯನ್ನು **ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿ.** ಇವರಿಗೆ ವಹಿಸಲಾಗಿದೆ.

ಈ ಯೋಜನೆಯ ಆರಂಭಿಕ ಹಂತದಲ್ಲಿ ಮೈಸೂರು ಸ್ಯಾಂಡಲ್ ಸೋಪ್ (75g) ಮತ್ತು ಮೈಸೂರು ಡಿಟರ್ಜೆಂಟ್ ಸೋಪ್‌ಗಳನ್ನು ಮಾತ್ರ ಒದಗಿಸಲಾಗಿತ್ತು, ಆದರೆ ಈ ಯೋಜನೆಯ ಜನಪ್ರಿಯತೆ ಹೆಚ್ಚಾದಂತೆ ಕಿಟ್‌ನ ಗುಣಾತ್ಮಕತೆ ಮತ್ತು ಅದರ ಧ್ಯೇಯೋದ್ದೇಶಗಳನ್ನು ವೃದ್ಧಿಸುವ ಸಲುವಾಗಿ ಪ್ರತ್ಯೇಕವಾಗಿ **"ಶುಚಿ ಸಂಭ್ರಮ ಮೈಸೂರು ಸ್ಯಾಂಡಲ್ ಕಿಟ್"** ಅಥವಾ **"ವೇವ್ ಕಿಟ್"** ಎಂದು ವಿನ್ಯಾಸಗೊಳಿಸಲಾಯಿತು. ಇದೊಂದು ವಿಶಿಷ್ಟವಾದ ಕಿಟ್ ಆಗಿದ್ದು, ಇದರಲ್ಲಿ ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಡಿಟರ್ಜೆಂಟ್ ಸೋಪ್, ಕೊಬ್ಬರಿ ಎಣ್ಣೆ, ಟೂತ್ ಬ್ರಷ್, ಟೂತ್ ಪೇಸ್ಟ್ ಮತ್ತು ಟಾಲ್ಕಮ್ ಪೌಡರ್ ಇರುತ್ತವೆ. ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ನೆಲೆಸಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಈ ಕಿಟ್‌ಗಳನ್ನು ಒದಗಿಸಲಾಗುತ್ತದೆ. ಒಂದು ಶೈಕ್ಷಣಿಕ ವರ್ಷದಲ್ಲಿ ಹತ್ತು ತಿಂಗಳು (ತಿಂಗಳಿಗೆ ಒಂದು ಕಿಟ್‌ನಂತೆ) ಇದನ್ನು ವಿತರಿಸಲಾಗುವುದು.

## ಶುಚಿಸಂಭ್ರಮ ಕಿಟ್: ಅದರೊಳಗಿರುವ ವಸ್ತುಗಳು ಮತ್ತು ಪ್ರಮಾಣ

| | **ವಸ್ತುಗಳು** | **ಮೊತ್ತ** |
|---|---|---|
| **ಬಾಲಕಿಯರು** | 1. ಮೈಸೂರು ಸ್ಯಾಂಡಲ್ ಸಾಬೂನು<br>2. ಮೈಸೂರು ಸ್ಯಾಂಡಲ್‌ನ ಕೊಬ್ಬರಿ ಎಣ್ಣೆ<br>3. ಮೈಸೂರು ಸ್ಯಾಂಡಲ್ ಪೌಡರ್<br>4. ಎಂ.ಡಿ.ಸಿ. ಡಿಟರ್ಜೆಂಟ್ ಸಾಬೂನು<br>5. ಅಜಂತಾ ಟೂತ್ ಪೇಸ್ಟ್ ಮತ್ತು ಬ್ರಷ್ | 75 ಗ್ರಾಂ, 1<br>100 ಎಂ.ಎಲ್ – 1<br>50 ಗ್ರಾಂ – 1<br>150 ಗ್ರಾಂ – 2<br>ಅಜಂತಾ ಟೂತ್ ಪೇಸ್ಟ್ – 50 ಗ್ರಾಂ 1<br>ಅಜಂತಾ ಟೂತ್ ಬ್ರಷ್ -1 |
| **ಬಾಲಕರು** | 1. ಮೈಸೂರು ಸ್ಯಾಂಡಲ್ ಸಾಬೂನು<br>2. ಮೈಸೂರು ಸ್ಯಾಂಡಲ್‌ನ ಕೊಬ್ಬರಿ ಎಣ್ಣೆ<br>3. ಎಂ.ಡಿ.ಸಿ. ಡಿಟರ್ಜೆಂಟ್ ಸಾಬೂನು<br>4. ಅಜಂತಾ ಟೂತ್ ಪೇಸ್ಟ್ ಮತ್ತು ಬ್ರಷ್ | 75 ಗ್ರಾಂ, 1<br>100 ಎಂ.ಎಲ್ – 1<br>50 ಗ್ರಾಂ – 1<br>150 ಗ್ರಾಂ – 2<br>ಅಜಂತಾ ಟೂತ್ ಪೇಸ್ಟ್ – 50 ಗ್ರಾಂ 1<br>ಅಜಂತಾ ಟೂತ್ ಬ್ರಷ್ - 1 |

## ಶುಚಿ ಸಂಭ್ರಮ ಕಿಟ್ ಯೋಜನೆಯ ಧ್ಯೇಯೋದ್ದೇಶಗಳು

ಶುಚಿ ಸಂಭ್ರಮ ಕಿಟ್ ಯೋಜನೆಯು ಕೆಲವು ಮುಖ್ಯ ಧ್ಯೇಯಗಳನ್ನು ಹೊಂದಿದೆ. ಅವುಗಳೆಂದರೆ:

1. ಮಕ್ಕಳಲ್ಲಿ ಆರೋಗ್ಯ ಮತ್ತು ವೈಯಕ್ತಿಕ ಶುಚಿತ್ವವನ್ನು ಕುರಿತು ಅರಿವು ಮೂಡಿಸುವುದು.
2. ಕರ್ನಾಟಕದ ಸರ್ಕಾರಿ ವಸತಿನಿಲಯಗಳಲ್ಲಿ ವಾಸಿಸುವ ಶೋಷಿತ ದುರ್ಬಲ ವರ್ಗಕ್ಕೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ) ಸೇರಿದ ಶಾಲಾ/ಕಾಲೇಜು ಮಕ್ಕಳಲ್ಲಿ ವೈಯಕ್ತಿಕ ಶುಚಿತ್ವವನ್ನು ಕುರಿತ ಅರಿವನ್ನು ಹಾಗೂ ಅಭ್ಯಾಸವನ್ನು ಉತ್ತೇಜಿಸುವುದು.
3. ವೈಯಕ್ತಿಕ ಶುಚಿತ್ವವನ್ನು ಕಾಪಾಡಲು ಅಗತ್ಯ ಸಂಪನ್ಮೂಲಗಳನ್ನು ಒದಗಿಸುವುದು.

## ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಆಡಳಿತಾತ್ಮಕ ವ್ಯವಸ್ಥೆ

ಸಮಾಜ ಕಲ್ಯಾಣ ಇಲಾಖೆಯು ಮೂರು ಹಂತಗಳಲ್ಲಿ ಕಾರ್ಯನಿರ್ವಹಿಸುತ್ತದೆ. 1) ರಾಜ್ಯ ಮಟ್ಟ 2) ಜಿಲ್ಲಾ ಮಟ್ಟ ಮತ್ತು 3) ತಾಲ್ಲೂಕು ಮಟ್ಟ. ಕೆಳಕಂಡ ಚಿತ್ರದಲ್ಲಿ ಇದನ್ನು ತೋರಿಸಲಾಗಿದೆ.

**ರಾಜ್ಯ ಮಟ್ಟ**

- ರಾಜ್ಯ ಮಟ್ಟದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಇಲಾಖೆಯ ಮುಖ್ಯಸ್ಥರಾಗಿರುವವರು ಮತ್ತು ಮೂವರು ಜಂಟಿ ನಿರ್ದೇಶಕರು, ನಾಲ್ವರು ಉಪ-ನಿರ್ದೇಶಕರು, ಮತ್ತು ಓರ್ವ ಮುಖ್ಯ ಹಣಕಾಸು ಅಧಿಕಾರಿಗಳು ಇವರಿಗೆ ಸಹಾಯ ಮಾಡುವರು.

**ಜಿಲ್ಲಾ ಮಟ್ಟ**

- ಜಿಲ್ಲಾ ಪಂಚಾಯತ್‌ಗಳು, ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳಿಸುತ್ತವೆ. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯು ಜಿಲ್ಲಾ ಮಟ್ಟದಲ್ಲಿ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ ಮತ್ತು ಇವರು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸಹಕರಿಸುತ್ತಾರೆ.

**ತಾಲ್ಲೂಕು ಮಟ್ಟ**

- ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಯು, ತಾಲ್ಲೂಕು ಸಮಾಜ ಕಲ್ಯಾಣ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ ಮತ್ತು ತಾಲ್ಲೂಕು ಪಂಚಾಯತ್‌ನ ಅಧೀನದಲ್ಲಿ ಕಾರ್ಯನಿರ್ವಹಿಸುವರು, ಹಾಗೆಯೇ ಇವರು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗೆ, ತಾಲ್ಲೂಕು ಪಂಚಾಯತ್‌ಗೆ ಮತ್ತು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗೆ ಯೋಜನೆಯ ಅನುಷ್ಠಾನಕ್ಕೆ ಸಹಕರಿಸುವರು.

### ಉಸ್ತುವಾರಿಯ ವ್ಯವಸ್ಥೆ

ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು, ರಾಜ್ಯ ಮಟ್ಟದಲ್ಲಿ ಈ ಯೋಜನೆಯ ಉಸ್ತುವಾರಿಯನ್ನು ವಹಿಸಿಕೊಳ್ಳುವರು. ಪ್ರತಿ ಜಿಲ್ಲೆಯಲ್ಲಿ ಈ ಯೋಜನೆಯ ಅನುಷ್ಠಾನದ ಜವಾಬ್ದಾರಿಯನ್ನು ಉಪ-ನಿರ್ದೇಶಕರು ವಹಿಸಿಕೊಂಡಿರುತ್ತಾರೆ. ಈ ಅಧಿಕಾರಿಯು ತನ್ನ ವ್ಯಾಪ್ತಿಯಲ್ಲಿ ಬರುವ ವಸತಿನಿಲಯಗಳಿಗೆ ತಿಂಗಳಲ್ಲಿ ಒಮ್ಮೆ ಅಥವಾ ಎರಡು ತಿಂಗಳಿಗೊಮ್ಮೆ ಭೇಟಿ ನೀಡುವರು. ಮುಂದುವರೆದು, ತಾಲ್ಲೂಕು ಮಟ್ಟದಲ್ಲಿ, ಸಹಾಯಕ ನಿರ್ದೇಶಕರು ಯೋಜನೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ. ಪ್ರತಿ ವಸತಿನಿಲಯದಲ್ಲಿ ವಿದ್ಯಾರ್ಥಿಗಳಿಗೆ ಕಿಟ್ ನೀಡುವ ಜವಾಬ್ದಾರಿಯನ್ನು ಹಾಗೂ ಯೋಜನೆಗೆ ಸಂಬಂಧಪಟ್ಟ ಮಾಹಿತಿಯನ್ನು ನಿರ್ವಹಿಸುವ ಹೊಣೆಗಾರಿಕೆ ನಿಲಯಪಾಲಕರದ್ದಾಗಿರುತ್ತದೆ. ವರ್ಷದ ಆರಂಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಅನುಮೋದನೆ ನೀಡಿ ಅದನ್ನು Processing Office (P.O) ಗೆ ಮತ್ತು ಅನುಮೋದನಾ ಪತ್ರವನ್ನು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿ. ಇವರಿಗೆ ಕಳುಹಿಸುತ್ತಾರೆ. ಪ್ರತಿ ಎರಡು-ಮೂರು ತಿಂಗಳಿಗೊಮ್ಮೆ ವಸತಿನಿಲಯದ ನಿಲಯಪಾಲಕರು, ವಸ್ತುಗಳ ಬೇಡಿಕೆ ಪಟ್ಟಿಯನ್ನು (indent) ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರಿಗೆ ಕಳುಹಿಸುತ್ತಾರೆ. ಸಹಾಯಕ ನಿರ್ದೇಶಕರು ಪ್ರತಿಯಾಗಿ ಸಮಗ್ರವಾದ ಬೇಡಿಕೆ ಪಟ್ಟಿಯನ್ನು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿ. ಇವರಿಗೆ ಕಳುಹಿಸುತ್ತಾರೆ. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿ. ಇವರು ಎಲ್ಲಾ ತಾಲ್ಲೂಕುಗಳಿಗೆ ಹಾಗೂ ತಾಲ್ಲೂಕುಗಳಿಂದ ಹಾಸ್ಟೆಲ್ ವಾರ್ಡನ್‌ಗಳಿಗೆ ವಿತರಣೆ ಮಾಡುತ್ತಾರೆ.

## ಶುಚಿಸಂಭ್ರಮ ಕಿಟ್ ವಿತರಣೆಯ ಪ್ರಸ್ತುತ ಸ್ಥಿತಿ

2015-16ರ ವರೆಗೂ ಕಿಟ್‌ಗಳು ಸರ್ಕಾರಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿಗಳಿಗಷ್ಟೇ ವಿತರಣೆಯಾಗುತ್ತಿತ್ತು. 2015-16ರ ನಂತರ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಕಿಟ್ಟನ್ನು ಹಾಗೂ 2016-17ರ ನಂತರ ಅನುಕ್ರಮವಾಗಿ ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ.

ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳಿಗೆ ಒಟ್ಟು 68 ವಸತಿ ಸಹಿತ ಶಾಲೆಗಳಿದ್ದು, ಅವರಿಗಾಗಿ 1231 ಮೆಟ್ರಿಕ್ ಪೂರ್ವ ಹಾಗೂ 566 ಮೆಟ್ರಿಕ್ ನಂತರದ ವಸತಿನಿಲಯಗಳಿವೆ. ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ, ಒಟ್ಟು 134 ಮೆಟ್ರಿಕ್ ಪೂರ್ವ ವಸತಿನಿಲಯಗಳು ಇದ್ದು, ಅದರಲ್ಲಿ 94 ಬಾಲಕರಿಗೆ ಮತ್ತು 40 ಬಾಲಕಿಯರಿಗೆ ಇವೆ. 90 ಮೆಟ್ರಿಕ್ ನಂತರದ ವಸತಿನಿಲಯಗಳಲ್ಲೂ 53 ಬಾಲಕರ ವಸತಿನಿಲಯಗಳಾದರೆ, 37 ಹೆಣ್ಣು ಮಕ್ಕಳದ್ದಾಗಿದೆ (2016-17). ಇದಲ್ಲದೆ, ರಾಜ್ಯದಲ್ಲಿರುವ 116 ಆಶ್ರಮ ಶಾಲೆಗಳ ವಸತಿನಿಲಯಗಳಲ್ಲಿ ಉಳಿದುಕೊಂಡಿರುವ ಪರಿಶಿಷ್ಟ ಪಂಗಡದ ವಿದ್ಯರ್ಥಿಗಳಿಗೂ ಈ ಕಿಟ್ ವಿತರಿಸಲಾಗುತ್ತದೆ (ToR: 5).

## ಸಂಬಂಧಿಸಿದ ಸಾಹಿತ್ಯಾವಲೋಕನ

ಶುಚಿ ಸಂಭ್ರಮ ಕಿಟ್ ಯೋಜನೆಯ ಪ್ರಭಾವದ ಬಗ್ಗೆ ಯಾವುದೇ ಅಧ್ಯಯನಗಳು ದೊರೆಯದೇ ಇದ್ದರೂ, ಶಾಲಾ ಮಕ್ಕಳಲ್ಲಿ ವೈಯಕ್ತಿಕ ನೈರ್ಮಲ್ಯದ ಅಭ್ಯಾಸಗಳ ಕುರಿತಂತೆ ಅಧ್ಯಯನಗಳು ನಡೆದಿವೆ. ಈ ಭಾಗದಲ್ಲಿ, ಕೆಲವು ಆಯ್ದ ಅಧ್ಯಯನಗಳ ಸಂಕ್ಷಿಪ್ತ ವಿಮರ್ಶೆಯನ್ನು ನೀಡಲಾಗಿದೆ.

**ರವಿಕುಮಾರ್ ಮತ್ತು ದೀಪಕ್ ಜೋಷಿ (2017)** ಅವರ **"Awareness of Dental Hygiene amongst the Primary School Children of Low Socio-economic Strata"** ಎಂಬ ಅಧ್ಯಯನದಲ್ಲಿ ಪುಣೆಯ ಸುತ್ತ ಮುತ್ತ ಇರುವ ಮೂರು ಶಾಲೆಗಳಲ್ಲಿ ಅಧ್ಯಯನ ಮಾಡುತ್ತಿರುವ ಪ್ರಾಥಮಿಕ ಶಾಲಾ ಮಕ್ಕಳಲ್ಲಿ ದಂತ ಆರೋಗ್ಯದ ಬಗ್ಗೆ ಇರುವ ಅರಿವು ಮತ್ತು ಅಭ್ಯಾಸಗಳ ಬಗ್ಗೆ ಸಂಶೋಧನೆಯನ್ನು ಕೈಗೊಳ್ಳಲಾಯಿತು. ಇದರಿಂದ ಕಂಡು ಬಂದ ಅಂಶವೆಂದರೆ, ಬಹುತೇಕ ಮಕ್ಕಳಿಗೆ ಬಾಯಿಯ ಶುಚಿತ್ವವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದರ ಬಗ್ಗೆ ಅರಿವಿರಲಿಲ್ಲ ಮತ್ತು ಶೇಕಡ 50ರಷ್ಟು ಪೋಷಕರು ತಮ್ಮ ಮಕ್ಕಳಿಗೆ ಇದರ ಬಗ್ಗೆ ಸರಿಯಾದ ಮಾರ್ಗದರ್ಶನ ನೀಡಿರಲಿಲ್ಲ ಎಂಬುದು. ಈ ಪರಿಸ್ಥಿತಿಯನ್ನು ಸುಧಾರಿಸಲು ಅಧ್ಯಯನ ನೀಡಿದ ಪ್ರಮುಖ ಶಿಫಾರಸ್ಸು ಎಂದರೆ ದಂತ ಪರೀಕ್ಷೆಗಳನ್ನು ಆಗಿಂದಾಗ್ಗೆ ವ್ಯವಸ್ಥೆ ಮಾಡಬೇಕು ಎಂದು.

**ಖಾಟೂನ್ ಮತ್ತು ಇತರರು (2017) "Impact of School Health Education Programme on Personal Hygiene among School Children of Lucknow District"** ಎಂಬ ಅಧ್ಯಯನವನ್ನು ಕೈಗೊಂಡಿದ್ದರು. ಕೈ ತೊಳೆಯುವ, ಸ್ನಾನ ಮಾಡುವ, ಹಲ್ಲುಗಳನ್ನು ತಿಕ್ಕುವ, ಉಗುರು ಮತ್ತು ಕೂದಲಿನ ಬಗ್ಗೆ ಕಾಳಜಿ ವಹಿಸುವ ವಿಚಾರಗಳ ಕುರಿತು ಪ್ರಸ್ತುತ ಇರುವ ಅರಿವು ಮತ್ತು ಅಭ್ಯಾಸಗಳನ್ನು ಅರಿಯಲು ಈ ಅಧ್ಯಯನವನ್ನು ಕೈಗೊಳ್ಳಲಾಯಿತು. ಅಂತರ್ – ವಿಭಾಗೀಯ ವಿವರಣಾತ್ಮಕ ವಿಧಾನವನ್ನು ಈ ಅಧ್ಯಯನದಲ್ಲಿ ಬಳಸಲಾಗಿದ್ದು ಲಕ್ನೋ ಜಿಲ್ಲೆಯ 800 ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು. ರಚನಾತ್ಮಕ ಪ್ರಶ್ನಾವಳಿಯ ಮೂಲಕ ಎಲ್ಲ ವಿದ್ಯಾರ್ಥಿಗಳನ್ನು ಸಂದರ್ಶಿಸಲಾಯಿತು. ಪ್ರೊಜೆಕ್ಟರ್ ಬಳಸಿ ವಿದ್ಯಾರ್ಥಿಗಳಿಗೆ ಶುಚಿತ್ವದ ಬಗ್ಗೆ ಸರಿಯಾದ ಅರಿವನ್ನು ನೀಡುವ ಮುನ್ನ ಮತ್ತು ನಂತರ ಸ್ಥಿತಿಯ ಅಧ್ಯಯನವನ್ನು ಕೈಗೊಳ್ಳಲಾಯಿತು. 10-12 ವರ್ಷ ವಯೋಮಾನದ ವಿದ್ಯಾರ್ಥಿಗಳಿಗೆ ಒಂದು ರಚನಾತ್ಮಕ ಪ್ರಶ್ನಾವಳಿಯನ್ನು ನೀಡಲಾಯಿತು.

ದೈಹಿಕ ಶುಚಿತ್ವ ಕಾಪಾಡಿಕೊಳ್ಳುವ ಸಾಮಾನ್ಯ ಜ್ಞಾನದ ಅರಿವು ಅಧ್ಯಯನ ಪೂರ್ವದಲ್ಲಿ ಶೇಕಡ 53.8ರಷ್ಟು ಇದ್ದರೆ, ಅಧ್ಯಯನ ನಂತರ (post–test) ಇದು ಶೇಕಡ 87.5 ಆದದ್ದು ಕಂಡು ಬರುತ್ತದೆ. ಶೇಕಡ 38ರಷ್ಟು ವಿದ್ಯಾರ್ಥಿಗಳು ತಮ್ಮ

ಕೂದಲನ್ನು ಒಪ್ಪವಾಗಿರಿಸಿಕೊಳ್ಳುವುದು ವೈಯಕ್ತಿಕ ಸ್ವಚ್ಛತೆಯೆಂದು ಪರಿಗಣಿಸಿದರು ಅತಿಸಾರವಾದಾಗ ಕಡಿಮೆ ಆಹಾರವನ್ನು ಸೇವಿಸಬೇಕು ಎನ್ನುವ ಅರಿವು ಶೇಕಡ 80ರಷ್ಟು ವಿದ್ಯಾರ್ಥಿಗಳಲ್ಲಿತ್ತು. ಅಧ್ಯಯನ ಪೂರ್ವದಲ್ಲಿ (pre-test) ಶೇಕಡ 12.5ರಷ್ಟು ವಿದ್ಯಾರ್ಥಿಗಳು ಅತಿಸಾರವು ಮಕ್ಕಳನ್ನು ಸಾವಿಗೀಡುಮಾಡುತ್ತದೆ ಎಂಬುದನ್ನು ತಿಳಿದಿದ್ದರೆ, ಅಧ್ಯಯನದ ನಂತರ ನೂರಕ್ಕೆ ನೂರರಷ್ಟು ಮಕ್ಕಳಿಗೆ ಇದರ ಅರಿವು ಮೂಡಿತ್ತು. ಬಹುತೇಕ ವಿದ್ಯಾರ್ಥಿಗಳು ತಮ್ಮ ಬಟ್ಟೆಗಳನ್ನು ಎರಡು ದಿನಗಳಿಗೊಮ್ಮೆ ಬದಲಿಸುತ್ತಿದ್ದರು ಮತ್ತು ವಾರಕ್ಕೊಮ್ಮೆ ತಲೆಕೂದಲನ್ನು ತೊಳೆಯುತ್ತಿದ್ದರು ಹಾಗೂ ಶೇಕಡ 70ರಷ್ಟು ಮಕ್ಕಳು ಊಟಕ್ಕೆ ಮೊದಲು ಕೈ ತೊಳೆಯುತ್ತಿದ್ದರು. ಸಾಮಾನ್ಯವಾಗಿ ಕಂಡು ಬಂದದ್ದು ಏನೆಂದರೆ, **ಅಧ್ಯಯನದ ಪೂರ್ವ** ಮತ್ತು **ಅಧ್ಯಯನದ ನಂತರದ** ಅರಿವಿನ ಮಟ್ಟದಲ್ಲಿ ಅಸಾಧಾರಣ ವ್ಯತ್ಯಾಸಗಳಿದ್ದವು ಎಂಬುದು.

**ಮಾನೆ ಮತ್ತು ಇತರರು (2016) "Differences of Hand Hygiene and its Correlates among School going Children in Rural and Urban Areas of Karnataka, India"** ಎಂಬ ಅಧ್ಯಯನದಲ್ಲಿ ಕರ್ನಾಟಕದ ರಾಯಚೂರು ಜಿಲ್ಲೆಯಲ್ಲಿ 5 ರಿಂದ 8 ತರಗತಿಗಳಲ್ಲಿ ಓದುತ್ತಿರುವ 625 ನಗರ ಮತ್ತು ಗ್ರಾಮಾಂತರ ಪ್ರದೇಶದ ಮಕ್ಕಳನ್ನು ಕೈಗಳ ಶುಚಿತ್ವಕ್ಕೆ (hand hygiene) ಸಂಬಂಧಿಸಿದಂತೆ ಅಧ್ಯಯನಕ್ಕೆ ಒಳಪಡಿಸಲಾಯಿತು. ಮನೆಯಲ್ಲಿ ಮತ್ತು ಶಾಲೆಗಳಲ್ಲಿ ಸೋಪು ಮತ್ತು ನೀರಿನ ಅಲಭ್ಯತೆಯು ಕೈಗಳನ್ನು ತೊಳೆಯುವ ಅಭ್ಯಾಸಗಳನ್ನು ಮುಂದುವರೆಸಲು ಇದ್ದ ಕೊರತೆಗಳಾಗಿದ್ದವು. ಆದ್ದರಿಂದ, ಈ ಮಕ್ಕಳಲ್ಲಿ ಆರೋಗ್ಯಪೂರ್ಣ ಕೈ ತೊಳೆಯುವ ಅಭ್ಯಾಸಗಳನ್ನು ಬೆಳೆಸಬೇಕಾದರೆ ಅರಿವು ಮೂಡಿಸುವ ಜೊತೆಗೆ ಅವರಿಗೆ ಬೇಕಾದ ಅಗತ್ಯ ಸೌಲಭ್ಯಗಳನ್ನೂ ಒದಗಿಸಬೇಕಾಗುತ್ತದೆ ಎಂಬುದು ಈ ಅಧ್ಯಯನದ ಮೂಲ ಸಂದೇಶವಾಗಿತ್ತು.

**ಲಾಲ್ ಮತ್ತು ಕವಿತಾ (2016)** ವಾರಂಗಲ್ ಜಿಲ್ಲೆಯಲ್ಲಿ ಕೈಗೊಂಡ **"Assessment of Personal Hygiene, Knowledge and Practices: An Empirical Study of School Children in Warangal"** ಎಂಬ ಅಧ್ಯಯನದಲ್ಲಿ ಕೈಗೊಂಡರು. ಈ ಅಧ್ಯಯನವು ಗುಣಾತ್ಮಕ ವಿಧಾನವನ್ನು ಬಳಸಿದ್ದು, ಮಾಹಿತಿದಾರರನ್ನು ಅನುಕೂಲಕರ ಮಾದರಿಯ ಮೂಲಕ ಆಯ್ಕೆ ಮಾಡಲಾಯಿತು. ಈ ಅಧ್ಯಯನದಲ್ಲಿ ಆಳವಾದ (in-depth) ಸಂದರ್ಶನಗಳನ್ನು ನಡೆಸಲಾಯಿತು. ಏಕೆಂದರೆ ಬೇರೆ ವಿಧಾನಗಳಾದ ಪ್ರಶ್ನಾವಳಿ ಅಥವಾ ಅವಲೋಕನ ಆಧಾರಿತ ವಿಶ್ಲೇಷಣೆಯು ವೈಯಕ್ತಿಕ ಶುಚಿತ್ವದ ಅಭ್ಯಾಸಗಳ ಕುರಿತು ಇರುವ ದೃಷ್ಟಿಕೋನದ ಬಗ್ಗೆ ಆಳವಾದ ಮಾಹಿತಿಯನ್ನು ನೀಡಲು ಸಾಧ್ಯವಾಗುತ್ತಿರಲಿಲ್ಲ. ಈ ಅಧ್ಯಯನವನ್ನು ಮಾರ್ಚ್ – ಏಪ್ರಿಲ್ 2016ರಲ್ಲಿ ಕೈಗೊಳ್ಳಲಾಯಿತು. ಶಾಲೆಗೆ ಹೋಗುವ ಮಕ್ಕಳಲ್ಲಿ ಯಾರು ಈ ಅಧ್ಯಯನಕ್ಕೆ ಒಳಪಡಲು ಸಮ್ಮತಿಸಿದರೋ ಅಂತಹವರಲ್ಲಿ 100 ಮಂದಿಯನ್ನು ಆಯ್ಕೆ ಮಾಡಲಾಯಿತು. ಈ ಅಧ್ಯಯನವು ಪರಿಮಾಣಾತ್ಮಕ ವಿಶ್ಲೇಷಣೆಗಳಾದ ಶೇಕಡವಾರು ಹಾಗೂ ANOVA ವನ್ನು ಬಳಸಿತು.

ಈ ಅಧ್ಯಯನದಿಂದ ಕಂಡು ಬಂದ ಅಂಶವೆಂದರೆ, ಶಾಲೆಗಳಿಗೆ ಹೋಗುತ್ತಿರುವ ಬಹುತೇಕ ಗಂಡು ಮಕ್ಕಳು ವೈಯಕ್ತಿಕ ಶುಚಿತ್ವವನ್ನು ಪಾಲಿಸುತ್ತಿದ್ದರು. ಶೇಕಡ 90ರಷ್ಟು ಮಕ್ಕಳು ಹದಿಹರೆಯದವರಾಗಿದ್ದು, ಶೇಕಡ 37ರಷ್ಟು ಮಕ್ಕಳು ಏಳನೆಯ ತರಗತಿಯಲ್ಲಿ ಓದುತ್ತಿದ್ದರು. ಶೇಕಡ 44ರಷ್ಟು ಪೋಷಕರು ಅನಕ್ಷರಸ್ಥರಾಗಿದ್ದರು. ಈ ಎಲ್ಲಾ ಗಂಡು ಮಕ್ಕಳು ಪ್ರತಿದಿನ ಸ್ನಾನ ಮಾಡುತ್ತಿದ್ದರು. ಹಾಗೆಯೇ ಬಹುತೇಕ ಎಲ್ಲರೂ ದಿನಾಲೂ ಹಲ್ಲುಗಳನ್ನು ಉಜ್ಜುತ್ತಿದ್ದರು. ಈ ಎಲ್ಲಾ ಬಾಲಕರೂ ಕೈಗಳನ್ನು ತೊಳೆದುಕೊಳ್ಳುತ್ತಿದ್ದರಾದರೂ ಶೇಕಡ 48ರಷ್ಟು ಮಂದಿ ಮಾತ್ರ ಸಾಬುನು ಬಳಸುತ್ತಿದ್ದರು. ಶೇಕಡ 66ರಷ್ಟು ವಿದ್ಯಾರ್ಥಿಗಳು ಶೌಚಾಲಯವನ್ನು ಬಳಸಿದ ನಂತರ ಕೈಗಳನ್ನು ತೊಳೆಯುತ್ತಿದ್ದರು. ಈ ಅಧ್ಯಯನದಲ್ಲಿ ಕಂಡು ಬಂದ ಮತ್ತೊಂದು ವಿಷಯವೆಂದರೆ, ಶೇಕಡ 66ರಷ್ಟು ವಿದ್ಯಾರ್ಥಿಗಳು ತಮ್ಮ ಬಾಚಣಿಗೆಯನ್ನು ಬೇರೆ ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳುತ್ತಿದ್ದರು. ಶೇಕಡ 84ರಷ್ಟು ವಿದ್ಯಾರ್ಥಿಗಳು ನಿಯಮಿತವಾಗಿ ತಮ್ಮ ಉಗುರುಗಳನ್ನು ಕತ್ತರಿಸಿಕೊಳ್ಳುತ್ತಿದ್ದರು, ಮತ್ತು ಶೇಕಡ 58ರಷ್ಟು ಮಕ್ಕಳು ಕೆಮ್ಮು ಬಂದಾಗ ಹಾಗೂ ಸೀನಿದಾಗ ಕೈವಸ್ತ್ರ ಉಪಯೋಗಿಸುತ್ತಿದ್ದರು. ಶೇಕಡ 56ರಷ್ಟು ವಿದ್ಯಾರ್ಥಿಗಳು ಹೇಳಿದ್ದೇನೆಂದರೆ, ಅವರಿಗೆ ತಮ್ಮ ಶಿಕ್ಷಕರಿಂದ ವೈಯಕ್ತಿಕ ಶುಚಿತ್ವದ ಬಗ್ಗೆ ಅರಿವು ಮೂಡಿತು ಎಂದು.

**ಅಮಿತಾ ಹೆಗ್ಡೆ ಮತ್ತು ಇತರರು (2016)** ತಮ್ಮ ಅಧ್ಯಯನದ ಫಲಿತಾಂಶಗಳನ್ನು **"Knowledge, Attitude and Practices of Oral and Personal Hygiene to Prevent Communicable Diseases among Students in and around the City of Mangalore: An Epidemiological Survey"** ಎಂಬ ಪ್ರಬಂಧದಲ್ಲಿ ಮಂಡಿಸಿದ್ದಾರೆ. ಈ ಅಧ್ಯಯನದಲ್ಲಿ ಕಂಡು ಬಂದುದ್ದೇನೆಂದರೆ, ಅಸಮರ್ಪಕ ಶೌಚಾಲಯ ವ್ಯವಸ್ಥೆ ಹಾಗೂ ಕಳಪೆ ಶುಚಿತ್ವದ ಅಭ್ಯಾಸಗಳು ಸಾಂಕ್ರಾಮಿಕ ರೋಗಗಳು ಹರಡುವುದರಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತವೆಯಾದ್ದರಿಂದ ಅದನ್ನು ತಡೆಗಟ್ಟುವಲ್ಲಿ ಪೋಷಕರ ಪಾತ್ರ ಮುಖ್ಯವಾಗುತ್ತದೆ. ಹಾಗೆಯೇ, ಆರ್ಥಿಕ ಸಂಪನ್ಮೂಲಗಳನ್ನು ಒದಗಿಸುವುದು ಮತ್ತು ಮೂಲಸೌಕರ್ಯಗಳ ಜೊತೆಗೆ ಶುಚಿತ್ವ ಕುರಿತು ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ವೈಯಕ್ತಿಕ ಶುಚಿತ್ವದ ಸಮಸ್ಯೆಗಳೇನಾದರೂ ಇದ್ದರೆ ಅದನ್ನು ಬಗೆಹರಿಸಬೇಕಾಗುತ್ತದೆ.

**ಉಮಾರಾಣಿ (2014) ಅವರು ಕೈಗೊಂಡ "Knowledge of Children regarding Oral Hygiene: A School based Descriptive Study"** ಎಂಬ ಅಧ್ಯಯನದಲ್ಲಿ ಬಾಯಿ ಶುಚಿತ್ವಕ್ಕೆ ಸಂಬಂಧಿಸಿದಂತೆ ತಮ್ಮ ಫಲಿತಾಂಶಗಳನ್ನು ಸಾದರ ಪಡಿಸಿರುವರು. ಮಂಗಳೂರಿನ ಆಯ್ದ 100 ಶಾಲಾ ಮಕ್ಕಳನ್ನು ಈ ಅಧ್ಯಯನ ಒಳಗೊಂಡಿತ್ತು. ಅಧ್ಯಯನದ ಮಾದರಿಯಲ್ಲಿ ಬಾಯಿ ಶುಚಿತ್ವದ ಅರಿವು ಎಷ್ಟು ಇತ್ತು ಎಂಬುದನ್ನು ಅಧ್ಯಯನ ಮಾಡಿದಾಗ ಕಂಡು ಬಂದ ಅಂಶವೆಂದರೆ, ಶಾಲಾ ಮಕ್ಕಳಲ್ಲಿ ಬಾಯಿ ಶುಚಿತ್ವದ ಬಗ್ಗೆ ಅತಿ ಸಾಧಾರಣ ಮಟ್ಟದ ಅರಿವು ಇದ್ದು, ಅದರ ಮಹತ್ವ ಕುರಿತು ಅವರಲ್ಲಿ ಅರಿವು ಮೂಡಿಸುವ ಅಗತ್ಯವಿದೆ ಎಂಬುದು.

**ಅನ್ಸಾರಿ ಮತ್ತು ವಾರ್ಭೆ (2014) ಅವರು "Assessment of the Knowledge and Practices regarding Personal Hygiene among School Children from an Urban Area"** ಎಂಬ ಅಧ್ಯಯನದಲ್ಲಿ ಮುಂಬಯಿನ ಬಾಂದ್ರಾದ ಕಾರ್ಡಿನಲ್ ಗ್ರೇಷಿಯಸ್ ಪ್ರೌಢಶಾಲೆಯ ಮಕ್ಕಳಲ್ಲಿ ವೈಯಕ್ತಿಕ ಶುಚಿತ್ವದ ಅರಿವಿನ ಮಟ್ಟ ಕುರಿತು ವಿವರಿಸಿದ್ದಾರೆ. ಎಂಟು ಮತ್ತು ಒಂಬತ್ತನೇ ತರಗತಿಗಳ 512 ಮಕ್ಕಳನ್ನು ಈ ಅಧ್ಯಯನ ಒಳಗೊಂಡಿದ್ದು, ಬಹುತೇಕ ಮಕ್ಕಳು ಸುರಕ್ಷಿತ ಶುಚಿತ್ವದ ಅಭ್ಯಾಸಗಳನ್ನು ಅನುಸರಿಸುತ್ತಿದ್ದರು, ಆದರೆ ಅವರಲ್ಲಿ ಬಾಯಿ, ಉಗುರು ಮತ್ತು ಕೂದಲಿನ ಆರೈಕೆಗಳ ಬಗ್ಗೆ ಹೆಚ್ಚಿನ ಅರಿವಿನ ಅಗತ್ಯವಿತ್ತು ಎಂದು ಅಧ್ಯಯನ ತೋರಿಸಿತು.

**ಸರ್ಕಾರ್ (2013) ಅವರ "Personal Hygiene among Primary School Children Living in a Sium of Kolkata, India"** ಎಂಬ ಅಧ್ಯಯನ ಕೊಲ್ಕಾತ್ತದ ಚೇತಲ ಎಂಬ ಕೊಳಗೇರಿಯಲ್ಲಿ ಪ್ರಾಥಮಿಕ ಶಾಲಾ ಮಕ್ಕಳನ್ನು ಒಳಗೊಂಡಿತ್ತು. ಈ ಅಧ್ಯಯನದ ಪ್ರಕಾರ ಶುಚಿತ್ವದ ಬಗೆಗಿನ ಅರಿವು ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳಲ್ಲಿ ಹೆಚ್ಚಾಗಿತ್ತು, ಮತ್ತು ತಾಯಿಯ ಶೈಕ್ಷಣಿಕ ಮಟ್ಟ ಹಾಗೂ ಮಕ್ಕಳ ವೈಯಕ್ತಿಕ ಶುಚಿತ್ವಕ್ಕೂ ಸಂಬಂಧವಿರುವುದು ಕಂಡು ಬಂದಿತು. ವೈಯಕ್ತಿಕ ಶುಚಿತ್ವವನ್ನು ಕಾಪಾಡುವಲ್ಲಿ ಕೆಲವು ಸಾಂಸ್ಕೃತಿಕ ಆಚರಣೆಗಳೂ ತಡೆಗೋಡೆಯಾಗಿರುವುದೂ ಕಂಡು ಬಂದಿತು. ವೈಯಕ್ತಿಕ ಶುಚಿತ್ವದ ಅಭ್ಯಾಸಗಳನ್ನು ಪಾಲಿಸಲು ಕೆಲವು ನಿರ್ದಿಷ್ಟ ಯೋಜನೆಗಳನ್ನು ಹಮ್ಮಿಕೊಳ್ಳಬೇಕು ಎಂದು ಈ ಅಧ್ಯಯನ ಶಿಫಾರಸ್ಸು ಮಾಡಿತು.

**ಜಾಸ್ಪರ್ ಮತ್ತು ಇತರರು (2012) ರಲ್ಲಿ "Water and Sanitation in Schools: A Systematic Review of the Health and Educational Outcomes"** ಎನ್ನುವ ಸಂಶೋಧನಾ ವಿಮರ್ಶಾ ಪ್ರಬಂಧದಲ್ಲಿ ಶೈಕ್ಷಣಿಕ ಪರಿಸರದಲ್ಲಿ ನೀರಿನ ಮತ್ತು ನೈರ್ಮಲ್ಯದ ಕೊರತೆಯ ಪರಿಣಾಮಗಳನ್ನು ಅಧ್ಯಯನ ಮಾಡಿರುವರು. ಈ ಒಂದು ಅಧ್ಯಯನಕ್ಕಾಗಿ 41 ವಿಮರ್ಶಾ ಲೇಖನಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು.

ಈ ಲೇಖನಗಳನ್ನು ಆರು ಮುಖ್ಯ ಕ್ಷೇತ್ರಗಳ ಆಧಾರದ ಮೇಲೆ ವಿಂಗಡಿಸಲಾಯಿತು: ಕುಡಿಯಲಿಕ್ಕಾಗಿ ನೀರು, ಕೈಗಳನ್ನು ತೊಳೆಯಲಿಕ್ಕಾಗಿ ನೀರು, ಕುಡಿಯಲು ಹಾಗೂ ಕೈ ತೊಳೆಯಲು ನೀರು, ನೈರ್ಮಲ್ಯ ಕಾಪಾಡಲು ನೀರು, ಹೆಣ್ಣು ಮಕ್ಕಳಿಗೆ

ಋತುಚಕ್ರದ ಸಮಯದಲ್ಲಿ ನೈರ್ಮಲ್ಯ ಕಾಪಾಡಲು ನೀರು ಹಾಗೂ ನೀರಿನ ಲಭ್ಯತೆ ಮತ್ತು ನೈರ್ಮಲ್ಯ ಕಾಪಾಡುವಿಕೆ – ಇವುಗಳೆಲ್ಲದರ ನಡುವೆ ನಿಕಟವಾದ ಸಂಬಂಧವಿದ್ದು, ಈ ಸೌಕರ್ಯಗಳ ಅಭಾವವಿದ್ದಾಗ, ಆ ಸ್ಥಿತಿ ವಿಶೇಷವಾಗಿ ಹೆಣ್ಣು ಮಕ್ಕಳ ಮೇಲೆ ಋತುಚಕ್ರದ ಸಮಯದಲ್ಲಿ ಪರಿಣಾಮ ಬೀರುತ್ತದೆ. ಶುದ್ಧ ಕುಡಿಯುವ ನೀರಿನ ಲಭ್ಯತೆ ಶಾಲೆಗಳಲ್ಲಿನ ಹಾಜರಾತಿಯನ್ನು ಹೆಚ್ಚಿಸುವುದಲ್ಲದೆ, ವೈಯಕ್ತಿಕ ಆರೋಗ್ಯ ಮತ್ತು ನೈರ್ಮಲ್ಯ ಕಾಪಾಡುವಿಕೆಯಲ್ಲಿಯೂ ಪಾತ್ರ ವಹಿಸುತ್ತದೆ. ಶೌಚಾಲಯಗಳನ್ನು ಬಳಸುವಾಗ ಖಾಸಗಿ ಸ್ಥಳವಿದ್ದಾಗ ಅದು ಮಕ್ಕಳ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ಶಾಲೆಗಳಲ್ಲಿನ ನೈರ್ಮಲ್ಯ ಮತ್ತು ಮಕ್ಕಳ ಆರೋಗ್ಯ ಕುರಿತ ಸಂಬಂಧಗಳನ್ನು ಪರೀಶಿಲಿಸುವ ವ್ಯವಸ್ಥಿತ ಅಧ್ಯಯನ ಕೈಗೊಂಡಾಗ ಹೆಚ್ಚಿನ ಒಳನೋಟಗಳನ್ನು ಪಡೆಯಲು ಸಾಧ್ಯವಾಗುತ್ತದೆ.

**ವಿವಾಸ್ ಮತ್ತು ಇತರರು (2010) "Knowledge, Attitude and Practices (KAP) of Hygiene among School Children in Angola, Ethiopia"** ಎಂಬ ಅಧ್ಯಯನವನ್ನು ಕೈಗೊಂಡರು. ಈ ಅಧ್ಯಯನ ಗ್ರಾಮೀಣ ಇಥಿಯೋಪಿಯಾದ ಅಂಗೋಲಾ ಪ್ರಾಥಮಿಕ ಶಾಲೆಯ 669 ಮಕ್ಕಳ ಶುಚಿತ್ವವನ್ನು ಕುರಿತ ಅರಿವು ಮತ್ತು ಆಚರಣೆಗಳನ್ನು ಕುರಿತ ಮಾಹಿತಿಯನ್ನು ಪಡೆದು, ಅದರ ಆಧಾರದ ಮೇಲೆ ಶುಚಿತ್ವದ ಅಭ್ಯಾಸಗಳಿಗೂ ಸಾಂಕ್ರಾಮಿಕ ರೋಗಗಳ ಹರಡುವಿಕೆಗೂ ಸಂಬಂಧವಿದೆ ಎಂದಿದ್ದಾರೆ.

**ವಿಶ್ವಬ್ಯಾಂಕ್ 2007**ರಲ್ಲಿ ಪ್ರಸ್ತುತಪಡಿಸಿದ **Water and Sanitation Program Field note - "Can Hygiene be Cool and Fun? Insights from School Children in Senegal"** ಎಂಬ ವರದಿಯಲ್ಲಿ ಮಕ್ಕಳಲ್ಲಿ ನೈರ್ಮಲ್ಯವನ್ನು ಉತ್ತೇಜಿಸುವ ಅಂಶಗಳ ಕುರಿತು ಸವಿಸ್ತಾರವಾಗಿ ವಿವರಿಸಲಾಗಿದೆ. ಸೆನೆಗಲ್‌ನ ಡಕಾರ್ ಎಂಬಲ್ಲಿ ಪ್ರಾಥಮಿಕ ಶಾಲಾ ಮಕ್ಕಳ ಮೇಲೆ ಈ ಅಧ್ಯಯನವನ್ನು ಕೈಗೊಳ್ಳಲಾಗಿತ್ತು. ಇದರಲ್ಲಿ ಅವರು ಮಕ್ಕಳಲ್ಲಿ ನೈರ್ಮಲ್ಯವನ್ನು ಕುರಿತ ಅಭಿಪ್ರಾಯಗಳನ್ನು ತಿಳಿಯಲು ಸಹಭಾಗಿತ್ವ ವಿಧಾನವನ್ನು ಬಳಸಿದರು. ಈ ಅಧ್ಯಯನದಿಂದ ಕಂಡು ಬಂದ ಅಂಶವೆಂದರೆ, ಅತ್ಯಂತ ಕಡಿಮೆ ಪ್ರಮಾಣದ ಹಣಕಾಸಿನ ಬಳಕೆಯು ಮಕ್ಕಳ ವೈಯಕ್ತಿಕ ನೈರ್ಮಲ್ಯದ ಮೇಲೆ ಗುರುತರ ಪ್ರಭಾವ ಬೀರಿದ್ದು, ಇಂತಹ ಕಾರ್ಯಯೋಜನೆಗಳನ್ನು ರಚಿಸುವಾಗ ಮತ್ತು ಕಾರ್ಯಗತಗೊಳಿಸುವಾಗ ಕೆಲವು ಸೂಕ್ಷ್ಮ ವಿಚಾರಗಳನ್ನು ಪರಿಗಣಿಸಬೇಕೆಂಬುದು.

## ಸಾಹಿತ್ಯಾಧ್ಯಯನದಿಂದ ಮೂಡಿ ಬಂದ ಪ್ರಮುಖಾಂಶಗಳು

- ವೈಯಕ್ತಿಕ ನೈರ್ಮಲ್ಯ ಕಾಪಾಡುವುದಕ್ಕೂ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದಕ್ಕೂ ಹತ್ತಿರದ ಸಂಬಂಧವಿದೆ.
- ನಗರ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳಿಗೆ ಹೋಲಿಸಿದರೆ ಗ್ರಾಮಾಂತರ ಪ್ರದೇಶದ ಮಕ್ಕಳಲ್ಲಿ ವೈಯಕ್ತಿಕ ಆರೋಗ್ಯ ಕಾಪಾಡಿಕೊಳ್ಳಬೇಕೆಂಬ ಅರಿವಿನ ಮಟ್ಟ ಬಹಳ ಕಡಿಮೆಯಿದೆ, ಹಾಗೆಯೇ ಗಂಡು ಮಕ್ಕಳಿಗೆ ಹೋಲಿಸಿದರೆ ಹೆಣ್ಣು ಮಕ್ಕಳಲ್ಲಿ ವೈಯಕ್ತಿಕ ನೈರ್ಮಲ್ಯದ ಅರಿವಿನ ಮಟ್ಟ ಹೆಚ್ಚಿತ್ತು. ಬಹಳಷ್ಟು ಶಾಲೆಗಳಲ್ಲಿ ಬಾಯಿ ಶುಚಿತ್ವದ ಬಗ್ಗೆಯು ಹೆಚ್ಚಿನ ಅರಿವಿಲ್ಲದಿರುವುದು ಕಂಡು ಬಂದಿದೆ.
- ಮಕ್ಕಳ ವೈಯಕ್ತಿಕ ನೈರ್ಮಲ್ಯ (ಶುಚಿತ್ವ) ಕಾಪಾಡಲು, ಕುಟುಂಬ ಮತ್ತು ಶಾಲೆಗಳು ಜವಾಬ್ದಾರಿ ತೆಗೆದುಕೊಂಡು ಅವರಲ್ಲಿ ಅರಿವು ಮೂಡಿಸಬೇಕು, ಅದರೆ ಇದು ಬಹಳಷ್ಟು ಸಂದರ್ಭಗಳಲ್ಲಿ ಸಾಧ್ಯವಾಗುತ್ತಿಲ್ಲ. ತಾಯಿಯ ಶೈಕ್ಷಣಿಕ ಮಟ್ಟ ಮತ್ತು ಸುರಕ್ಷಿತ ನೈರ್ಮಲ್ಯದ ಅಭ್ಯಾಸಗಳ ನಡುವೆ ನಿಕಟವಾದ ಸಂಬಂಧವಿದೆ.
- ವೈಯಕ್ತಿಕ ನೈರ್ಮಲ್ಯ ಕಾಪಾಡಲು ಅಳವಡಿಸಲಾಗುವ ಆರೋಗ್ಯಪೂರ್ಣ ಅಭ್ಯಾಸಗಳು ನೀರು, ಶೌಚಾಲಯ, ವಸ್ತುಗಳನ್ನು ಕೊಳ್ಳಲು ಬೇಕಾಗುವ ಆರ್ಥಿಕ ನೆರವು, ಮೊದಲಾದ ಸಂಪನ್ಮೂಲಗಳ ಲಭ್ಯತೆಯನ್ನು ಅವಲಂಬಿಸಿರುತ್ತದೆ. ಕೆಲವು ಸಮುದಾಯಗಳಲ್ಲಿ ಆಧುನಿಕ ವೈಯಕ್ತಿಕ ಅಭ್ಯಾಸಗಳನ್ನು ಅಳವಡಿಸಲು ಸಾಂಸ್ಕೃತಿಕ ಅಡಚಣೆಗಳೂ ಇರುವುದು.

❖ ವೈಯಕ್ತಿಕ ನೈರ್ಮಲ್ಯ ಕಾಪಾಡಲು ವಸ್ತುಗಳನ್ನು ಕೊಳ್ಳಲಷ್ಟೇ ಸಂಪನ್ಮೂಲಗಳನ್ನು ಕ್ರೂಢೀಕರಿಸಿದರೆ ಸಾಲದು, ಬದಲಿಗೆ ಶಾಲೆಗಳಲ್ಲಿ ಹಾಗೂ ಸಮುದಾಯದಲ್ಲಿ 'ಅರಿವನ್ನು' ಹೆಚ್ಚಿಸುವ ಕಾರ್ಯಕ್ರಮಗಳನ್ನೂ ಏರ್ಪಡಿಸಬೇಕಾಗುತ್ತದೆ.

ಸಾಹಿತ್ಯಾವಲೋಕನದಿಂದ ಕಂಡು ಬಂದ ಅಂಶವೆಂದರೆ, ವೈಯಕ್ತಿಕ ನೈರ್ಮಲ್ಯದ ಅಭ್ಯಾಸಗಳ ಪರಿಣಾಮದಿಂದ ಮಕ್ಕಳ ಆರೋಗ್ಯದ ಮೇಲೆ ಆಗುವ ಪ್ರಭಾವದ ಕುರಿತು ಹೆಚ್ಚಿನ ಅಧ್ಯಯನಗಳು ಆಗಿಲ್ಲವೆಂಬುದು. ಹಾಗೆಯೇ, ವಿಶ್ವ ಸಂಸ್ಥೆಯ ಅಂಗ ಸಂಸ್ಥೆಗಳಾದ WHO, UNICEF ಮುಂತಾದುವು ಮಾರ್ಗದರ್ಶಿ ಸೂತ್ರಗಳನ್ನು ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಿಗೆ, [**WASH -** Water (ನೀರು), Sanitation (ನೈರ್ಮಲ್ಯ), Hygiene (ಶುಚಿತ್ವ)] ವೈಯಕ್ತಿಕ ನೈರ್ಮಲ್ಯ ಕಾಪಾಡಲು ಒದಗಿಸಿವೆ. ಭಾಗೀದಾರರ ವೈಯಕ್ತಿಕ ನೈರ್ಮಲ್ಯದ ಅಭ್ಯಾಸಗಳನ್ನು ತಿಳಿದುಕೊಳ್ಳಲು, ಆಳವಾದ ಸಂದರ್ಶನಗಳನ್ನು, ಪ್ರಶ್ನಾವಳಿಗಳನ್ನು ಮತ್ತು ಅವಲೋಕನ ವಿಧಾನವನ್ನು ಬಳಸಿ ಅಧ್ಯಯನಗಳನ್ನು ಕೈಗೊಂಡಿರುವುದು ಕಂಡು ಬಂದಿದೆ. ಪ್ರಸ್ತುತ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಪರವಾಗಿ 'ಔಟ್‌ರಿಚ್' ಸಂಸ್ಥೆ ಕೈಗೊಂಡಿರುವ ಮೌಲ್ಯಮಾಪನ ಅಧ್ಯಯನವು ಕರ್ನಾಟಕ ರಾಜ್ಯದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ವಾಸಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳಿಗೆ ಸರ್ಕಾರದಿಂದ ಒದಗಿಸಲಾಗುವ 'ನೈರ್ಮಲ್ಯ ಕಿಟ್' ಕುರಿತಾದ ಮೌಲ್ಯಮಾಪನದ ಅಧ್ಯಯನವಾಗಿದೆ.

## References


**1.** Abhay B Mane, Nandika S Reddy, Partha Reddy, Chetana KV, Srijith S Nair and Sriniwas T. *"***Differences of Hand Hygiene and its Correlates among School going Children in Rural and Urban Areas of Karnataka, India***". http://www.archivesofmedicine.com***.**

2. Amitha M. Hegde, AdrijaKar, Lekshmi R. &Minu Mathew. (2016). "**Knowledge, Attitude and Practices of Oral and Personal Hygiene to Prevent Communicable Diseases among Students in and around the City of Mangalore: An Epidemiological Survey**", *NUJHS* Vol.6, No.2, 2016, June.

3. Ansari S.Y. and Warbhe P.A. (2014). *"***Assessment of the Knowledge and Practice regarding Personal Hygiene among School Children from an Urban Area***", International Journal of Current Medical and Applied Sciences*, Vol.4. Issue 1, September: 2014. pp: l -12.

4. Jasper, Christian, Le, Thanh-Tam and Bartram, Jamie. (2012). *"***Water and Sanitation in Schools: A Systematic Review of the Health and Educational Outcomes***". International Journal of Environmental Research and Public Health.*9(8), 2772-2787. https://doi.org/10.3390/ijerph9082772.

5. Khatoon, R., Sachan, B., Khan, M. A., & Srivastava, J. P. (2017). *"***Impact of School Health Education Program on Personal Hygiene among School Children of Lucknow District***". Journal of Family Medicine and Primary Care*, 6(1), 97-100. doi:10.4103/2249-4863.214973.

6. Lal, B Suresh and Kavitha, G. (2016). *"***Assessment of Personal Hygiene Knowledge and Practices: An Empirical Study of Schooling Children in Warangal***". International Journal of Science and Research (IJSR)*. 5. 6-391. 10.21275/ART20161207.

7. Nayana, Umarani.J. (2014). *"***Knowledge of Children regarding Oral Hygiene: A School based Descriptive Study***", Journal of Scientific and Innovative Research*. 201 4: 3 (2): 134-138.

8. Paliwal Vismita, Paliwal C. K., Fatma Nishi and ChaturvediSurbhi. (2014). *"***Personal Hygiene Habits among School-Going Children in Rural Areas of Jaipur, Rajasthan, India***", International Journal of Scientific Research and Reviews*, 2014,3 (Z), 126 – 142.

9. Ravi Kumar, Deepak Joshi. (2017*)."***Awareness of Dental Hygiene amongst the Primary School Children of Low Socio-economic Strata***". International Journal of Contemporary Paediatrics,* 2017 Jan: 4(1):28 -35.

10. Sarkar M. (2013). *"***Personal Hygiene among Primary School Children Living in a Slum of Kolkata. India***", Journal of Preventive Medicine and Hygiene***. 54 (**3) 153-158.

11. Seenivasan P, A. Evangeline Mary, K. Caroline Priya, Ezhil Devi, S. Nanthini, NuzrathJahan S.A, and Samyuktha. D. (2016). *"***A Cross Sectional Study on the Health Hygiene Status of School Children in North Chennai***"*, *Stanley Medical Journal*Vol: 3, Issue 2, April –June.
12. Vivas A, Gelaye B, Aboset N, Kumie A Berhane Y, Williams MA. (2010). "Knowledge, Attitudes, and Practices (KAP) of Hygiene among School Children in Angolela, Ethiopia". *Journal of Preventive Medicine and Hygiene*. 5l (2):73-79.
13. World Bank. (2007). **"Water and Sanitation Program Can Hygiene be Cool and Fun: Insights from School Children in Senegal***"*. In, *Water and Sanitation Program Field Note*.http://www.comminit.com/en/n ode/2641 52/38.

******

# II

# ಮೌಲ್ಯಮಾಪನ ವೈಧಾನಿಕತೆ

## ಅಧ್ಯಯನದ ಉದ್ದೇಶ ಮತ್ತು ಗುರಿಗಳು

### ಉದ್ದೇಶ

ಈ ಅಧ್ಯಯನದ ಮೂಲ ಉದ್ದೇಶವೆಂದರೆ ಶುಚಿ ಸಂಭ್ರಮ ಕಿಟ್ ಯೋಜನೆಯನ್ನು ಕುರಿತಂತೆ, ಅದರ ಫಲಾನುಭವಿಗಳಿಗಿರುವ ಅರಿವು, ಅದರ ಉಪಯುಕ್ತತೆ ಮತ್ತು ಪ್ರಭಾವವನ್ನು ಅಧ್ಯಯನ ಮಾಡುವುದೇ ಆಗಿದೆ. ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಇರುವ ಸವಾಲುಗಳು ಹಾಗೂ ಅದಕ್ಕೆ ಸಂಬಂಧಿಸಿದ ಪ್ರಮುಖ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವುದು ಕೂಡ ಈ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿರುವಂಥ ವಿಚಾರ. ಶುಚಿ ಸಂಭ್ರಮ ಯೋಜನೆಯ ವಿವಿಧ ಭಾಗಿದಾರರಿಗೆ ಕಿಟ್ ತಲುಪಿಸುವವರೆಗೂ (ಕಿಟ್‌ಗಳನ್ನು ಪಡೆದುಕೊಳ್ಳುವುದರಲ್ಲಿ ಇರುವ ಅಡ್ಡಿಗಳು ಹಾಗೂ ಸಂಭವಿಸಬಹುದಾದ ಕಳುವು ಇತ್ಯಾದಿ) ಒದಗಿ ಬರಬಹುದಾದ ವಿವಿಧ ಆತಂಕಗಳನ್ನು ಕುರಿತ ವಿಶ್ಲೇಷಣೆಯನ್ನು ಈ ಅಧ್ಯಯನ ಒಳಗೊಂಡಿದೆ. ಯೋಜನೆ ಮತ್ತಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಅಗತ್ಯವಾಗುವಂಥ ಸೂಚನೆ-ಸಲಹೆಗಳನ್ನು ನೀಡುವುದು ಕೂಡ ಈ ಅಧ್ಯಯನದ ಪ್ರಮುಖ ಉದ್ದೇಶಗಳಲ್ಲಿ ಒಂದು.

### ಗುರಿಗಳು

ಈ ಅಧ್ಯಯನದ ಪ್ರಮುಖ ಗುರಿಗಳು ಕೆಳಕಂಡಂತಿವೆ:

1. ಫಲಾನುಭವಿಗಳಲ್ಲಿ ವೈಯಕ್ತಿಕ ಶುಚಿತ್ವವನ್ನು ಕುರಿತ ಅರಿವು, ಗ್ರಹಿಕೆ ಮತ್ತು ಅಭ್ಯಾಸಗಳ ಬಗ್ಗೆ ತಿಳಿಯುವುದು.
2. ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳ ವಿದ್ಯಾರ್ಥಿಗಳಲ್ಲಿ ಈ ಯೋಜನೆಯನ್ನು ಕುರಿತು ಇರುವ ಜ್ಞಾನವನ್ನು ಗ್ರಹಿಸುವುದು.
3. ಫಲಾನುಭವಿಗಳು ಮತ್ತು ಅವರ ಕುಟುಂಬಗಳಿಗೆ ಈ ಯೋಜನೆಯ ಉಪಯುಕ್ತತೆ ಹಾಗೂ ಅದರ ಪ್ರಭಾವದ ಪ್ರಮಾಣವನ್ನು ನಿರ್ಣಯಿಸುವುದು.
4. ವೈಯಕ್ತಿಕ ಶುಚಿತ್ವ ಕಾಪಾಡಲು ಒದಗಿಸಲಾಗಿರುವ ಈ ಕಿಟ್ ಫಲಾನುಭವಿಗಳಿಗೆ ಎಷ್ಟು ಸಂತೃಪ್ತಿ ತಂದಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು.
5. ಶುಚಿ ಸಂಭ್ರಮ ಕಿಟ್ ಯೋಜನೆಯ ಮೇಲುಸ್ತುವಾರಿ ವ್ಯವಸ್ಥೆಯನ್ನು ಪರಿಶೀಲಿಸುವುದು.
6. ಈ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಕಿಟ್‌ಗಳನ್ನು ತರಿಸುವ ಮತ್ತು ವಿವಿಧ ಫಲಾನುಭವಿಗಳಿಗೆ ವಿತರಿಸುವುದನ್ನು ಒಳಗೊಂಡಂತೆ ಎದುರಾಗಬಹುದಾದ ಸಮಸ್ಯೆಗಳು ಹಾಗೂ ಸವಾಲುಗಳನ್ನು ಗುರುತಿಸುವುದು.
7. ಈ ಯೋಜನೆಯು ಉದ್ದೇಶಿತ ಗುರಿಯನ್ನು ಸಾಧಿಸಲು ಹಾಗೂ ಇನ್ನಷ್ಟು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಹಕಾರಿಯಾಗುವಂತೆ ಸೂಕ್ತ ಸಲಹೆಗಳನ್ನು ನೀಡುವುದು ಹಾಗೂ ಸಮರ್ಪಕವಾದ ಮತ್ತು ಸಾಧ್ಯವಾಗಬಲ್ಲ ಪರ್ಯಾಯ ಮಾದರಿಗಳನ್ನು ಗುರುತಿಸುವುದು.

## ಸಂಶೋಧನಾ ವಿನ್ಯಾಸ

ಮೌಲ್ಯಮಾಪನವನ್ನು ಕೈಗೊಳ್ಳಲು ಅಂತರ್-ವಿಭಾಗೀಯ ಅಧ್ಯಯನ ಮಾದರಿಯನ್ನು ಅಳವಡಿಸಿಕೊಳ್ಳಲಾಗಿದೆ. ಬಹು ಹಂತ ವಿಭಜಿತ ಮಾದರಿಯನ್ನು ಮಾಹಿತಿ ಸಂಗ್ರಹಣೆಗಾಗಿ ಬಳಸಿಕೊಳ್ಳಲಾಗಿದೆ.

## ಮಾದರಿ ಆಯ್ಕೆಯ ಪ್ರಕ್ರಿಯೆ

ಈ ಅಧ್ಯಯನದಲ್ಲಿ ಬಹು ಹಂತ ವಿಭಜಿತ ಮಾದರಿಯನ್ನು ಘಟಕದ ಗಾತ್ರಗನುಗುಣವಾಗಿ ಸಂಭವನೀಯತೆಯ ತತ್ವವನ್ನು ಅಳವಡಿಸಿ ಆಯ್ಕೆ ಮಾಡಲಾಗಿದೆ. ಬಹು ಹಂತ ಮಾದರಿಯಲ್ಲಿ ಬೃಹತ್ ವಿಶ್ವವನ್ನು ವಿಭಿನ್ನ ಗುಂಪಗಳನ್ನಾಗಿ ವಿಂಗಡಿಸಿ. ಪ್ರತಿ ಗುಂಪಿನಿಂದಲೂ ಆ ಗುಂಪನ್ನು ಪ್ರತಿನಿಧಿಸುವ ಮಾದರಿಯನ್ನು ಆಯ್ಕೆ ಮಾಡಲಾಗುತ್ತದೆ. ಪ್ರಸಕ್ತ ಅಧ್ಯಯನದಲ್ಲಿ ಮಾದರಿ ಆಯ್ಕೆಯನ್ನು ವಿವಿಧ ಹಂತಗಳಲ್ಲಿ ಮಾಡಲಾಗಿದೆ. ಅವುಗಳೆಂದರೆ ವಿಭಾಗ – ಜಿಲ್ಲೆ – ತಾಲ್ಲೂಕು, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿರುವವರು – ಹೀಗೆ ವಿಭಿನ್ನ ಗುಂಪುಗಳಿಂದ ಮಾದರಿಯನ್ನು ಆಯ್ಕೆ ಮಾಡಲಾಗಿದೆ. ವಿಭಜಿತ ಮಾದರಿ, ಗುಚ್ಛ ಮಾದರಿ ಹಾಗೂ ಸರಳ ಯಾದೃಚ್ಛಿಕ ಮಾದರಿ – ಈ ಮಾದರಿ ಆಯ್ಕೆ ವಿಧಾನಗಳನ್ನು ಸಂದರ್ಭೋಚಿತವಾಗಿ ಬಳಸಲಾಗಿದೆ. ಈ ಯೋಜನೆಯನ್ನು ರಾಜ್ಯದಾದ್ಯಂತ ಅಳವಡಿಸಿರುವುದರಿಂದ ಎಲ್ಲ ಕಂದಾಯ ವಿಭಾಗಗಳಿಂದಲೂ ಪ್ರಾತನಿಧ್ಯವನ್ನು ಹೊಂದಲು, ಪ್ರತಿ ವಿಭಾಗದಿಂದ ಎರಡು ಜಿಲ್ಲೆಗಳನ್ನು ಅಧ್ಯಯನ ಮಾದರಿಯನ್ನಾಗಿ ಆಯ್ಕೆ ಮಾಡಲಾಗಿದೆ. ಮಾದರಿ ಜಿಲ್ಲೆಗಳನ್ನು ಆಯ್ಕೆ ಮಾಡುವಾಗ ಗಣನೆಗೆ ತೆಗೆದುಕೊಂಡ ಅಂಶಗಳು ಈ ಕೆಳಕಂಡಂತಿವೆ:

I. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ, ಪರಿಶಿಷ್ಟ ಜಾತಿಯ ಜನಸಂಖ್ಯೆ ಅತಿ ಹೆಚ್ಚಾಗಿರುವ ಒಂದು ಜಿಲ್ಲೆ.
II. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಅತಿ ಹೆಚ್ಚಾಗಿರುವ ಒಂದು ಜಿಲ್ಲೆ.
III. ಇವುಗಳ ಜೊತೆಗೆ, ವಲಸೆಗೆ ಸಂಬಂಧಿಸಿದ ವಿಚಾರಗಳನ್ನು ಪರಿಶೀಲಿಸಲು ಬಳ್ಳಾರಿ ಜಿಲ್ಲೆಯನ್ನು ಸೇರಿಸಲಾಗಿದೆ.

ವಸತಿನಿಲಯಗಳ ಆಯ್ಕೆಯನ್ನು ಯಾದೃಚ್ಛಿಕ ಮಾದರಿಯ ತತ್ವವನ್ನು ಅಳವಡಿಸಿ ಆಯ್ಕೆ ಮಾಡಲಾಯಿತು. ToR ನ ಅನುಗುಣವಾಗಿ, ಕರ್ನಾಟಕದ ನಾಲ್ಕು ಕಂದಾಯ ವಿಭಾಗಗಳಿಂದ, ಪ್ರತಿ ವಿಭಾಗದಿಂದ ಎರಡು ಜಿಲ್ಲೆಗಳಂತೆ, ಒಟ್ಟು ಎಂಟು ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಇವುಗಳಲ್ಲಿ ನಾಲ್ಕು ಜಿಲ್ಲೆಗಳು ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆಯನ್ನೂ ನಾಲ್ಕು ಜಿಲ್ಲೆಗಳು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯನ್ನೂ ಅತಿ ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುವಂಥವು. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ವಸತಿನಿಲಯಗಳ ಪಟ್ಟಿಯನ್ನು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಪಡೆಯಲಾಯಿತು. ಶುಚಿ ಸಂಭ್ರಮ ಯೋಜನೆಯನ್ನು ಕುರಿತ ಮಾಹಿತಿಯನ್ನು ವಿದ್ಯಾರ್ಥಿಗಳು ಮತ್ತು ನಿಲಯಪಾಲಕರಿಂದ ಸಂಗ್ರಹಿಸಲು, ನೀಡಲಾಗಿತ್ತು. ಪ್ರತಿ ವಸತಿನಿಲಯದಿಂದ, ToR ನಿಗದಿಪಡಿಸಿದ ಅನ್ವಯ 20 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಯಿತು. ವಲಸೆಯ ವಿಚಾರವನ್ನು ಪರಿಶೀಲಿಸಲು ಬಳ್ಳಾರಿ ಜಿಲ್ಲೆಯನ್ನು ಮಾದರಿಯಲ್ಲಿ ಸೇರ್ಪಡೆ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ-2ರಲ್ಲಿ ಅಧ್ಯಯನ ಮಾದರಿಯನ್ನು ಕುರಿತ ವಿವರಗಳು ಲಭ್ಯವಿದೆ. ಪ್ರತಿ ಜಿಲ್ಲೆಯಲ್ಲೂ ಅಧ್ಯಯನಕ್ಕೆ ಒಳಪಟ್ಟ ಒಟ್ಟು ವಸತಿನಿಲಯಗಳ ಸಂಖ್ಯೆ ಹಾಗೂ ToRನಲ್ಲಿ ನಿಗದಿಪಡಿಸಿರುವ ಸಂಖ್ಯೆ-ಇವೆರಡನ್ನೂ ತೋರಿಸಲಾಗಿದೆ.

**ಕೋಷ್ಟಕ 2: ಅಧ್ಯಯನಕ್ಕೆ ಒಳಪಟ್ಟ ವಸತಿನಿಲಯಗಳ ಸಂಖ್ಯೆ**

| ವಿಭಾಗ | ಪರಿಶಿಷ್ಟ ಜಾತಿ | ಮೆಟ್ರಿಕ್ ಪೂರ್ವ | ಮೆಟ್ರಿಕ್ ನಂತರ | ಒಟ್ಟು | ಪರಿಶಿಷ್ಟ ಪಂಗಡ | ಮೆಟ್ರಿಕ್ ಪೂರ್ವ | ಮೆಟ್ರಿಕ್ ನಂತರ | ಒಟ್ಟು | ಒಟ್ಟು ಮೆಟ್ರಿಕ್ ಪೂರ್ವ | ಒಟ್ಟು ಮೆಟ್ರಿಕ್ ನಂತರ | ಸಮಗ್ರ ಮೊತ್ತ |
|---|---|---|---|---|---|---|---|---|---|---|---|
| ಕಲಬುರ್ಗಿ | ಕಲಬುರ್ಗಿ<br>ToR<br>ವಾಸ್ತವ | 72<br>72 | 27<br>27 | 99<br>99 | ರಾಯಚೂರು | 11<br>10 | 08<br>08 | 19<br>18 | 83<br>82 | 35<br>35 | 118<br>117 |
| | ToR<br>ವಾಸ್ತವ | | | | ಬಳ್ಳಾರಿ<br>** | 11<br>11 | 04<br>04 | 15<br>15 | 11<br>11 | 04<br>04 | 15<br>15 |
| ಮೈಸೂರು | ಚಾಮರಾಜನಗರ<br>ToR<br>ವಾಸ್ತವ | 40<br>40 | 21<br>16 | 61<br>56 | ಮೈಸೂರು<br>*** | 12<br>12 | 03<br>03 | 15<br>15 | 52<br>52 | 24<br>19 | 76<br>71 |
| ಬೆಂಗಳೂರು | ಕೋಲಾರ*<br>ToR<br>ವಾಸ್ತವ | 53<br>50 | 24<br>19 | 77<br>69 | ಚಿತ್ರದುರ್ಗ | 7<br>7 | 04<br>04 | 11<br>11 | 60<br>57 | 28<br>23 | 88<br>80 |
| ಬೆಳಗಾವಿ | ವಿಜಯಪುರ<br>ToR<br>ವಾಸ್ತವ | 57<br>56 | 14<br>16 | 71<br>72 | ಹಾವೇರಿ | 4<br>4 | 04<br>04 | 08<br>08 | 61<br>60 | 18<br>20 | 79<br>80 |
| | ಒಟ್ಟು ವಿದ್ಯಾರ್ಥಿ ನಿಲಯಗಳು<br>ToR<br>ವಾಸ್ತವ | **222<br>218** | **86<br>78** | **308<br>296** | | **45<br>44** | **23<br>23** | **68<br>67** | **267<br>262** | **109<br>101** | **376<br>363** |

*ಬೆಂಗಳೂರು ವಿಭಾಗ: ಕೋಲಾರ: 8 ವಸತಿನಿಲಯಗಳು ಮುಚ್ಚಿವೆ. ಆದರೆ ToRನಲ್ಲಿ ನೀಡಿರುವ ವಿದ್ಯಾರ್ಥಿಗಳ ಗರಿಷ್ಠ ಸಂಖ್ಯೆಯನ್ನು ತಲುಪಲು ಸಂಬಂಧಪಟ್ಟ ಇಲಾಖೆ ನೀಡಿದ ನಿಲಯಗಳ ಪಟ್ಟಿಯಿಂದಲೇ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಯಿತು.

**ಕಲಬುರ್ಗಿ ವಿಭಾಗ: ಬಳ್ಳಾರಿ ಜಿಲ್ಲೆಯನ್ನು ವಲಸೆಗೆ ಸಂಬಂಧಿಸಿದ ವಿಚಾರಗಳ ಪರಿಶೀಲನೆಗಾಗಿ ಆರಿಸಲಾಯಿತು.

***ಮೈಸೂರು ವಿಭಾಗ: ಚಾಮರಾಜನಗರ: 05 ವಸತಿನಿಲಯಗಳು ಮುಚ್ಚಿವೆ. ಆದರೆ ToRನಲ್ಲಿ ನೀಡಿರುವ ವಿದ್ಯಾರ್ಥಿಗಳ ಗರಿಷ್ಠ ಸಂಖ್ಯೆಯನ್ನು ತಲುಪಲು ಸಂಬಂಧಿಸಿದ ಇಲಾಖೆ ನೀಡಿದ ಪಟ್ಟಿಯಿಂದಲೇ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಯಿತು.

ಒಟ್ಟು 363 ವಸತಿನಿಲಯಗಳಲ್ಲಿ, 262 ಮೆಟ್ರಿಕ್ ಪೂರ್ವ ಮತ್ತು 101 ಮೆಟ್ರಿಕ್ ನಂತರದ ವಸತಿನಿಲಯಗಳಾಗಿವೆ. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಕಾಲೇಜು ವಿದ್ಯಾರ್ಥಿಗಳು (+2 ಮತ್ತು ನಂತರದ ಹಂತಗಳಲ್ಲಿರುವವರು) ನೆಲೆಸಬಹುದಾದರೆ, ಮೆಟ್ರಿಕ್ ಪೂರ್ವ ವಸತಿನಿಲಯಗಳಲ್ಲಿ 5-10 ತರಗತಿಗಳಲ್ಲಿರುವ ವಿದ್ಯಾರ್ಥಿಗಳು ನೆಲೆಸಿರುತ್ತಾರೆ. 363 ವಸತಿನಿಲಯಗಳಲ್ಲಿ, 22 ಬಾಲಕಿಯರ ಮೆಟ್ರಿಕ್ ಪೂರ್ವ ವಸತಿನಿಲಯಗಳು ಹಾಗೂ 150 ಬಾಲಕರ ವಿದ್ಯಾರ್ಥಿ ನಿಲಯಗಳು

ಗ್ರಾಮೀಣ ಪ್ರದೇಶಗಳಲ್ಲಿವೆ. 35 ಬಾಲಕಿಯರ ಹಾಗೂ 55 ಬಾಲಕರ ಮೆಟ್ರಿಕ್ ಪೂರ್ವ ವಸತಿನಿಲಯಗಳು ನಗರ ಪ್ರದೆಶಗಳಲ್ಲಿವೆ. ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ 01 ಬಾಲಕಿಯರ ಮತ್ತು ಏಳು ಬಾಲಕರ ವಸತಿನಿಲಯಗಳು ಗ್ರಾಮೀಣ ಪ್ರದೇಶಗಳಲ್ಲಿದ್ದರೆ, 45 ಬಾಲಕಿಯರ ಹಾಗೂ 48 ಬಾಲಕರ ವಸತಿನಿಲಯಗಳು ನಗರ ಪ್ರದೇಶಗಳಲ್ಲಿವೆ. ವಿದ್ಯಾರ್ಥಿಗಳ ಲಿಂಗವಾರು ಹಾಗೂ ಪ್ರದೇಶ(ಗ್ರಾಮೀಣ ಮತ್ತು ನಗರ)ವಾರು ಹಂಚಿಕೆಯನ್ನು ಕೋಷ್ಟಕ ಸಂಖ್ಯೆ 3 ಹಾಗೂ ಚಿತ್ರ ಸಂಖ್ಯೆಗಳು 1 ಮತ್ತು 2ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 3: ವಸತಿನಿಲಯಗಳ ಲಿಂಗ ಹಾಗೂ ಪ್ರದೇಶವಾರು ಹಂಚಿಕೆ**

| | ಮೆಟ್ರಿಕ್-ಪೂರ್ವ | | | | ಮೆಟ್ರಿಕ್-ನಂತರ | | | |
|---|---|---|---|---|---|---|---|---|
| ಜಿಲ್ಲೆಗಳು | ಗ್ರಾಮೀಣ | | ನಗರ | | ಗ್ರಾಮೀಣ | | ನಗರ | |
| ಲಿಂಗ | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| **ಚಾಮರಾಜನಗರ(ಪ.ಜಾ)** | 25 | 6 | 4 | 5 | 2 | * | 5 | 9 |
| **ಚಿತ್ರದುರ್ಗ(ಪ.ಪಂ)** | 4 | * | 2 | 1 | * | * | 2 | 2 |
| **ಹಾವೇರಿ(ಪ.ಪಂ)** | 1 | * | 3 | * | 2 | * | * | 2 |
| **ಕಲಬುರ್ಗಿ(ಪ.ಜಾ)** | 40 | * | 22 | 10 | * | * | 15 | 12 |
| **ಕೋಲಾರ(ಪ.ಜಾ)** | 29 | 6 | 7 | 8 | 1 | * | 12 | 6 |
| **ಮೈಸೂರು (ಪ.ಪಂ)** | 3 | 3 | 5 | 1 | * | * | 2 | 1 |
| **ರಾಯಚೂರು(ಪ.ಪಂ)** | 2 | 3 | 3 | 2 | 1 | * | 3 | 4 |
| **ವಿಜಯಪುರ(ಪ.ಜಾ)** | 39 | 4 | 7 | 6 | 1 | * | 8 | 7 |
| **ಬಳ್ಳಾರಿ** | 7 | * | 2 | 2 | * | 1 | 1 | 2 |
| **ಒಟ್ಟು** | **150** | **22** | **55** | **35** | **7** | **1** | **48** | **45** |

*ಅಧ್ಯಯನ ಕ್ಷೇತ್ರದಲ್ಲಿ ಈ ಜಿಲ್ಲೆಗಳಲ್ಲಿ ವಸತಿನಿಲಯಗಳು ಇರಲಿಲ್ಲ

**ಚಿತ್ರ 1: ಪ್ರದೇಶ ಮತ್ತು ಲಿಂಗವಾರು ಮೆಟ್ರಿಕ್ ಪೂರ್ವ ವಸತಿನಿಲಯಗಳ ಹಂಚಿಕೆ**



**ಚಿತ್ರ 2: ಪ್ರದೇಶ ಮತ್ತು ಲಿಂಗವಾರು ಮೆಟ್ರಿಕ್ ನಂತರದ ವಸತಿನಿಲಯಗಳ ಹಂಚಿಕೆ**




ಕೋಷ್ಟಕ ಸಂಖ್ಯೆ 3 ಹಾಗೂ 1 ಮತ್ತು 2ನೇ ಸಂಖ್ಯೆಗಳ ಚಿತ್ರಗಳಲ್ಲಿ ನಮೂದಿತವಾಗಿರುವ ಅಂಕಿ-ಅಂಶಗಳ ಪರಿಶೀಲನೆಯಿಂದ ತಿಳಿದು ಬರುವುದೇನೆಂದರೆ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳೆರಡರ ವಿಚಾರದಲ್ಲೂ ಗಂಡು ಮಕ್ಕಳ ವಸತಿನಿಲಯಗಳಿಗಿಂತ ಹೆಣ್ಣು ಮಕ್ಕಳ ವಸತಿನಿಲಯಗಳ ಸಂಖ್ಯೆ ಕಡಿಮೆ ಇದೆ ಎನ್ನುವ ವಿಚಾರ. ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮೀಣ ಹೆಣ್ಣು ಮಕ್ಕಳನ್ನು ತಲುಪಿ, ಅವರಲ್ಲಿ ವೈಯಕ್ತಿಕ ನೈರ್ಮಲ್ಯವನ್ನು ಕುರಿತ ಅರಿವನ್ನು ಮೂಡಿಸಬೇಕೆಂದರೆ, ಹೆಚ್ಚಿನ ಸಂಖ್ಯೆಯಲ್ಲಿ ಅವರಿಗಾಗಿ ವಸತಿನಿಲಯಗಳನ್ನು ತೆರೆಯಬೇಕು. ಅದರಲ್ಲೂ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಬಾಲಕಿಯರಿಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಮೆಟ್ರಿಕ್ ನಂತರದ ವಸತಿನಿಲಯಗಳನ್ನು ತೆರೆಯಬೇಕಾದ ಅವಶ್ಯಕತೆಯಿದೆ. ಬಾಲಕಿಯರ ಜೀವನದಲ್ಲಿ ಹದಿಹರೆಯದ ಹಂತ ಬಹು ಮುಖ್ಯವಾಗಿದ್ದು, ಈ ಹಂತದಲ್ಲಿ ಅವರಲ್ಲಿ ವೈಯಕ್ತಿಕ ನೈರ್ಮಲ್ಯವಿನ ಬಗ್ಗೆ ಅರಿವನ್ನು ಮೂಡಿಸುವುದು ಹಾಗೂ ಅದಕ್ಕೆ ಅಗತ್ಯವಾದ ವಸ್ತುಗಳನ್ನು ಒದಗಿಸುವುದು ಬಹು ಮುಖ್ಯವಾದದ್ದು. ವಸತಿನಿಲಯಗಳಲ್ಲಿ ನೈರ್ಮಲ್ಯ ಪಾಲನೆಗಾಗಿ ಕಿಟ್‌ಗಳನ್ನು ಒದಗಿಸಲು ಅವಕಾಶವಿರುವುದರಿಂದ, ಅವರಿಗೆ ವಸತಿನಿಲಯಗಳಲ್ಲಿ ವಸತಿ ಸೌಕರ್ಯವನ್ನು ಒದಗಿಸುವುದು ಹಾಗೂ ಆರೋಗ್ಯಪೂರ್ಣ ಜೀವನವನ್ನು ನಡೆಸಲು ಅನುವು ಮಾಡಿಕೊಡುವುದು-ಇವೆರಡರ ನಡುವೆ ನಿಕಟ ಸಂಬಂಧವಿದೆ.

ToR ಪ್ರಕಾರ, ಆಯ್ಕೆಯಾದ ಪ್ರತಿ ಜಿಲ್ಲೆಯಿಂದಲೂ ಒಂದೊಂದರಂತೆ 8 ವಸತಿನಿಲಯಗಳನ್ನು ನಿಯಂತ್ರಿತ ಗುಂಪಾಗಿ ಆಯ್ಕೆ ಮಾಡಬೇಕಾಗಿತ್ತು, ಇದರ ಉದ್ದೇಶವೆಂದರೆ ಶುಚಿ ಸಂಭ್ರಮ ಕಿಟ್ ವಿತರಣೆಯಾಗದಿರುವ ವಸತಿನಿಲಯಗಳಲ್ಲಿ, ನಿಲಯವಾಸಿಗಳ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಿ ಕಿಟ್ ಬಳಸುವವರು ಮತ್ತು ಬಳಸದವರು – ಈ ಎರಡು ಗುಂಪುಗಳ ಆರೋಗ್ಯ ಸ್ಥಿತಿಯನ್ನು ತುಲನೆ ಮಾಡುವುದು. ಆದರೆ ವಾಸ್ತವದಲ್ಲಿ ಪ್ರತಿ ಸರ್ಕಾರಿ ವಸತಿನಿಲಯವನ್ನೂ ಈ ಯೋಜನೆಯ ವ್ಯಾಪ್ತಿಗೆ ತಂದಿರುವುದರಿಂದ ಕಿಟ್ ಯೋಜನೆ ಜಾರಿಯಲ್ಲಿಲ್ಲದ ವಸತಿನಿಲಯವನ್ನು ಗುರುತಿಸಲು ಆಗುವುದಿಲ್ಲ. ಖಾಸಗಿ ವಸತಿನಿಲಯಗಳನ್ನು ಪರಿಶೀಲಿಸಿದಾಗ, ನೈರ್ಮಲ್ಯವನ್ನು ಕಾಪಾಡುವ ದೃಷ್ಟಿಯಿಂದ ಅವುಗಳಲ್ಲಿಯೂ ವಿವಿಧ ಬಗೆಯ ಆರೋಗ್ಯ ರಕ್ಷಕ ಕಿಟ್‌ಗಳನ್ನು ನೀಡಿದ್ದು ಕಂಡು ಬಂತು. ಹಾಗಾಗಿ, ToR ನಲ್ಲಿ ಸೂಚಿಸಿದ ಹಾಗೆ ನಿಯಂತ್ರಿತ ಗುಂಪಿಗೆ ಸೇರಿದ 8 ವಸತಿನಿಲಯಗಳನ್ನು ಸೇರಿಸಲಾಗಿಲ್ಲ. ToRನ ಅನ್ವಯ ಅಧ್ಯಯನದ ಮಾದರಿಯಲ್ಲಿ ಸೇರ್ಪಡೆಯಾಗಬೇಕಿದ್ದ ವಿದ್ಯಾರ್ಥಿಗಳ ಸಂಖ್ಯೆ 7700 (376 ವಸತಿನಿಲಯಗಳಿಂದ). ಆದರೆ ನಿಯಂತ್ರಿತ ಗುಂಪು ಲಭ್ಯವಿರದ ಕಾರಣದಿಂದಾಗಿ (9 ಜಿಲ್ಲೆಗಳು x 20 ವಿದ್ಯಾರ್ಥಿಗಳು = 180; 7700-180-7,520), ಅಂತಿಮವಾಗಿ ಅಧ್ಯಯನ ಮಾದರಿಯಲ್ಲಿ ಸೇರ್ಪಡೆಯಾಗಿರುವುದು 9 ಜಿಲ್ಲೆಗಳ 363 ವಸತಿನಿಲಯಗಳಿಂದ 7600 ವಿದ್ಯಾರ್ಥಿ – ವಿದ್ಯಾರ್ಥಿನಿಯರು.

ಕೋಷ್ಟಕ ಸಂಖ್ಯೆ 3 ರಿಂದ ತಿಳಿದು ಬರುವುದೇನೆಂದರೆ, ಪ್ರತಿ ಕಂದಾಯ ವಿಭಾಗದಲ್ಲೂ, ಒಂದು ಜಿಲ್ಲೆಯನ್ನು ಪರಿಶಿಷ್ಟ ಜಾತಿ ಜಿಲ್ಲೆ ಎಂತಲೂ, ಒಂದು ಜಿಲ್ಲೆಯನ್ನು ಪರಿಶಿಷ್ಟ ಬುಡಕಟ್ಟು ಜಿಲ್ಲೆ ಎಂತಲೂ ಆಯ್ಕೆ ಮಾಡಲಾಗಿದೆ ಎಂಬುದು. ಕಲಬುರ್ಗಿ ವಿಭಾಗದ ಬಳ್ಳಾರಿ ಜಿಲ್ಲೆಯನ್ನು, ಶಾಲಾ ಮಕ್ಕಳ ಶಾಲೆಯಲ್ಲಿ ಉಳಿಯುವಿಕೆಯ ಮೇಲೆ ವಲಸೆಯ ಪ್ರಭಾವವನ್ನು ಅರಿಯಲು ಆಯ್ಕೆ ಮಾಡಲಾಯಿತು.

ಈ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟವರು 363 ವಸತಿನಿಲಯಗಳಲ್ಲಿ ವಾಸವಾಗಿದ್ದ 7600 ವಿದ್ಯಾರ್ಥಿಗಳು. ಇವುಗಳಲ್ಲಿ 262 ಮೆಟ್ರಿಕ್ ಪೂರ್ವ ಮತ್ತು 101 ಮೆಟ್ರಿಕ್ ನಂತರದ ವಸತಿನಿಲಯಗಳಾಗಿದ್ದವು. ಮಾದರಿಯ ಜಿಲ್ಲಾವಾರು, ವಸತಿನಿಲಯದ ಬಗೆ ಹಾಗೂ ಲಿಂಗವಾರು ಚಿತ್ರಣ ಕೋಷ್ಟಕ 4ರಲ್ಲಿ ಕಂಡು ಬರುತ್ತದೆ.

**ಕೋಷ್ಟಕ 4: ಮಾದರಿ ವಿದ್ಯಾರ್ಥಿಗಳು ಜಿಲ್ಲೆ, ವಸತಿನಿಲಯದ ಬಗೆ ಮತ್ತು ಲಿಂಗವಾರು ಹಂಚಿಕೆ**

| ಆದಾಯ ವಿಭಾಗ | ಜಿಲ್ಲೆ | ವಸತಿನಿಲಯಗಳ ಮೆಟ್ರಿಕೆ - ಪೂರ್ವ ವಿದ್ಯಾರ್ಥಿಗಳ ಸಂಖ್ಯೆ | | ವಸತಿನಿಲಯಗಳ ಮೆಟ್ರಿಕೆ - ನಂತರದ ವಿದ್ಯಾರ್ಥಿಗಳ ಸಂಖ್ಯೆ | | ಒಟ್ಟು |
|---|---|---|---|---|---|---|
| | | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | |
| 1.ಕಲಬುರ್ಗಿ<br>ಪ.ಜಾ ಜಿಲ್ಲೆ<br>ಪ.ಪಂ. ಜಿಲ್ಲೆ | ಕಲಬುರ್ಗಿ<br>ರಾಯಚೂರು | 198<br>110 | 1252<br>110 | 236<br>80 | 300<br>80 | **1986**<br>**380** |
| 2.ಮೈಸೂರು<br>ಪ.ಜಾ ಜಿಲ್ಲೆ<br>ಪ.ಪಂ. ಜಿಲ್ಲೆ | ಚಾಮರಾಜನಗರ<br>ಮೈಸೂರು | 185<br>77 | 627<br>142 | 243<br>24 | 170<br>57 | **1225**<br>**300** |
| 3.ಬೆಂಗಳೂರು<br>ಪ.ಜಾ ಜಿಲ್ಲೆ<br>ಪ.ಪಂ. ಜಿಲ್ಲೆ | ಕೋಲಾರ<br>ಚಿತ್ರದುರ್ಗ | 286<br>20 | 865<br>120 | 132<br>40 | 274<br>45 | **1557**<br>**225** |
| 4. ಬೆಳಗಾವಿ<br>ಪ.ಜಾ ಜಿಲ್ಲೆ<br>ಪ.ಪಂ. ಜಿಲ್ಲೆ | ವಿಜಯಪುರ<br>ಹಾವೇರಿ | 200<br>00 | 920<br>83 | 140<br>41 | 180<br>41 | **1440**<br>**165** |
| ನಿಯಂತ್ರಿತ ಜಿಲ್ಲೆ | ಬಳ್ಳಾರಿ | 41 | 182 | 60 | 39 | **322** |
| ಒಟ್ಟು | | **1117** | **4301** | **996** | **1186** | **7600** |

**ಚಿತ್ರ 3: ಮಾದರಿ ವಿದ್ಯಾರ್ಥಿಗಳ ಜಿಲ್ಲೆ, ವಸತಿನಿಲಯದ ಬಗೆ ಮತ್ತು ಲಿಂಗವಾರು ಹಂಚಿಕೆ**




ಈ ಅಧ್ಯಯನವು 262 ಮೆಟ್ರಿಕ್ ಪೂರ್ವ ಮತ್ತು 101 ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ವಾಸಿಸುವ 7600 ವಿದ್ಯಾರ್ಥಿಗಳನ್ನು ಮಾದರಿಯಾಗಿ ಒಳಗೊಂಡಿತ್ತು. ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ (ಇಲ್ಲಿ 101 ಬಾಲಕಿಯರು ಮತ್ತು 221 ಬಾಲಕರು ನಿಯಂತ್ರಿತ ಗುಂಪಾಗಿ ಮಾದರಿಗೆ ಸೇರ್ಪಡೆಯಾಗಿದ್ದರು), ಮೆಟ್ರಿಕ್ ಪೂರ್ವ ವಸತಿನಿಲಯಗಳಲ್ಲಿ 869 ಪರಿಶಿಷ್ಟ ಜಾತಿಯ ಬಾಲಕಿಯರು ಮತ್ತು 3664 ಬಾಲಕರು ಹಾಗೂ 207 ಪರಿಶಿಷ್ಟ ಪಂಗಡಗಳ ಬಾಲಕಿಯರು ಮತ್ತು 455 ಬಾಲಕರು ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ಅನುಕ್ರಮವಾಗಿ 751 ಮತ್ತು 924 ಪರಿಶಿಷ್ಟ ಜಾತಿಯ ಬಾಲಕಿಯರು ಮತ್ತು ಬಾಲಕರು ಆಯ್ಕೆಯಾಗಿದ್ದಾರೆ. 185 ಪರಿಶಿಷ್ಟ ಪಂಗಡಗಳ ಬಾಲಕಿಯರು ಮತ್ತು 223 ಬಾಲಕರನ್ನು ಮೆಟ್ರಿಕ್ ನಂತರದ ವಸತಿನಿಲಯಗಳಿಂದ ಆಯ್ಕೆ ಮಾಡಲಾಗಿದೆ.

225 ನಿಲಯಪಾಲಕರು ಮತ್ತು 49 ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳೂ ಈ ಅಧ್ಯಯನದ ಮಾಹಿತಿ ಸಂಗ್ರಹಣಾ ಕಾರ್ಯದಲ್ಲಿ ಭಾಗಿಗಳಾಗಿದ್ದರು.

## ಮಾಹಿತಿ ಸಂಗ್ರಹಣಾ ವಿಧಾನಗಳು

ಈ ಅಧ್ಯಯನದ ಮಾಹಿತಿ ಸಂಗ್ರಹಣೆಗಾಗಿ ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಧಾನಗಳೆರಡನ್ನೂ ಬಳಸಲಾಗಿದೆ. ಇವುಗಳಲ್ಲಿ ಮುಖ್ಯವಾದುವು ಕೇಂದ್ರೀಕೃತ ಗುಂಪು ಚರ್ಚೆ, ಪ್ರಮುಖ ಮಾಹಿತಿದಾರರೊಡನೆ ಸಂದರ್ಶನ ಮತ್ತು ಆಳವಾದ ಸಂದರ್ಶನಗಳು. ToR ಪ್ರಶ್ನೆಗಳನ್ನು ಆಧರಿಸಿ, ಮೌಲ್ಯಮಾಪನ ತಂಡ 3 ಸಂದರ್ಶನ ಕೈಪಿಡಿಗಳನ್ನು ಮಾಹಿತಿ ಸಂಗ್ರಹಣೆಗಾಗಿ ರಚನೆ ಮಾಡಿತು (ಈ ಎಲ್ಲ ಸಂದರ್ಶನ ಕೈಪಿಡಿಗಳನ್ನು ಕನ್ನಡ ಭಾಷಾಂತರದೊಂದಿಗೆ ಅನುಬಂಧದಲ್ಲಿ ನೀಡಲಾಗಿದೆ). ಕೇಂದ್ರೀಕೃತ ಗುಂಪು ಸಂದರ್ಶನ ಮತ್ತು ಆಳವಾದ ಸಂದರ್ಶನಗಳನ್ನು ನಡೆಸಲು ಒಂದು ಚರ್ಚಾ ಮಾರ್ಗದರ್ಶಿಯನ್ನು ತಯಾರಿಸಲಾಯಿತು.

## ಮಾಹಿತಿ ಸಂಗ್ರಹಣಾ ಪ್ರಕ್ರಿಯೆ

ಅಧ್ಯಯನಕ್ಕೆ ಒಳಪಟ್ಟ 09 ಜಿಲ್ಲೆಗಳಲ್ಲಿ, ಪ್ರತಿ ಜಿಲ್ಲೆಗೆ ಒಬ್ಬರಂತೆ ಒಂಬತ್ತು ಕ್ಷೇತ್ರ ಸಹಾಯಕರನ್ನು ನೇಮಕ ಮಾಡಲಾಯಿತು. ಅವರಿಗೆ, ಮಾಹಿತಿ ಸಂಗ್ರಹಣೆಯನ್ನು ಹೇಗೆ ಮಾಡಬೇಕೆಂದು ಒಂದು ಪರಿಚಾಯಾತ್ಮಕ ಕಾರ್ಯಕ್ರಮದ ಮೂಲಕ ತಿಳಿಸಿಕೊಡಲಾಯಿತು. ಎಲ್ಲ ಮಾಹಿತಿ ಸಂಗ್ರಹಣಾ ಸಾಧನಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಲಾಯಿತು. ಔಟರೀಚ್ ಸಂಸ್ಥೆಯಲ್ಲಿ ದಿನವಿಡೀ ನಡೆದ ಕಾರ್ಯಗಾರದಲ್ಲಿ ಅವರಿಗೆ ತರಬೇತಿಯನ್ನು ನೀಡಲಾಯಿತು.

ಆರಂಭದಲ್ಲಿ, ಎಂದರೆ 19.09.2018 ರಿಂದ 21.09.2018 ರವರೆಗೆ ಕಲಬುರ್ಗಿ, ಕೋಲಾರ, ಟಿ.ನರಸೀಪುರ, ಬಳ್ಳಾರಿ, ವಿಜಯಪುರ, ಚಿತ್ರದುರ್ಗ ಮತ್ತು ರಾಯಚೂರು – ಈ ಊರುಗಳಲ್ಲಿ ಮಾರ್ಗದರ್ಶಕ ಸಮೀಕ್ಷೆಯನ್ನು ಕೈಗೊಳ್ಳಲಾಯಿತು. ಈ ಸಮೀಕ್ಷೆಯಿಂದ ಹೊರ-ಹೊಮ್ಮಿದ ಮಾಹಿತಿಯ ಆಧಾರದ ಮೇಲೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ 30.10.2018 ರಂದು ಆರಂಭಿಕ ವರದಿಯೊಂದನ್ನು ಸಲ್ಲಿಸಲಾಯಿತು. ಮಾರ್ಗದರ್ಶಕ ಸಮೀಕ್ಷೆಯ ಅನುಭವದ ಆಧಾರದ ಮೇಲೆ ಮಾಹಿತಿ ಸಂಗ್ರಹಣೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ನಿಲಯಪಾಲಕರು (ಸಂ.ಕೈಪಿಡಿ.2) ಮತ್ತು ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಮತ್ತು ರಾಜ್ಯ ಮಟ್ಟದ ಅಧಿಕಾರಿಗಳನ್ನು (ಸಂ.ಕೈಪಿಡಿ.3) ಮಾದರಿಯಲ್ಲಿ ಸೇರ್ಪಡೆ ಮಾಡಲು ನಿರ್ಧರಿಸಲಾಯಿತು.

ಮಾರ್ಗದರ್ಶಕ ಸಮೀಕ್ಷೆಯನ್ನು ಸಂಪೂರ್ಣಗೊಳಿಸಿದ ನಂತರ, ಎಲ್ಲ ಮಾದರಿ ಜಿಲ್ಲೆಗಳಲ್ಲೂ ಮುಖ್ಯ ಅಧ್ಯಯನವನ್ನು ಕೈಗೊಳ್ಳಲಾಯಿತು. ಮಾದರಿಯಾಗಿ ಆಯ್ಕೆಯಾದ ವಸತಿನಿಲಯಗಳಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ಸಂಶೋಧನಾ ತಂಡದ ಸದಸ್ಯರು ಭೇಟಿಯಾಗಿ, ಸಂದರ್ಶನ ಕೈಪಿಡಿಯ ಸಹಾಯದಿಂದ ಮಾಹಿತಿಯನ್ನು ಪಡೆದರು. ಈ ಕ್ಷೇತ್ರಕಾರ್ಯ 01.11.2018 ರಿಂದ 30.01.2019ರ ಅವಧಿಯಲ್ಲಿ ನಡೆಯಿತು.

ToRನಲ್ಲಿ ಸೂಚಿತವಾಗಿದ್ದಂತೆ ಸಂಶೋಧನಾ ಸಹಾಯಕರು, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ವಿದ್ಯಾರ್ಥಿಗಳನ್ನು ಭೇಟಿ ಮಾಡಿ ಶುಚಿ ಸಂಭ್ರಮ ಯೋಜನೆಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದರು. ಪ್ರತಿ ವಸತಿನಿಲಯದಿಂದಲೂ 20 ಮಂದಿ ನಿಲಯವಾಸಿಗಳನ್ನು ಭೇಟಿ ಮಾಡಿ ಮಾಹಿತಿಯನ್ನು ಪಡೆಯಲಾಯ್ತು. ಸಂಬಂಧಿಸಿದ ಇಲಾಖೆಯಿಂದ ನೀಡಿದ್ದ ವಸತಿನಿಲಯಗಳ ಸಂಖ್ಯೆಗೂ ವಾಸ್ತವದಲ್ಲಿ ಚಾಲ್ತಿಯಲ್ಲಿದ್ದ ವಸತಿನಿಲಯಗಳ ಸಂಖ್ಯೆಗೂ ಕೆಲ ವ್ಯತ್ಯಾಸಗಳಿದ್ದವು. ಆದರೆ, ToRನಲ್ಲಿ ನಿಗದಿ ಪಡಿಸಲಾಗಿದ್ದ ಸಂಖ್ಯೆಗಿಂತ, ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ಈ ಅಧ್ಯಯನಕ್ಕಾಗಿ ಸಂದರ್ಶಿಸಲಾಗಿದೆ.

ಸಂಶೋಧನಾ ತಂಡ ಒಟ್ಟು 7600 ವಿದ್ಯಾರ್ಥಿಗಳನ್ನು ಮೆಟ್ರಿಕ್ ಪೂರ್ವ ಮತ್ತು ನಂತರದ ವಸತಿನಿಲಯಗಳಿಂದ ಭೇಟಿ ಮಾಡಿತು. ಸಂದರ್ಶನ ಕೈಪಿಡಿಯನ್ನು ಬಳಸಿ ಮಾಹಿತಿ ಸಂಗ್ರಹಣೆಯನ್ನು ನಡೆಸುವ ಸಮಯದಲ್ಲಿ ನಿಲಯಪಾಲಕರು ಜೊತೆಯಲ್ಲೇ ಇದ್ದುದರಿಂದ, ಒಂದು ಔಪಚಾರಿಕ ಸಂದರ್ಭದಲ್ಲಿ ಸಂದರ್ಶನಗಳು ನಡೆದವು ಹಾಗೂ ToRನಲ್ಲಿ ಸೂಚಿತವಾಗಿದ್ದ ಪ್ರಶ್ನೆಗಳಿಗೆ ಸೀಮಿತವಾಗಿದ್ದವು.

ToRನ ಅನ್ವಯ ಒಟ್ಟು 40 ಕೇಂದ್ರೀಕೃತ ಗುಂಪು ಚರ್ಚೆಗಳನ್ನು ವಸತಿನಿಲಯಗಳ ವಾಸಿಗಳೊಡನೆ ನಡೆಸಲಾಗಿದ್ದು, 274 ಆಳವಾದ ಸಂದರ್ಶನಗಳನ್ನು ಕೂಡ ನಡೆಸಲಾಯ್ತು.

## ಬದಲಾವಣೆಯ ಸಿದ್ಧಾಂತ: ಅಧ್ಯಯನದ ಚೌಕಟ್ಟು

ಈ ಅಧ್ಯಯನ ಮಾಹಿತಿಯ ವಿಶ್ಲೇಷಣೆಯನ್ನು ಬದಲಾವಣೆಯ ಸಿದ್ಧಾಂತದ ಚೌಕಟ್ಟಿನಲ್ಲಿ ಕೈಗೊಳ್ಳಲಾಗಿದೆ. ಇದು ಮೊದಲು ಕಾರ್ಯಕ್ರಮದ ಪರಿಣಾಮವನ್ನು ಅಳತೆ ಮಾಡಿ, ಅಧ್ಯಯನದ ವಿವಿಧ ಭಾಗೀದಾರರಿಂದ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಶುಚಿಸಂಭ್ರಮ ಯೋಜನೆಯ ನಿರ್ವಹಣೆಯ ಬಗ್ಗೆಯೂ ಒಳನೋಟಗಳನ್ನು ನೀಡುತ್ತದೆ. ಬದಲಾವಣೆಯ ಈ ಸಿದ್ಧಾಂತ, ಉತ್ಪತ್ತಿ – ಫಲಿತಾಂಶಗಳ ನಡುವಣ ಸಂಬಂಧವನ್ನು ಪರಿಶೀಲಿಸುತ್ತದೆ.

### ಬದಲಾವಣೆಯ ಸಿದ್ಧಾಂತ: ಶುಚಿ ಸಂಭ್ರಮ ಕಿಟ್

**ಉದ್ದೇಶಗಳು- ಶುಚಿ ಸಂಭ್ರಮ ಮೌಲ್ಯಮಾಪನ**

-ಭಾಗೀದಾರರಲ್ಲಿ ವೈಯಕ್ತಿಕ ನೈರ್ಮಲ್ಯದ ಬಗ್ಗೆ ಇರುವ ಅರಿವು, ಗ್ರಹಿಕೆ ಮತ್ತು ಆಚರಣೆಗಳ ಬಗ್ಗೆ ಅರಿಯುವುದು

-ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ಯೋಜನೆಯ ಬಗ್ಗೆ ಇರುವ ಅರಿವು ಪಡೆಯುವುದು

-ಫಲಾನುಭವಿಗಳು ಮತ್ತು ಅವರ ಕುಟುಂಬಗಳಲ್ಲಿ ಯೋಜನೆಯ ಬಗ್ಗೆ ಅರಿವು ಮತ್ತು ಅದರಿಂದಾಗಿರುವ ಪರಿಣಾಮಗಳ ಅಧ್ಯಯನ

-ಫಲಾನುಭವಿಗಳಲ್ಲಿ ಕಿಟ್ ಕುರಿತ ತೃಪ್ತಿಯ ಮಟ್ಟವನ್ನು ಅರಿಯುವುದು

-ಯೋಜನೆಯ ಕಾರ್ಯನಿರ್ವಹಣೆ ಮತ್ತು ಮೇಲುಸ್ತುವಾರಿಯ ಪರಿಶೀಲನೆ

-ಯೋಜನೆಯ ನಿರ್ವಹಣೆ, ಕಿಟ್‌ಗಳನ್ನು ಪಡೆಯುವುದು ಹಾಗೂ ವಿತರಿಸುವುದು - ಈ ಹಂತಗಳಲ್ಲಿ ಭಾಗೀದಾರರು ಎದುರಿಸುವ ಸವಾಲುಗಳನ್ನು ಗುರುತಿಸುವುದು

**ಭಾಗೀದಾರರು**

-ಕರ್ನಾಟಕದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿ ಯೋಜನೆಯ ಫಲಾನುಭವಿಗಳಾದ ಪ.ಜಾ/ಪ.ಪಂಗಡದ ವಿದ್ಯಾರ್ಥಿಗಳು

-ಶುಚಿ ಸಂಭ್ರಮ ಯೋಜನೆಯ ಪ್ರಯೋಜನವನ್ನು ಪಡೆಯದ ಸರ್ಕಾರಿ ವಸತಿ ನಿಲಯ ವಾಸಿಗಳ ನಿಯಂತ್ರಿತ ಗುಂಪು

-ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯಗಳ ನಿಲಯಪಾಲಕರು

-ಶುಚಿ ಸಂಭ್ರಮ ಕಿಟ್‌ನ ಸರಬರಾಜು, ವಿತರಣೆ ಮತ್ತು ಉಪಯೋಗವನ್ನು ನಿರ್ವಹಿಸಿ ನಿಯಂತ್ರಿಸುವ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು

**ಪ್ರಕ್ರಿಯೆಗಳು / ಚಟುವಟಿಕೆಗಳು**

-ಅಧ್ಯಯನದ ವಿಶ್ವವನ್ನು ಗುರುತಿಸಲು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಪ.ಜಾ ಮತ್ತು ಪ.ಪಂಗಡಗಳ ವಸತಿ ನಿಲಯದ ಪಟ್ಟಿಯನ್ನು ಪಡೆಯುವುದು

-ಬಹು ಹಂತ ವಿಭಜಿತ ಯಾದೃಚ್ಛಿಕ ಮಾದರಿಯನ್ನು ಆಯ್ಕೆ ಮಾಡುವುದು

-ಯೋಜನೆಯ ಪರಿಣಾಮ ಕತ್ವವನ್ನು ಪರಿಶೀಲಿಸಲು ಸಂಗ್ರಹಣಾ ಸಾಧನಗಳನ್ನು ತಯಾರಿಸುವುದು

-ಕ್ಷೇತ್ರಾಧ್ಯಯನದ ಕೌಶಲ್ಯಗಳನ್ನು ಸಂಶೋಧನಾ ಸಹಾಯಕರಿಗೆ ಪರಿಚಯಿಸುವುದು

-ಶುಚಿ ಸಂಭ್ರಮ ಯೋಜನೆಯ ವಿವಿಧ ಭಾಗೀದಾರರೊಡನೆ ToR ಅನ್ವಯ ಸಂದರ್ಶನ ಗಳನ್ನು ನಡೆಸುವುದು

-ಸಂಗ್ರಹಿಸಿದ ಮಾಹಿತಿಯ ವಿಶ್ಲೇಷಣೆ ಮಾಡುವುದು

**ಅಲ್ಪ ಕಾಲಿಕ ಫಲಿತಾಂಶಗಳು**

-ಶುಚಿ ಸಂಭ್ರಮ ಯೋಜನೆಯ ಲಭ್ಯತೆಯ ಬಗ್ಗೆ ಎಲ್ಲಾ ಭಾಗೀದಾರರಿಂದ ಮಾಹಿತಿ ಪಡೆದದ್ದು

-ಕಿಟ್‌ನಲ್ಲಿರುವ ವಸ್ತುಗಳ ಪ್ರಮಾಣದ ಬಗ್ಗೆ ತೃಪ್ತಿ ಹಾಗೂ ಯೋಜನೆಯ ಬಗ್ಗೆ ನಿಲಯ ಪಾಲಕರಿಂದ ಪರಿಚಯ ಪಡೆದದ್ದು

-ಯೋಜನೆಯ ನಿರ್ವಹಣೆಯ ದಾಖಲಾತಿ, ನಿಲಯಪಾಲಕರ ಹಾಜರಿ, ವಸತಿ ನಿಲಯಗಳಲ್ಲಿ ಶೌಚಾಲಯ, ನೀರು, ಸ್ನಾನದ ಮನೆ ಇತ್ಯಾದಿಗಳ ಲಭ್ಯತೆ ಬಗ್ಗೆ ಅವಲೋಕಿಸಿದ್ದು

-ಶುಚಿ ಸಂಭ್ರಮ ಕಿಟ್ ಯೋಜನೆಯ ವಿವಿಧ ಭಾಗೀದಾರರನ್ನು ಗುರುತಿಸಿದ್ದು, ಪ್ರಾತಿನಿಧಿಕ ಮಾದರಿಯನ್ನು ಆಯ್ಕೆ ಮಾಡಿದ್ದು, ಸಂಶೋಧನಾ ಸಾಧನಗಳನ್ನು ತಯಾರಿಸಿದ್ದು, ಸಂದರ್ಶನಗಳನ್ನು ನಡೆಸಿದ್ದು ಹಾಗೂ ಮಾಹಿತಿಯ ವಿಶ್ಲೇಷಣೆ ಯನ್ನು ಮಾಡಿದ್ದು

**ಮಧ್ಯಂತರ ಫಲಿತಾಂಶಗಳು**

-ಫಲಾನುಭವಿಗಳು ವೈಯಕ್ತಿಕ ಶುಚಿತ್ವವನ್ನು ಕಾಪಾಡಿಕೊಳ್ಳತ್ತಿದ್ದಾರೆ ಯೇ ಎಂದು ಕಂಡು ಹಿಡಿದದ್ದು

-ಯೋಜನೆಯ ಬಗ್ಗೆ ಫಲಾನುಭವಿಗಳೊಡನೆ ಮಾಹಿತಿ ಹಂಚಿ ಕೊಂಡಿದ್ದು -

-ಯೋಜನೆಯನ್ನು ನಿರ್ವಹಿಸುವವರ ಕಾರ್ಯ ವೈಖರಿಯ ಬಗ್ಗೆ ತಿಳಿದಿದ್ದು, ಸಮಯಕ್ಕೆ ಸರಿಯಾಗಿ ಕಿಟ್‌ಗಳ ವಿತರಣೆ ಆಗುತ್ತಿದೆಯೋ ಎಂದು ಪರಿಶೀಲಿಸಿದ್ದು,

-ಮೂಲಸೌಕರ್ಯಗಳ ಲಭ್ಯತೆಯ ಬಗ್ಗೆ ಹೆಚ್ಚಿದ ಅರಿವು

**ದೀರ್ಘಕಾಲಿಕ ಫಲಿತಾಂಶಗಳು**

-ಶುಚಿ ಸಂಭ್ರಮ ಯೋಜನೆಯ ಬಗ್ಗೆ ಅರಿವಿನ ಮಟ್ಟ ಹೆಚ್ಚಿ ಇದಕ್ಕೆ ಸಂಬಂಧಿಸಿದ ಆಚರಣೆ ಹೆಚ್ಚುವುದು

-ಯೋಜನೆಯ ಸಾಧ್ಯತೆಗಳು ಮತ್ತು ಮಿತಿಗಳನ್ನು ಗುರುತಿಸುವುದು

-ಯೋಜನೆಗೆ ಪೂರಕವಾದ ಹಾಗೂ ಅಡ್ಡಿಯಾಗುವ ಅಂಶಗಳನ್ನು ಗುರುತಿಸಿ ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳುವುದು

-ಯೋಜನೆಯಲ್ಲಿ ಅಧ್ಯಯನ ಫಲಿತಾಂಶಗಳ ಆಧಾರದ ಮೇಲೆ ಬದಲಾವಣೆಗಳನ್ನು ತರುವುದು

**ಪ್ರಭಾವ**

*ಫಲಾನುಭವಿಗಳಲ್ಲಿ ವೈಯಕ್ತಿಕ ನೈರ್ಮಲ್ಯ ಆಚರಣೆಗಳನ್ನು ಗುರುತಿಸಿದ್ದು

*ಯೋಜನೆಯ ಅನುಕೂಲಗಳು ಮಿತಿಗಳನ್ನು ಗುರುತಿಸಿದ್ದು

*ಈ ಯೋಜನೆಯಿಂದ ಪ್ರಯೋಜನ ಪಡೆಯುತ್ತಿರುವವರು ಹಾಗೂ ಪಡೆಯದವವರನ್ನು ಗುರುತಿಸಿದ್ದು

*ಯೋಜನೆಯ ನಿರ್ವಹಣಾ ವೈಖರಿಯ ದಾಖಲಿಕೆ

*ಯೋಜನೆಯ ಪ್ರಭಾವವನ್ನು ಅಳೆದದ್ದು

*ಯೋಜನೆಯನ್ನು ಕುರಿತ ತೃಪ್ತಿ, ಕಿಟ್‌ನಲ್ಲಿ ಆಗಬೇಕಾದ ಬದಲಾವಣೆ ಹಾಗೂ ಈ ಯೋಜನೆ ಎದುರಿಸುವ ಸವಾಲುಗಳನ್ನು ನಿರ್ವಹಿಸಲು ಪೂರಕವಾದ ಮಾಹಿತಿಯನ್ನು ಸಂಗ್ರಹಿಸಿದ್ದು

* ಅಧ್ಯಯನ ಫಲಿತಾಂಶಗಳ ಆಧಾರದ ಮೇಲೆ ಬದಲಾವಣೆಗಳನ್ನು ತರುವುದು

**ಬಾಹ್ಯ ಅಂಶಗಳು**

-ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಲು ಅಗತ್ಯವಾದ ಹಣಕಾಸು ಹಾಗೂ ಮೂಲಸೌಕರ್ಯಗಳ ಸಂಪನ್ಮೂಲಗಳ ಲಭ್ಯತೆ ಹಾಗೂ ಕಿಟ್‌ನ ಸರಬರಾಜಿನಲ್ಲಿ ನಿರಂತರತೆ.

-ಯೋಜನೆಗಳ ಫಲಾನುಭವಿಗಳ ಸಾಮಾಜಿಕ - ಆರ್ಥಿಕ ಹಿನ್ನೆಲೆ ಮತ್ತು ಕೌಟುಂಬಿಕ ಪರಿಸ್ಥಿತಿಗಳು

## ಮಾಹಿತಿಯ ವಿಶ್ಲೇಷಣೆ

ನಾಲ್ಕು ಸಂದರ್ಶನ ಕೈಪಿಡಿಗಳನ್ನು ಬಳಸಿ ಸಂಗ್ರಹಿಸಿದ ಮಾಹಿತಿಯನ್ನು ಕ್ರೋಢೀಕರಿಸಿ, Excel Sheetನಲ್ಲಿ ನಮೂದಿಸಿದ್ದು ವಿಶ್ಲೇಷಣೆಯ ಮೊದಲನೆಯ ಹಂತ. ನಂತರ ಗುಣಾತ್ಮಕ ಸ್ವರೂಪದ ಪ್ರಶ್ನೆಗಳಿಗೆ ಬಂದ ಉತ್ತರಗಳ ಸಾರವನ್ನು ಪರಿಶೀಲಿಸಿ, ಕ್ರೋಢೀಕರಿಸಲಾಯಿತು. ಮಾಹಿತಿಯನ್ನು ಶೇಕಡಾವಾರುಗಳಿಗೆ ಪರಿವರ್ತಿಸಿ, ವಿಶ್ಲೇಷಿಸಲಾಯಿತು. ಮುಂದಿನ ಭಾಗದಲ್ಲಿ ಅಧ್ಯಯನದ ಫಲಿತಾಂಶಗಳನ್ನು ಪ್ರಸ್ತುತಪಡಿಸಲಾಗಿದೆ.

***************

# III

# ಮೌಲ್ಯಮಾಪನ ಅಧ್ಯಯನದ ಫಲಿತಾಂಶಗಳು

ಈ ಭಾಗದಲ್ಲಿ ಮೌಲ್ಯಮಾಪನ ಪ್ರಶ್ನೆಗಳಿಗೆ ಮೂಡಿ ಬಂದ ಉತ್ತರಗಳನ್ನು ವಿಶ್ಲೇಷಣೆಗೆ ಒಳಪಡಿಸಿದ ನಂತರ, ವಿವರಣೆ ಹಾಗೂ ಕೋಷ್ಟಕ – ಚಿತ್ರಗಳ ಮೂಲಕ ಪ್ರಸ್ತುತ ಪಡಿಸಲಾಗಿದೆ. ಸೂಕ್ತವಾದೆಡೆಗಳೆಲ್ಲಾ ಆನುಷಂಗಿಕ ಮಾಹಿತಿಯನ್ನು ಲಭ್ಯ ಮೂಲಗಳಿಂದ ಪರಾಮರ್ಶಿಸಿ, ಬಳಸಿಕೊಳ್ಳಲಾಗಿದೆ. ಅಧ್ಯಯನದ ಪ್ರಾಥಮಿಕ ಮಾಹಿತಿಯನ್ನು, ಶುಚಿ ಸಂಭ್ರಮ ಕಿಟ್ ಯೋಜನೆಯ ಪ್ರಮುಖ ಭಾಗೀದಾರರಾದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿನಿಲಯಗಳ ವಿದ್ಯಾರ್ಥಿಗಳು, ನಿಲಯಪಾಲಕರು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಂದ ಸಂಗ್ರಹಿಸಲಾಗಿದೆ. ಕ್ಷೇತ್ರಕಾರ್ಯ ನಡೆಸಿದ ತಂಡ 9 ಜಿಲ್ಲೆಗಳಲ್ಲಿ 363 ವಸತಿನಿಲಯಗಳಿಗೆ ಭೇಟಿ ನೀಡಿ ಮಾದರಿ ಮಾಹಿತಿದಾರರಿಂದ ಮೌಲ್ಯಮಾಪನ ಪ್ರಶ್ನೆಗಳಿಗೆ ಸಂದರ್ಶನಗಳ ಮೂಲಕ ಉತ್ತರಗಳನ್ನು ಪಡೆಯಿತು. ಮುಂದಿನ ಪುಟಗಳಲ್ಲಿ ಅಧ್ಯಯನದ ಪ್ರಮುಖ ಫಲಿತಾಂಶಗಳನ್ನು ಕೋಷ್ಟಕ ಮತ್ತು ಚಿತ್ರಗಳ ಮೂಲಕ ಪ್ರಸ್ತುತಪಡಿಸಿ, ಪ್ರತಿ ಕೋಷ್ಟಕ/ಚಿತ್ರದಲ್ಲಿರುವ ಅಂಕಿ-ಅಂಶಗಳಿಗೆ ಸಂಕ್ಷಿಪ್ತ ವಿವರಣೆಯನ್ನು ನೀಡಿದೆ.

## ಶುಚಿಸಂಭ್ರಮ ಕಿಟ್‌ನ ಬಳಕೆ ಹಾಗೂ ವೈಯಕ್ತಿಕ ನೈರ್ಮಲ್ಯವನ್ನು ಕುರಿತಂತೆ ವಿದ್ಯಾರ್ಥಿಗಳ ಅರಿವಿನ ಮಟ್ಟ ಹಾಗೂ ಗ್ರಹಿಕೆ

ಈ ಅಧ್ಯಯನಕ್ಕಾಗಿ ಸಂದರ್ಶಿಸಿದ ಎಲ್ಲ ವಿದ್ಯಾರ್ಥಿಗಳೂ ಶುಚಿ ಸಂಭ್ರಮ ಕಿಟ್ ಯೋಜನೆಯ ಬಗ್ಗೆ ತಮಗೆ ತಿಳಿದಿದೆ ಎಂದು ಹೇಳಿದರು. ಇದು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ, ಬಾಲಕರು ಮತ್ತು ಬಾಲಕಿಯರ ವಿಚಾರದಲ್ಲಿ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ಕಂಡು ಬಂದಂಥ ಪರಿಸ್ಥಿತಿ. ವಸತಿನಿಲಯಗಳನ್ನು ಸೇರಿದ ನಂತರವೇ ಈ ಯೋಜನೆಯ ಬಗ್ಗೆ ತಮಗೆ ಅರಿವು ಮೂಡಿತು ಎಂದು ಎಲ್ಲ ನಿಲಯವಾಸಿಗಳೂ ತಿಳಿಸಿದರು. ನೈರ್ಮಲ್ಯ ಕಿಟ್‌ನ ಬಗ್ಗೆ ವಸತಿನಿಲಯವೇ ಪ್ರಮುಖ ವಿಷಯಮೂಲವಾಗಿದೆ ಎಂಬುದು ಈ ಅಧ್ಯಯನದಿಂದ ಮೂಡಿ ಬಂದಂಥ ವಿಚಾರ. ಕೆಲ ವಿದ್ಯಾರ್ಥಿಗಳು ಮಾತ್ರ ಕೇಂದ್ರೀಕೃತ ಗುಂಪು ಚರ್ಚೆಗಳ ವೇಳೆಯಲ್ಲಿ ತಿಳಿಸಿದ್ದೇನೆಂದರೆ, ಈಗಾಗಲೇ ವಸತಿನಿಲಯಗಳಲ್ಲಿ ವಾಸಿಸಿದ ಅನುಭವವಿರುವ ತಮ್ಮ ಊರಿನ ವಿದ್ಯಾರ್ಥಿಗಳಿಂದ, ವಸತಿನಿಲಯಗಳಲ್ಲಿ ಸ್ನಾನದ ಸಾಬೂನನ್ನು ನೀಡುವ ವಿಷಯ ತಿಳಿದಿತ್ತು ಎಂದು. ಆದರೆ ಈ ಯೋಜನೆಯ ಬಗ್ಗೆ ಸ್ನೇಹಿತರು ಅಥವಾ ಪರಿಚಯಸ್ಥರಗಿಂತ, ವಸತಿನಿಲಯಗಳ ನಿಲಯಪಾಲಕರಿಂದಲೋ ತಮ್ಮ ಶಾಲಾ ಅಧ್ಯಾಪಕರಿಂದಲೋ ತಿಳಿದವರೇ ಅತಿ ಹೆಚ್ಚಿನ ಮಂದಿ ಇದ್ದಾರೆ ಎನ್ನುವುದು ಕೇಂದ್ರೀಕೃತ ಗುಂಪು ಚರ್ಚೆಗಳ ವೇಳೆ ತಿಳಿದು ಬಂತು.

ರಾಯಚೂರು ಮತ್ತು ವಿಜಯಪುರ ಜಿಲ್ಲೆಗಳ ವಸತಿನಿಲಯಗಳನ್ನು ಹೊರತುಪಡಿಸಿ, ಉಳಿದೆಲ್ಲ ಜಿಲ್ಲೆಗಳ ವಿದ್ಯಾರ್ಥಿಗಳು ವೈಯಕ್ತಿಕ ನೈರ್ಮಲ್ಯವನ್ನು ಕುರಿತು ವಸತಿನಿಲಯಗಳ ಪಾಲಕರಿಂದಲೇ ಮಾಹಿತಿಯನ್ನು ಪಡೆದದ್ದು ಎಂದು ತಿಳಿದು ಬಂತು. ಕೆಲ ವಿದ್ಯಾರ್ಥಿಗಳು ತಮ್ಮ ಪೋಷಕರು, ವೈಯಕ್ತಿಕ ನೈರ್ಮಲ್ಯದ ಬಗ್ಗೆ ಅರಿವು ಮೂಡಿಸಿದ್ದರು ಎಂದು ತಿಳಿಸಿದರು. ಎಲ್ಲ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳೂ ವೈಯಕ್ತಿಕ ಆರೋಗ್ಯದ ಬಗ್ಗೆ ತಮಗೆ ಅರಿವು ಮೂಡಿಸಿದ್ದು ಸಂಬಂಧಿಸಿದ ವಸತಿನಿಲಯಗಳ ನಿಲಯಪಾಲಕರು ಎಂದು ತಿಳಿಸಿದರೆ, ರಾಯಚೂರು ಮತ್ತು ವಿಜಯಪುರ ಜಿಲ್ಲೆಗಳ ಮೆಟ್ರಿಕ್ ನಂತರದ ವಸತಿನಿಲಯಗಳ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ತಮ್ಮ ಪೋಷಕರು ಅಥವಾ ಕುಟುಂಬದ ಇತರ ಸದಸ್ಯರು, ವೈಯಕ್ತಿಕ ನೈರ್ಮಲ್ಯದ ಬಗ್ಗೆ ತಮಗೆ ಅರಿವು ಮೂಡಿಸಿದ್ದಾರೆ ಎಂದು ತಿಳಿಸಿದರು.

ಅಧ್ಯಯನಕ್ಕಾಗಿ ಸಂಪರ್ಕಿಸಿದ ನಿಲಯಪಾಲಕರು ಶುಚಿ ಸಂಭ್ರಮ ಯೋಜನೆ, ವಸತಿನಿಲಯಗಳಿಗೆ ಹೊಸದಾಗಿ ಸೇರ್ಪಡೆಯಾಗುವ ವಿದ್ಯಾರ್ಥಿಗಳಿಗೆ ಅರಿವನ್ನು ಮೂಡಿಸುವುದರ ಮೂಲಕ ಅವರಲ್ಲಿರುವ ಸಂಕೋಚವನ್ನು ತೊಡೆದು ಹಾಕುತ್ತದೆ ಎಂದು ತಿಳಿಸಿದ್ದಾರೆ. ಕಿಟ್‌ನ ಬಳಕೆಯ ಬಗ್ಗೆ ಅವರಲ್ಲಿ ಅರಿವು ಮೂಡಿಸುವ ಕೆಲಸ ನಿಲಯಪಾಲಕರಿಂದ ನಡೆಯುತ್ತದೆ. ಕೋಷ್ಟಕ ಸಂಖ್ಯೆ 5ರಲ್ಲಿ ಮತ್ತು ಚಿತ್ರ 4ರಲ್ಲಿ ನಿಲಯಪಾಲಕರ ದೃಷ್ಟಿಯಲ್ಲಿ, ವಸತಿನಿಲಯದ ನಿವಾಸಿಗಳಲ್ಲಿ ವೈಯಕ್ತಿಕ ನೈರ್ಮಲ್ಯದ ಬಗೆಗಿನ ಅರಿವಿನ ಪ್ರಮಾಣ ಎಷ್ಟಿದೆ ಎಂಬುದನ್ನು ತೋರಿಸುತ್ತದೆ.

**ಕೋಷ್ಟಕ 5: ವೈಯಕ್ತಿಕ ನೈರ್ಮಲ್ಯವನ್ನು ಕುರಿತಂತೆ ವಿದ್ಯಾರ್ಥಿಗಳ ಅರಿವಿನ ಮಟ್ಟದ ಬಗ್ಗೆ ನಿಲಯಪಾಲಕರ ಅಭಿಪ್ರಾಯ**

| ಜಿಲ್ಲೆ | ಚೆನ್ನಾಗಿದೆ | ಸಾಧಾರಣ | ಒಟ್ಟು |
|---|---|---|---|
| ಚಾಮರಾಜನಗರ | 13 (68) | 6 (32) | 19 |
| ಚಿತ್ರದುರ್ಗ | 7 (100) | - | 7 |
| ಹಾವೇರಿ | 5 (100) | - | 5 |
| ಕಲಬುರ್ಗಿ | 85 (98) | 2 (2) | 87 |
| ಕೋಲಾರ | 34 (97) | 1 (3) | 35 |
| ಮೈಸೂರು | 12 (92) | 1 (8) | 13 |
| ರಾಯಚೂರು | 5 (100) | - | 5 |
| ವಿಜಯಪುರ | 38 (95) | 2 (5) | 40 |
| ಬಳ್ಳಾರಿ | 13 (93) | 1 (7) | 14 |
| ಒಟ್ಟು | 212 (94.22) | 13 (5.78) | 225 |

(ಬ್ರಾಕೆಟ್‌ನಲ್ಲಿರುವ ಅಂಕಿಗಳು ಶೇಕಡಾವಾರನ್ನು ತೋರಿಸುತ್ತವೆ)

**ಚಿತ್ರ 4: ವೈಯಕ್ತಿಕ ನೈರ್ಮಲ್ಯವನ್ನು ಕುರಿತಂತೆ ವಿದ್ಯಾರ್ಥಿಗಳ ಅರಿವಿನ ಮಟ್ಟದ ಬಗ್ಗೆ ನಿಲಯಪಾಲಕರ ಅಭಿಪ್ರಾಯ**




ಕೋಷ್ಟಕ ಸಂಖ್ಯೆ 5ರಲ್ಲಿ ಪ್ರಸ್ತುತ ಪಡಿಸಿರುವ ಮಾಹಿತಿಯ ಅನ್ವಯ ಶೇಕಡ 94.22 ನಿಲಯಪಾಲಕರ ದೃಷ್ಟಿಯಲ್ಲಿ ವೈಯಕ್ತಿಕ ನೈರ್ಮಲ್ಯವನ್ನು ಕುರಿತ ಅರಿವು ನಿಲಯವಾಸಿಗಳಲ್ಲಿ 'ಚೆನ್ನಾಗಿದೆ' ಎಂದು ತಿಳಿದು ಬಂದಿದೆ.

ವಸತಿನಿಲಯಗಳ ನಿಲಯಪಾಲಕರು ತಿಳಿಸಿರುವಂತೆ, ವಸತಿನಿಲಯಗಳನ್ನು ಪ್ರವೇಶಿಸಿದ ನಂತರ ವಿದ್ಯಾರ್ಥಿಗಳಿಗೆ ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿವಳಿಕೆ ನೀಡಲಾಗುತ್ತದೆ. ಈಗಾಗಲೇ ಅವರ ಸಹೋದರ-ಸಹೋದರಿಯರು ವಸತಿನಿಲಯಗಳಲ್ಲಿದ್ದರೆ, ಅಂಥ ವಿದ್ಯಾರ್ಥಿಗಳಿಗೆ ಅವರ ಮೂಲಕ ನೈರ್ಮಲ್ಯವನ್ನು ಕುರಿತ ಅರಿವು ಈಗಾಗಲೇ ಮೂಡಿರುತ್ತದೆ. ಆದರೆ ಮೊದಲ ಬಾರಿಗೆ ವಸತಿನಿಲಯಗಳನ್ನು ಪ್ರವೇಶಿಸುತ್ತಿರುವ ಬಹುತೇಕ ವಿದ್ಯಾರ್ಥಿಗಳಿಗೆ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದರ ಬಗ್ಗೆ ಅರಿವು ಮೂಡುವುದು ವಸತಿನಿಲಯದಲ್ಲೇ. ನಿಲಯಪಾಲಕರಿಂದ ತಿಳಿದು ಬಂದ ಮತ್ತೊಂದು ವಿಚಾರವೆಂದರೆ ಮೆಟ್ರಿಕ್ ಪೂರ್ವ ನಿಲಯಗಳ ನಿವಾಸಿಗಳಿಗಿಂತ, ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ವೈಯಕ್ತಿಕ ನೈರ್ಮಲ್ಯದ ಪ್ರಾಮುಖ್ಯತೆಯ ಬಗ್ಗೆ ಹೆಚ್ಚಿನ ಮಟ್ಟದ ಅರಿವು ಇರುತ್ತದೆ. ಮೇಲು ಮೇಲಿನ ತರಗತಿಗಳಿಗೆ ಹೋಗುತ್ತಾ – ಹೋಗುತ್ತಾ ಅರಿವಿನ ಪ್ರಮಾಣವೂ ಹೆಚ್ಚುತ್ತಾ ಹೋಗುತ್ತದೆ.

ನಿಲಯಪಾಲಕರಿಗೆ, ವೈಯಕ್ತಿಕ ನೈರ್ಮಲ್ಯದ ಅರಿವಿನ ಮಟ್ಟ ಗ್ರಾಮೀಣ ಪ್ರದೇಶದಲ್ಲಿರುವ ವಸತಿನಿಲಯಗಳಲ್ಲಿ ಹೆಚ್ಚಿರುತ್ತದೆಯೋ ಅಥವಾ ನಗರ ಪ್ರದೇಶಗಳಲ್ಲಿರುವ ವಸತಿನಿಲಯ ವಾಸಿಗಳಲ್ಲಿ ಹೆಚ್ಚಿರುತ್ತದೆಯೋ ಎಂಬ ವಿಷಯದ ಬಗ್ಗೆ ಮಾಹಿತಿ ಇದ್ದಂತೆ ಕಾಣಲಿಲ್ಲ, ಆದರೆ ಕೇಂದ್ರೀಕೃತ ಗುಂಪು ಚರ್ಚೆಗಳ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ತಿಳಿದು ಬಂದಂತೆ, ನಗರ ಪ್ರದೇಶಗಳಲ್ಲಿರುವ ವಸತಿನಿಲಯಗಳ ನಿವಾಸಿಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿರುವ ವಸತಿನಿಲಯ ವಾಸಿಗಳಿಗಿಂತ ಅರಿವು ಒಂದು ಸಾಪೇಕ್ಷಿಕ ಮಟ್ಟದಲ್ಲಿ ಹೆಚ್ಚಿದೆ.

ಈ ಅಧ್ಯಯನದ ಮೂಲಕ ಮಾಹಿತಿ ಸಂಗ್ರಹಣೆಗಾಗಿ ಸಂಪರ್ಕಿಸಿದ ಶೇಕಡ 84ರಷ್ಟು ಸಮಾಜಕಲ್ಯಾಣ ಇಲಾಖೆಯ ಅಧಿಕಾರಿಗಳು, ಶುಚಿ ಸಂಭ್ರಮ ಯೋಜನೆ ಮೆಟ್ರಿಕ್ ಪೂರ್ವ ವಸತಿನಿಲಯಗಳಿಗಿಂತ, ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿದೆ ಎಂದಿದ್ದಾರೆ. ಚಾಮರಾಜನಗರ, ಚಿತ್ರದುರ್ಗ, ಹಾವೇರಿ, ಕೋಲಾರ, ಮೈಸೂರು, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ (100%) ಎಲ್ಲ ಇಲಾಖಾ ಅಧಿಕಾರಿಗಳು, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿವಾಸಿಗಳು, ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ವಾಸಿಗಳಿಗಿಂತ ವೈಯಕ್ತಿಕ ನೈರ್ಮಲ್ಯವನ್ನು ಕುರಿತು ಹೆಚ್ಚಿನ ಅರಿವನ್ನು ಪಡೆದಿದ್ದಾರೆ ಎಂದು ಹೇಳಿದ್ದಾರೆ. ಮಕ್ಕಳು ಬೆಳೆಯುತ್ತಾ

ಹೋದ ಹಾಗೆ ವೈಯಕ್ತಿಕ ನೈರ್ಮಲ್ಯದ ಪರಿಕಲ್ಪನೆ ಹಾಗೂ ಆಚರಣೆಗಳ ಬಗ್ಗೆ ಅವರು ಹೆಚ್ಚು ಪ್ರಜ್ಞಾವಂತರಾಗುತ್ತಾರೆ, ಆದ್ದರಿಂದ ಅವರ ವ್ಯಕ್ತಿತ್ವ ಕೂಡ ಸರಿಯಾದ ರೀತಿಯಲ್ಲಿ ರೂಪುಗೊಳ್ಳಲು ಅನುವಾಗುತ್ತದೆ ಎನ್ನುವುದು ಸಾಮಾನ್ಯವಾಗಿ ಕೇಳಿ ಬಂದಂಥ ಅಭಿಪ್ರಾಯ. ಕಲಬುರ್ಗಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಕ್ರಮಾನುಗತವಾಗಿ ಶೇಕಡ 43 ಮತ್ತು ಶೇಕಡ 50 ಅಧಿಕಾರಿಗಳು, ಯೋಜನೆಯ ಪರಿಣಾಮಕತ್ವದ ವಿಚಾರದಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ವಾಸಿಗಳಲ್ಲಿ ಗಮನಾರ್ಹವಾದ ಯಾವುದೇ ವ್ಯತ್ಯಾಸವನ್ನು ಗುರುತಿಸಿಲ್ಲ ಎಂದು ಹೇಳಿದ್ದಾರೆ.

ಈ ಅಧ್ಯಯನದ ಮಾಹಿತಿ ಸಂಗ್ರಹಿಸಲು ಸಂದರ್ಶಿಸಿದ ಶೇಕಡ 78 ಅಧಿಕಾರಿಗಳು ಶುಚಿ ಸಂಭ್ರಮ ಯೋಜನೆ ಗ್ರಾಮೀಣ ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬಳ್ಳಾರಿ ಜಿಲ್ಲೆ ಒಂದನ್ನು ಹೊರತು ಪಡಿಸಿ (ಶೇಕಡ 50ರಷ್ಟು ಈ ಅಭಿಪ್ರಾಯವನ್ನು ಹೊಂದಿದ್ದರು) ಉಳಿದೆಲ್ಲ ಜಿಲ್ಲೆಗಳಲ್ಲಿ (ಶೇಕಡ 67 ರಿಂದ 100 ವ್ಯಾಪ್ತಿಯಲ್ಲಿ) ಇದೇ ಅಭಿಪ್ರಾಯಕ್ಕೆ ಸಹಮತವಿತ್ತು.

ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಕಿಟ್‌ಗಳನ್ನು ಒದಗಿಸಿದ್ದರಿಂದ, ವೈಯಕ್ತಿಕ ನೈರ್ಮಲ್ಯವನ್ನು ಕುರಿತು ಈಗಾಗಲೇ ಅರಿವು ಮೂಡಿ ಬಂದಿದ್ದು, ಅವರೆಲ್ಲ ನೈರ್ಮಲ್ಯವನ್ನು ಕಾಪಾಡಲು ಅಗತ್ಯವಾದ ಆಚರಣೆಗಳನ್ನು ಅಭ್ಯಾಸ ಮಾಡಿಕೊಂಡಿದ್ದರು.

ಎಲ್ಲ ವಿದ್ಯಾರ್ಥಿಗಳೂ ಕಿಟ್‌ನಲ್ಲಿರುವ ಎಲ್ಲ ವಸ್ತುಗಳನ್ನು ತಾವು ಬಳಸುತ್ತಿರುವುದಾಗಿ ಹೇಳಿದರು. ಕೇಂದ್ರೀಕೃತ ಗುಂಪು ಚರ್ಚೆಗಳ ಸಮಯದಲ್ಲಿ ಮಾತ್ರ, ಅವರು ವ್ಯಕ್ತಪಡಿಸಿದ ಒಂದು ಅಭಿಪ್ರಾಯವೆಂದರೆ ರಜಾ ದಿನಗಳಲ್ಲಿ ಈ ಕಿಟ್ಟನ್ನು ಒದಗಿಸಬೇಕೆಂಬುದು. ವಿಶೇಷವಾಗಿ ಮೆಟ್ರಿಕ್ ನಂತರದ ನಿಲಯಗಳ ಕಾಲೇಜು ವಿದ್ಯಾರ್ಥಿ ನಿವಾಸಿಗಳು, ತಮ್ಮ ಶೈಕ್ಷಣಿಕ ವೇಳಾಪಟ್ಟಿಯನ್ನು ವರ್ಷವಿಡೀ ವಿಸ್ತರಿಸುವ ಸಾಧ್ಯತೆಗಳಿರುವುದರಿಂದ ಹತ್ತು ತಿಂಗಳ ಬದಲು ಇಡೀ ವರ್ಷ, ಕಿಟ್‌ಗಳನ್ನು ವಿತರಣೆ ಮಾಡಿದರೆ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ತಮಗೆ ಸುಲಭವಾಗುತ್ತದೆ ಎಂದರು. ಸಾಮಾಜಿಕ – ಆರ್ಥಿಕ ತಳ ಸ್ತರಗಳಿಂದ ಬಂದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

## ವಿದ್ಯಾರ್ಥಿಗಳಲ್ಲಿ ವೈಯಕ್ತಿಕ ನೈರ್ಮಲ್ಯಕ್ಕೆ ಸಂಬಂಧಿಸಿದ ಅಭ್ಯಾಸಗಳು

ಮಗುವಿಗೆ ತನ್ನ ಬಾಲ್ಯಾವಸ್ಥೆಯಲ್ಲಿ ದೊರೆಯುವ ವೈಯಕ್ತಿಕ ನೈರ್ಮಲ್ಯವನ್ನು ಕುರಿತ ಜ್ಞಾನ ಹಾಗೂ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಅವಶ್ಯವಾದ ವಸ್ತುಗಳ ಲಭ್ಯತೆ ಅದರ ಜೀವನದ ಗುಣಮಟ್ಟವನ್ನು ನಿರ್ಧರಿಸುವಂತಹುದು. ಪ್ರಸಕ್ತ ಅಧ್ಯಯನ ಕ್ಷೇತ್ರದಲ್ಲಿದ್ದ ಶೇಕಡ 90ರಷ್ಟು ಮಕ್ಕಳಿಗೆ ವೈಯಕ್ತಿಕ ನೈರ್ಮಲ್ಯದ ಅಭ್ಯಾಸಗಳ ಬಗ್ಗೆ ಅರಿವು ಮೂಡಿದ್ದು ಹಾಗೂ ಅವರು ಕಿಟ್‌ನಲ್ಲಿದ್ದ ವಸ್ತುಗಳ ಬಳಕೆ ಮಾಡಲಾರಂಭಿಸಿದ್ದೇ ವಸತಿನಿಲಯಕ್ಕೆ ಪ್ರವೇಶ ಪಡೆದ ಮೇಲೆ ಎಂದು ತಿಳಿದು ಬಂದಿದೆ. ಅವರ ಮನೆಗಳಲ್ಲಿದ್ದ ಪರಿಸ್ಥಿತಿಗಳ ಕಾರಣದಿಂದಾಗಿ, ಕುಟುಂಬ ವಲಯದಿಂದ ಅವರಿಗೆ ವೈಯಕ್ತಿಕ ನೈರ್ಮಲ್ಯದ ಬಗ್ಗೆ ಸೂಕ್ತವಾದ ತಿಳಿವಳಿಕೆ ಒದಗಿ ಬಂದಿರಲಿಲ್ಲ ಎಂಬುದು ತಿಳಿದು ಬರುತ್ತದೆ.

ಹಲ್ಲುಜ್ಜುವುದರಿಂದ ಹಿಡಿದು ಋತುಮತಿಯಾದಾಗ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳವರೆಗೆ, ವಸತಿನಿಲಯ ವಾಸಿಗಳಿಂದ ಮಾಹಿತಿಯನ್ನು ಪಡೆಯಲಾಯಿತು. ಅವರಿಂದ ಮೂಡಿ ಬಂದ ಉತ್ತರಗಳನ್ನು ಕ್ರೋಢೀಕರಿಸಿ ಮುಂದಿನ ಭಾಗದಲ್ಲಿ ಪ್ರಸ್ತುತ ಪಡಿಸಲಾಗಿದೆ. ಎಲ್ಲ ವಿದ್ಯಾರ್ಥಿಗಳೂ ದಿನಕ್ಕೆ ಒಂದು ಬಾರಿ, ಎಂದರೆ ಬೆಳಿಗ್ಗೆ ಹಲ್ಲುಗಳನ್ನು ಉಜ್ಜುತ್ತಾರೆ ಎಂಬುದು ತಿಳಿದು ಬಂದಿತು. ಆದರೆ ಪ್ರತಿಯೊಬ್ಬರಿಗೂ ರಜಾದಿನಗಳಲ್ಲಿ ತಮ್ಮ ಮನೆಗಳಿಗೆ ಹಿಂದಿರುಗಿದಾಗ, ಅಗತ್ಯ ವಸ್ತುಗಳ ಅಭಾವವಿದ್ದುದರಿಂದ ಹಾಗೆ ಮಾಡಲಾಗದಿದ್ದರೂ ಬಹುತೇಕ ವಿದ್ಯಾರ್ಥಿಗಳು ದಿನಕ್ಕೆ ಒಂದು ಬಾರಿಯಾದರೂ ಹಲ್ಲನ್ನು ಉಜ್ಜುವ ಅಭ್ಯಾಸವನ್ನು ಮುಂದುವರೆಸಿದ್ದರು ಎಂಬುದು ಸಮಾಧಾನಕರವಾದ ವಿಷಯ. ವಿಶೇಷವಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಒಮ್ಮೆ ಬೇವಿನ ಕಡ್ಡಿಯಿಂದ ಹಲ್ಲುಜ್ಜುವ ಅಭ್ಯಾಸ ವ್ಯಾಪಕವಾಗಿ ಕಂಡು ಬರುತ್ತಿತ್ತು. ಆದರೆ ಇಂದು ಇದು ಹೆಚ್ಚು ಕಡಿಮೆ ಹೊರಟು ಹೋಗಿದೆ. ಬಹುತೇಕ ನಿಲಯ ವಾಸಿಗಳು ಊಟವಾದ ನಂತರ ಕೈಗಳನ್ನು ತೊಳೆಯುತ್ತಿದ್ದರೇ ಹೊರತು, ಶೌಚಾಲಯವನ್ನು ಬಳಸಿದ ಮೇಲಾಗಲಿ, ಶಾಲೆಯಿಂದ ಹಿಂದಿರುಗಿದ ಮೇಲಾಗಲಿ ಎಲ್ಲರೂ ಅಭ್ಯಾಸವನ್ನು ರೂಢಿಸಿಕೊಂಡಿರಲಿಲ್ಲ. ಈ ನಿಟ್ಟಿನಲ್ಲಿ ಅವರನ್ನು ಚಿಂತಿಸುವಂತೆ ಮಾಡಲು ಇನ್ನೂ ಹೆಚ್ಚಿನ ಸಮಯದ ಅಗತ್ಯವಿದೆ.

ಶೌಚಾಲಯವನ್ನು ಬಳಸಿದ ನಂತರ ವಸತಿನಿಲಯಗಳಲ್ಲಿ ಬಹುತೇಕ ವಿದ್ಯಾರ್ಥಿಗಳು ತಮ್ಮ ಕೈಗಳನ್ನು ತೊಳೆದು ಕೊಳ್ಳುತ್ತೇವೆಂದು ಹೇಳಿದರೂ ಶೇಕಡ 15ರಷ್ಟು ವಸತಿನಿಲಯ ವಾಸಿಗಳು ಕೇಂದ್ರೀಕೃತ ಚರ್ಚೆಗಳ ಸಂದರ್ಭದಲ್ಲಿ ತಿಳಿಸಿದ್ದು, ತಮ್ಮ ತಮ್ಮ ಮನೆಗಳಿಗೆ ಹೋದಾಗ ಈ ಅಭ್ಯಾಸವನ್ನು ಮುಂದುವರೆಸಿಕೊಂಡು ಹೋಗಲು ನೀರಿನ ಅಭಾವದ ಕಾರಣದಿಂದ ಆಗುವುದಿಲ್ಲ ಎಂದು. ವಸತಿನಿಲಯಗಳಲ್ಲಿರುವವರೆಗೆ ಮಾತ್ರ ಕಿಟ್‌ನ ಸರಬರಾಜು ಇರುವುದರಿಂದ, ವೈಯಕ್ತಿಕ ನೈರ್ಮಲ್ಯಕ್ಕೆ ಗಮನ ನೀಡಲು ಅದೊಂದು ಅವಕಾಶ, ಆದರೆ ಅಲ್ಲಿ ಕಲಿತ ಅಭ್ಯಾಸಗಳನ್ನೆಲ್ಲ ಮುಂದುವರೆಸಿಕೊಂಡು ಹೋಗುವುದು ವಸ್ತುಗಳನ್ನು ಕೊಳ್ಳಲು ಹಣದ ಲಭ್ಯತೆ ಹಾಗೂ ನೀರಿನ ಮೂಲಗಳು ಅವರವರ ಮನೆಗಳಲ್ಲಿ ಇದೆಯೋ ಇಲ್ಲವೋ ಎಂಬುದನ್ನು ಅವಲಂಬಿಸಿದೆ. ಆದರೆ, ಹೆಚ್ಚು-ಕಡಿಮೆ ಎಲ್ಲ ನಿಲಯವಾಸಿಗಳು ಹೇಳಿದ ಒಂದು ವಿಚಾರವೆಂದರೆ, ತಾವು ಸಾಬೂನನ್ನಾದರೂ ಕೊಳ್ಳಲು ಪ್ರಯತ್ನಿಸುತ್ತೇವೆ ಎಂದು.

ದಿನ ನಿತ್ಯವೂ ಸ್ನಾನಮಾಡುವುದು ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಅತಿ ಮುಖ್ಯವಾದ ಅಭ್ಯಾಸ ಎಂದು ಪರಿಗಣಿತವಾಗಿದ್ದರೂ ಅದನ್ನು ಕಾರ್ಯರೂಪಕ್ಕೆ ತರಬೇಕಾದರೆ ನಿರಂತರವಾಗಿ ನೀರು ಸರಬರಾಜು ವ್ಯವಸ್ಥೆ ಇರಬೇಕು. ಅಧ್ಯಯನಕ್ಕೆ ಆಯ್ಕೆಯಾದ ಎಲ್ಲ ಜಿಲ್ಲೆಗಳಲ್ಲಿ ಹಾಗೂ ಬಾಲಕ-ಬಾಲಕಿಯರ ವಸತಿನಿಲಯಗಳೆರಡರಲ್ಲೂ ಕೆಲ ವಿದ್ಯಾರ್ಥಿಗಳು 2 ಅಥವಾ 3 ದಿನಗಳಿಗೊಮ್ಮೆ ಸ್ನಾನ ಮಾಡುತ್ತಾರೆ ಎಂಬುದು ಗಮನಕ್ಕೆ ಬಂದಂಥ ವಿಚಾರ. ಇದಕ್ಕೆ ಮೂಲ ಕಾರಣವೆಂದರೆ ನೀರಿನ ಅಲಭ್ಯತೆ. ಹೆಣ್ಣು ಮಕ್ಕಳ ವಿಚಾರಕ್ಕೆ ಬಂದಾಗ ಮಾತ್ರ, ಅವರು ನೀರಿನ ಅಭಾವ ಇದ್ದಂಥ ಸಂದರ್ಭದಲ್ಲಿ, ಸಾಮಾನ್ಯವಾಗಿ ತಮ್ಮ ಋತುಚಕ್ರದ ಸಮಯದಲ್ಲಿ ಸ್ನಾನ ಮಾಡಲು ಬಯಸುತ್ತಾರೆ. ಇಂದಿಗೂ ಅನೇಕ ಹೆಣ್ಣು ಮಕ್ಕಳು ಸ್ಯಾನಿಟರಿ ನ್ಯಾಪ್‌ಕಿನಗಳ ಬದಲು, ಹಳೇ ಬಟ್ಟೆಗಳನ್ನು ಋತುಮತಿಯರಾದಾಗ ಬಳಸುತ್ತಿದ್ದಾರೆ ಎಂಬುದು ತಿಳಿದು ಬಂತು.

ಅಧ್ಯಯನಕ್ಕಾಗಿ ಸಂಪರ್ಕಿಸಿದ ಎಲ್ಲ ವಿದ್ಯಾರ್ಥಿಗಳೂ ಶೌಚಾಲಯದಿಂದ ಹೊರಬಂದ ನಂತರ, ಹಾಗೂ ಶಾಲೆ ಮತ್ತು ಆಟದ ಮೈದಾನದಿಂದ ಬಂದ ನಂತರ ಕಾಲುಗಳನ್ನು ತೊಳೆಯಬೇಕು ಎಂಬುದನ್ನು ಮನಗಂಡಿದ್ದರು. ಕೇಂದ್ರೀಕೃತ ಗುಂಪು ಸಂದರ್ಶನಗಳ ವೇಳೆಯಲ್ಲಿ ವಿದ್ಯಾರ್ಥಿಗಳು ತಿಳಿಸಿದ್ದೇನೆಂದರೆ ನೀರಿನ ಅಭಾವವಿದ್ದಾಗ, ಶಾಲೆ ಅಥವಾ ಆಟದ ಮೈದಾನದಿಂದ ಬಂದಾಗ ಕಾಲುಗಳನ್ನು ತೊಳೆಯುವುದು ಕಷ್ಟ. ವಸತಿನಿಲಯಗಳ ನಿಲಯಪಾಲಕರೂ ಕೂಡ ನೀರಿನ ಸರಬರಾಜಿನಲ್ಲಿ ವ್ಯತ್ಯಯ ಉಂಟಾದಾಗ ವಿದ್ಯಾರ್ಥಿಗಳಿಗೆ ಕಾಲುಗಳನ್ನು ಅಥವಾ ಕೈಗಳನ್ನು ತೊಳೆಯಲಾಗಲಿ, ಕಷ್ಟ ಸಾಧ್ಯ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಹಾಗೆ ನೋಡಿದರೆ, ಶೌಚಾಲಯಗಳಲ್ಲಿ ಬಳಸಲು ನೀರಿನ ಅಗತ್ಯವಿರುವುದರಿಂದ, ಅದನ್ನು ಸೀಮಿತವಾಗಿ ಬಳಸಲು ತಾವೇ ವಿದ್ಯಾರ್ಥಿಗಳಿಗೆ ತಿಳಿಸಿ ಹೇಳುವುದಾಗಿ ಕ್ಷೇತ್ರಕಾರ್ಯ ತಂಡದೊಡನೆ ಹೇಳಿದ್ದಾರೆ.

ತಲೆ ಬಾಚಿಕೊಳ್ಳುವುದು ಹಾಗೂ ಕೂದಲನ್ನು ತೊಳೆಯುವುದು ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಅಗತ್ಯ ಅಭ್ಯಾಸಗಳಾಗಿರುವುದಿರಂದ, ಹೇಗೆ ನಿಲಯವಾಸಿಗಳು ಈ ಅಭ್ಯಾಸಗಳನ್ನು ಬೆಳೆಸಿಕೊಂಡಿದ್ದಾರೆ ಎಂಬುದನ್ನು ತಿಳಿಯಲು ಪ್ರಯತ್ನಿಸಲಾಯಿತು. ಅದರಲ್ಲೂ ವಿಶೇಷವಾಗಿ, ಮನೆಯಲ್ಲಿರಲಿ, ವಸತಿನಿಲಯದಲ್ಲಿರಲಿ, ತಲೆಯನ್ನು ಬಾಚಿಕೊಳ್ಳುವುದು ಅತ್ಯಂತ ಅವಶ್ಯವಾದ ಅಭ್ಯಾಸವಾಗಿರುವುದರಿಂದ ವಿದ್ಯಾರ್ಥಿಗಳನ್ನು ಈ ಬಗ್ಗೆ ವಿಚಾರಿಸಿದಾಗ ಅವರಲ್ಲಿ ಶೇಕಡ 90ರಷ್ಟು ಮಂದಿ, ದಿನಕ್ಕೆ 2 ಬಾರಿ ಕೂದಲನ್ನು ಬಾಚಿಕೊಳ್ಳುವುದಕ್ಕಾಗಿ ತಿಳಿಸಿದರು. ಚಿತ್ರದುರ್ಗ ಜಿಲ್ಲೆಯ ವಿದ್ಯಾರ್ಥಿಗಳು (ಮೆಟ್ರಿಕ್ ಪೂರ್ವ ನಿಲಯಗಳ 46% ವಾಸಿಗಳು) ಮಾತ್ರ, ತಮಗೆ ಉದ್ದದ ಕೂದಲು ಇಲ್ಲದಿರುವುದರಿಂದ ದಿನವೂ ಬಾಚಿಕೊಳ್ಳುವ ಅಗತ್ಯವಿಲ್ಲ ಎಂದು ತಿಳಿಸಿದರು, ಕೆಲವೇ ವಿದ್ಯಾರ್ಥಿನಿಯರು ಮಾತ್ರ ತಾವು 2 ದಿನಗಳಿಗೊಮ್ಮೆ ತಲೆ ಬಾಚಿಕೊಳ್ಳುವುದಾಗಿ ತಿಳಿಸಿದರು, ಹಾಗೆಯೇ ಅತಿ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳು ಮಾತ್ರ, ವಾರಕ್ಕೊಮ್ಮೆ ತಾವು ತಲೆ ಸ್ನಾನ ಮಾಡುವುದಾಗಿ ತಿಳಿಸಿದರು. ಶೇಕಡ 60ರಷ್ಟು ವಿದ್ಯಾರ್ಥಿಗಳು ಉಗುರುಗಳನ್ನು ವಾರಕ್ಕೊಮ್ಮೆಯಾದರೂ ಕತ್ತರಿಸಿ ಕೊಳ್ಳುವುದಾಗಿ ಹೇಳಿದರೆ, ಕೆಲವರು ಉದ್ದೇಶಪೂರ್ವಕವಾಗಿ ತಾವು ಉದ್ದದ ಉಗುರುಗಳನ್ನು ಬೆಳೆಸಿಕೊಂಡಿರುವುದಾಗಿ ತಿಳಿಸಿದರು.

ವೈಯಕ್ತಿಕ ನಿರ್ಮಲ್ಯದ ನಿರ್ವಹಣೆಗೂ ಶುದ್ಧ ವಸ್ತ್ರಗಳನ್ನು ಧರಿಸುವುದಕ್ಕೂ ನಡುವೆ ನಿಕಟವಾದ ಸಂಬಂಧವಿದೆ. ನಮ್ಮ ಅಧ್ಯಯನದ ವಿದ್ಯಾರ್ಥಿಗಳು ಶೇಕಡ 95ರಷ್ಟು ದಿನಕ್ಕೆ ಎರಡು ಬಾರಿ ಬಟ್ಟೆಗಳನ್ನು ಬದಲಿಸುವುದಾಗಿ ಹೇಳಿದರು. ಉಳಿದವರು ದಿನಕ್ಕೊಮ್ಮೆ ಬಟ್ಟೆಗಳನ್ನು ಬದಲಿಸುತ್ತಾರೆ. ಸಾಮಾನ್ಯವಾಗಿ ಬಟ್ಟೆಗಳನ್ನು ವಾರಕ್ಕೆ ಮೂರು ಬಾರಿ ಒಗೆಯುತ್ತಾರೆ. ಬೇಸಿಗೆಯಲ್ಲಿ ವಾರಕ್ಕೆ ಎರಡು ಬಾರಿ ಒಗೆಯುತ್ತಾರೆ.

ಸಾಕ್ಸ್ ಬಳಸುವವರು ವಾರಕ್ಕೊಮ್ಮೆ ಅವುಗಳನ್ನು ಓಗೆಯುತ್ತಾರೆ. ಕೇಂದ್ರಿಕೃತ ಸಂದರ್ಶನಗಳ ಸಮಯದಲ್ಲಿ ಹೆಣ್ಣು ಮಕ್ಕಳು ಒಳ ಉಡುಪುಗಳನ್ನು ಪ್ರತಿ ನಿತ್ಯ ಒಗೆಯುವುದಾಗಿ ತಿಳಿಸಿದರು. ನೀರಿನ ಅಭಾವವಿರುವ ಕಾಲದಲ್ಲಿ ವಾರಕ್ಕೆ ಎರಡು ಬಾರಿ ಈ ಒಳ ಉಡುಪುಗಳನ್ನು ಒಗೆಯುವುದಾಗಿ ತಿಳಿಸಿದ್ದಾರೆ. ಅದೇ ತಮ್ಮ ಮನೆಗಳಿಗೆ ರಜಾ ಸಂದರ್ಭದಲ್ಲಿ ಹೋದಾಗ ಬಟ್ಟೆಗಳನ್ನು ದಿನವೂ ಅಥವಾ ಎರಡು ದಿನಗಳಿಗೊಮ್ಮೆ ಒಗೆಯಲು ಸಾಧ್ಯವಾಗುವುದಿಲ್ಲ. ಏಕೆಂದರೆ ಎಲ್ಲರ ಮನೆಗಳಲ್ಲೂ ನೀರಿನ ಸೌಕರ್ಯ ಇರುವುದಿಲ್ಲ. ಬಹು ದೂರದಿಂದ ನೀರನ್ನು ತರಬೇಕಾಗಿರುವುದರಿಂದ ಬಟ್ಟೆಗಳನ್ನು ದಿನವೂ ಒಗೆಯುವುದಕ್ಕೆ ಆಗುವುದಿಲ್ಲ. ಟವಲ್ಗಳು, ಕರವಸ್ತ್ರಗಳು ಮುಂತಾದವುಗಳನ್ನು ಕೊಳೆಯಾದರೆ ಮಾತ್ರ ಒಗೆಯುತ್ತಾರೆ.

ಎಲ್ಲ ವಿದ್ಯಾರ್ಥಿಗಳೂ ಕಾಲಿಗೆ ಚಪ್ಪಲಿಗಳನ್ನು ಯಾವಾಗಲೂ ಬಳಸುತ್ತಾರೆ.

## ಋತುಚಕ್ರದ ನೈರ್ಮಲ್ಯಕ್ಕೆ ಸಂಬಂಧಿಸಿದ ಅಭ್ಯಾಸಗಳು

ಈ ಅಧ್ಯಯನಕ್ಕಾಗಿ ಸಂದರ್ಶಿಸಿದ ಎಲ್ಲ ವಿದ್ಯಾರ್ಥಿನಿಯರೂ ತಾವು ಋತುಚಕ್ರದ ಸಂದರ್ಭದಲ್ಲಿ ಪ್ರತಿದಿನವೂ ಸ್ನಾನ ಮಾಡುವುದಾಗಿ ತಿಳಿಸಿದರು. ವಸತಿನಿಲಯದಲ್ಲಿ ನೀರಿನ ಅಭಾವವಿರುವಂಥ ಪರಿಸ್ಥಿತಿಯೇನಾದರೂ ಇದ್ದರೆ, ಋತುಚಕ್ರದಲ್ಲಿರುವ ತಮ್ಮ ಗೆಳತಿಯರಿಗೆ ಆದ್ಯತೆ ನೀಡುತ್ತಾರೆ ಎಂಬುದು ತಿಳಿದು ಬಂತು. ಋತುಚಕ್ರದ ಸಂದರ್ಭದಲ್ಲಿ ದಿನವೂ ಸ್ನಾನ ಮಾಡಬೇಕೆಂಬ ಅಭ್ಯಾಸವನ್ನು ಅವರು ವಸತಿನಿಲಯಕ್ಕೆ ಬಂದ ಮೇಲೆ ಬೆಳೆಸಿಕೊಂಡರು. ಸಂಶೋಧನಾ ತಂಡ ಭೇಟಿ ಮಾಡಿದ ಎಲ್ಲ ಬಾಲಕಿಯರೂ ವಸತಿನಿಲಯದಲ್ಲಿ ನೀರಿನ ನಿರಂತರ ಸರಬರಾಜು ಇರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದರಿಂದ ಮಾತ್ರ ಋತುಚಕ್ರದ ಸಮಯದಲ್ಲಿ ನೈರ್ಮಲ್ಯವನ್ನು ಕಾಪಾಡಲು ಸಾಧ್ಯ. ಸ್ಯಾನಿಟರಿ ನ್ಯಾಪ್‌ಕಿನ್ ಮತ್ತು ತೀರ ಅವಶ್ಯವೆನಿಸುವ ಔಷಧಿಗಳನ್ನು ಪ್ರತಿ ವಸತಿನಿಲಯದಲ್ಲೂ ಉಚಿತವಾಗಿ ಒದಗಿಸಬೇಕು ಎನ್ನುವುದು ಎಲ್ಲ ಹೆಣ್ಣು ಮಕ್ಕಳೂ ನೀಡಿದ ಸಲಹೆ. ಸಂದರ್ಶನದ ಸಮಯದಲ್ಲಿ ಅನೇಕ ವಿದ್ಯಾರ್ಥಿನಿಯರು, ತಮಗೆ ಹಳೆ ಬಟ್ಟೆಗಳನ್ನು ಉಪಯೋಗಿಸಲು ಆಗುತ್ತಿಲ್ಲ, ಆದ್ದರಿಂದ ಸ್ಯಾನಿಟರಿ ಪ್ಯಾಡ್‌ಗಳನ್ನು ಒದಗಿಸಬೇಕು ಎಂದು ಸೂಚಿಸಿದರು. ತಮ್ಮ ಕುಟುಂಬಗಳ ಹಿರಿಯ ಮಹಿಳಾ ಸದಸ್ಯರು ಹಳೆ ಬಟ್ಟೆಗಳನ್ನು ಉಪಯೋಗಿಸುವುದರಿಂದ ಎದುರಿಸುತ್ತಿರುವ ಆರೋಗ್ಯ ಸಮಸ್ಯೆಗಳ ಬಗ್ಗೆ ಅರಿವು ತಮಗೆ ಇದ್ದು, ಅವರನ್ನು ಕೂಡ ಸ್ಯಾನಿಟರಿ ಪ್ಯಾಡ್‌ಗಳನ್ನು ಬಳಸಲು ಉತ್ತೇಜಿಸುತ್ತಿದ್ದೇವೆ, ಅನಿವಾರ್ಯವಾಗಿ ಹಳೆ ಬಟ್ಟೆಗಳನ್ನು ಉಪಯೋಗಿಸಲೇ ಬೇಕಾದಂಥ ಪರಿಸ್ಥಿತಿ ಬಂದರೆ, ಅವುಗಳನ್ನು ಬಿಸಿಲಿನಲ್ಲಿ ಒಣಗಿಸಬೇಕು ಎಂದು ಮನದಟ್ಟು ಮಾಡಿಕೊಡುತ್ತಿದ್ದೇವೆ ಎಂದು ತಿಳಿಸಿದರು. ಶುಚಿ ಸಂಭ್ರಮ ಕಿಟ್ಟುಗಳಲ್ಲಿ ಸ್ಯಾನಿಟರಿ ಪ್ಯಾಡುಗಳನ್ನು ಹಾಲಿ ಸೇರಿಸಿಲ್ಲವಾದರೂ ಕಿಟ್ ಯೋಜನೆ ಹೆಣ್ಣು ಮಕ್ಕಳನ್ನು ಋತುಚಕ್ರಕ್ಕೆ ಸಂಬಂಧಿಸಿದ ನೈರ್ಮಲ್ಯದ ಬಗ್ಗೆ ಪ್ರಜ್ಞಾಪೂರ್ವ ಚಿಂತನೆಯಲ್ಲಿ ತೊಡಗಿಸಿರುವುದು ಗಮನಾರ್ಹ.

## ಮೆಟ್ರಿಕ್ ನಂತರದ ವಸತಿನಿಲಯಗಳ ವಿದ್ಯಾರ್ಥಿಗಳಿಗೆ ಶುಚಿ ಸಂಭ್ರಮ ಕಿಟ್ ಒದಗಿಸುವ ಅಗತ್ಯತೆಯ ಬಗ್ಗೆ

ಮೇಲ್ ನೋಟಕ್ಕೆ ಶುಚಿ ಸಂಭ್ರಮ ಕಿಟ್ ಯೋಜನೆ ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಒಂದು ಸಣ್ಣ ಪ್ರಯತ್ನವಷ್ಟೇ ಎನಿಸಬಹುದು. ಆದರೆ ಇಂದಿಗೂ ಅನೇಕ ಕುಟುಂಬಗಳಲ್ಲಿ, ನೈರ್ಮಲ್ಯವನ್ನು ಕಾಪಾಡುವ ಅಭ್ಯಾಸಗಳನ್ನು ಬೆಳೆಸಿಕೊಳ್ಳಲಾಗಲಿ, ಮೂಲಸೌಕರ್ಯಗಳನ್ನು ಸೃಷ್ಟಿಸಲಾಗಲಿ, ವಸ್ತುಗಳನ್ನು ಕೊಳ್ಳುವುದಕ್ಕಾಗಲಿ, ಸಂಪನ್ಮೂಲಗಳ ಕೊರತೆ ಇರುವುದರಿಂದ, ಈ ಯೋಜನೆಯನ್ನು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ಮುಂದುವರೆಸಿಕೊಂಡು ಹೋಗಬೇಕೆಂಬುದು ಎಲ್ಲ ವಿದ್ಯಾರ್ಥಿಗಳ ಅಭಿಪ್ರಾಯವಾಗಿತ್ತು. ಕೇಂದ್ರೀಕೃತ ಗುಂಪು ಸಂದರ್ಶನಗಳಲ್ಲಿ ವಿದ್ಯಾರ್ಥಿಗಳು ತಿಳಿಸಿದ ಮತ್ತೊಂದು ವಿಚಾರವೆಂದರೆ, ಕಿಟ್ ನೀಡುತ್ತಿರುವುದರಿಂದ ಅದರಲ್ಲಿರುವ ವಸ್ತುಗಳನ್ನು ಬಳಸಿ ತಮ್ಮ ವ್ಯಕ್ತಿತ್ವವನ್ನು ಇತರರ ಎದುರಿಗೆ ಕಾಪಾಡಿಕೊಳ್ಳಲು, ಎಂದರೆ ಶುಚಿತ್ವವನ್ನು ಸಾಧಿಸಲು ಸಾಧ್ಯವಾಗಿದೆ. ಇತರ ವಿದ್ಯಾರ್ಥಿಗಳಿಂದ ಅವಹೇಳನಕ್ಕೆ ಒಳಗಾಗಬೇಕಾದಂಥ ಸಂದರ್ಭಗಳು ಬರುತ್ತಿದ್ದವು, ಹಾಗಾಗಿ ನಮ್ಮ ಸ್ವಾಭಿಮಾನಕ್ಕೆ ಅಡ್ಡಿಯಾಗುತ್ತಿತ್ತು, ಈ ಯೋಜನೆಯಿರುವುದರಿಂದ ನಾವು ಇತರರ ಎದುರಿಗೆ ತಲೆಯೆತ್ತಿ ನಡೆಯುವೆವು ಎಂದು ಹೇಳಿರುವುದು, ಯೋಜನೆ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲೂ ಮುಂದುವರೆಯುವುದು ಒಳಿತು ಎಂಬುದು ಗಮನಾರ್ಹವಾದ ವಿಚಾರ.

ನೈರ್ಮಲ್ಯಕ್ಕೆ ಸಂಬಂಧಿಸಿದ ಅಭ್ಯಾಸಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೂ ವ್ಯಕ್ತಿಯ ವಯಸ್ಸಿಗೂ ನಿಕಟವಾದ ಸಂಬಂಧವಿದೆ. ಹದಿಹರೆಯದವರೂ ಹಾಗೂ ಯುವ ಜನತೆಯಲ್ಲಿ ಅನೇಕ ಮಾನಸಿಕ ಬದಲಾವಣೆಗಳು ಸಂಭವಿಸುತ್ತವೆ. ಆದ್ದರಿಂದ, ಈ ಹಂತದಲ್ಲಿ ಅವರ ವ್ಯಕ್ತಿತ್ವ ರೂಪುಗೊಳ್ಳುವುದರಿಂದ ಅವರಿಗೆ ಕೆಲ ಪ್ರಸಾಧನಗಳ ಅಗತ್ಯವಿರುತ್ತದೆ. ವಿಶೇಷವಾಗಿ ಶೋಷಿತ ಸಮುದಾಯಗಳ ಮಕ್ಕಳು ಹಾಗೂ ಯುವ ಜನತೆಗೆ ಇವುಗಳನ್ನು ಒದಗಿಸುವುದು ಅವಶ್ಯ. ಸರ್ಕಾರವೂ ಈ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು ಸೂಕ್ತವಾದ ಕ್ರಮವಾದ್ದರಿಂದ, ಶುಚಿ ಸಂಭ್ರಮ ಕಿಟ್ ಯೋಜನೆಯ ಎಲ್ಲ ಭಾಗಿದಾರರೂ ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ಅದು ಮುಂದುವರೆಯಬೇಕೆಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು.

## ಕಿಟ್‌ನಲ್ಲಿರುವ ವಸ್ತುಗಳ ಪ್ರಮಾಣದ ಬಗ್ಗೆ ವಿದ್ಯಾರ್ಥಿಗಳಲ್ಲಿ ಕಂಡು ಬಂದಂಥ ತೃಪ್ತಿಯ ಮಟ್ಟ

ಅಧ್ಯನಕ್ಕಾಗಿ ಸಂಪರ್ಕಿಸಿದ ಎಲ್ಲ ವಿದ್ಯಾರ್ಥಿಗಳೂ ಶುಚಿ ಸಂಭ್ರಮ ಕಿಟ್ ಯೋಜನೆಯಿಂದ, ತಮ್ಮ ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಸಾಧ್ಯವಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಆದರೆ ಆ ಕಿಟ್‌ನಲ್ಲಿರುವ ವಸ್ತುಗಳು ಅವರಿಗೆ ತಿಂಗಳಿಡೀ ಸಾಕಾಗುತ್ತದೆಯೇ ಎಂದು ತಿಳಿಯುವುದು ಅಗತ್ಯವಾಗಿದೆ. ಸಂಬಂಧಿಸಿದ ಮಾಹಿತಿಯನ್ನು ಕೋಷ್ಟಕ ಸಂಖ್ಯೆ 6 ಹಾಗೂ ಚಿತ್ರ ಸಂಖ್ಯೆ 5ರಲ್ಲಿ ಪ್ರಸ್ತುತ ಪಡಿಸಲಾಗಿದೆ.

ಕೋಷ್ಟಕ 6 ಮತ್ತು ಚಿತ್ರ 5 ರಲ್ಲಿರುವ ಅಂಕಿ-ಅಂಶಗಳ ಪ್ರಕಾರ ಮೆಟ್ರಿಕ್ ಪೂರ್ವ ವಸತಿನಿಲಯಗಳಲ್ಲಿ ಶೇಕಡ 61.03 ಹಾಗೂ ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ಶೇಕಡ 48.17 ರಷ್ಟು ವಿದ್ಯಾರ್ಥಿಗಳು ಕಿಟ್‌ನಲ್ಲಿರುವ ವಸ್ತುಗಳ ಪ್ರಮಾಣದ ಬಗ್ಗೆ ತೃಪ್ತಿ ಇದೆ ಎಂದು ಹೇಳಿದ್ದಾರೆ. ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ಶೇಕಡ 51.83 ಹಾಗೂ ಮೆಟ್ರಿಕ್ ಪೂರ್ವ ವಸತಿನಿಲಯಗಳಲ್ಲಿ ಶೇಕಡ 38.79 ವಿದ್ಯಾರ್ಥಿಗಳು ಕಿಟ್‌ನಲ್ಲಿರುವ ವಸ್ತುಗಳ ಪ್ರಮಾಣದ ಬಗ್ಗೆ ತಮಗೆ ತೃಪ್ತಿಯಿಲ್ಲ ಎಂದು ಹೇಳಿದ್ದಾರೆ.

**ಕೋಷ್ಟಕ 6: ಅಧ್ಯಯನ ಜಿಲ್ಲೆಗಳಲ್ಲಿ ಶುಚಿ ಸಂಭ್ರಮ ಕಿಟ್‌ನಲ್ಲಿ ಒದಗಿಸಿರುವ ವಸ್ತುಗಳ ಪ್ರಮಾಣದ ಬಗ್ಗೆ ಕಂಡು ಬರುವ ತೃಪ್ತಿಯ ಮಟ್ಟ**

| ಜಿಲ್ಲೆ | ಮೆಟ್ರಿಕ್ ಪೂರ್ವ ವಸತಿನಿಲಯಗಳು | | | ಮೆಟ್ರಿಕ್ ನಂತರದ ವಸತಿನಿಲಯಗಳು | | | |
|---|---|---|---|---|---|---|---|
| | ತೃಪ್ತಿ ಇದೆ | ತೃಪ್ತಿ ಇಲ್ಲ | ಒಟ್ಟು | ತೃಪ್ತಿ ಇದೆ | ತೃಪ್ತಿ ಇಲ್ಲ | ಒಟ್ಟು | ಒಟ್ಟು |
| ಚಾಮರಾಜನಗರ | 198 (24.4) | 614 (75.6) | **812** | 25 (6) | 388 (94) | **413** | **1225** |
| ಚಿತ್ರದುರ್ಗ | 140 (100) | - | **140** | 85 (100) | -- | **85** | **225** |
| ಹಾವೇರಿ | 59 (71.1) | 24 (28.9) | **83** | 82 (82) | - | **82** | **165** |
| ಕಲಬುರ್ಗಿ | 1277 (88.1) | 173 (11.9) | **1450** | 339 (63) | 197 (37) | **536** | **1986** |
| ಕೋಲಾರ | 920 (80) | 231 (20) | **1151** | 220 (54) | 186 (46) | **406** | **1557** |
| ಮೈಸೂರು | 219 (100) | - | **219** | 81 (100) | - | **81** | **300** |
| ರಾಯಚೂರು | 220 (100) | - | **220** | 160 (100) | - | **160** | **380** |
| ವಿಜಯಪುರ | 99 (9) | 1021 (91) | **1120** | - | 320 (100) | **320** | **1440** |
| ಬಳ್ಳಾರಿ | 175 (78.5) | 48 (21.5) | **223** | 59 (60) | 40 (40) | **99** | **322** |
| ಒಟ್ಟು | **3307 (61)** | **2111 (39)** | **5418** | 1051 (48) | 1131 (52) | **2182** | **7600** |

(ಬ್ರಾಕೆಟ್‌ನಲ್ಲಿರುವ ಅಂಕಿಗಳು ಶೇಕಡಾವಾರನ್ನು ತೋರಿಸುತ್ತವೆ)

**ಚಿತ್ರ 5: ಅಧ್ಯಯನ ಜಿಲ್ಲೆಗಳಲ್ಲಿ ಶುಚಿ ಸಂಭ್ರಮ ಕಿಟ್‌ನಲ್ಲಿ ಒದಗಿಸಿರುವ ವಸ್ತುಗಳ ಪ್ರಮಾಣದ ಬಗ್ಗೆ ಕಂಡು ಬರುವ ತೃಪ್ತಿಯ ಮಟ್ಟ**



ಈ ಅಧ್ಯಯನಕ್ಕೆ ಆಯ್ಕೆಯಾದ ಬಹುತೇಕ ನಿಲಯಪಾಲಕರು ಕಿಟ್‌ನಲ್ಲಿರುವ ವಸ್ತುಗಳು ತಿಂಗಳಿಡಿ ಸಾಕಾಗುವುದಿಲ್ಲ ಎಂದು ತಿಳಿಸಿದ್ದಾರೆ. ಅವರು ತಿಳಿಸಿದ ಮತ್ತೊಂದು ವಿಚಾರವೆಂದರೆ ಕಿಟ್‌ನ ವಿತರಣೆ ಸಾಮಾನ್ಯವಾಗಿ ಪ್ರತಿ ತಿಂಗಳ ಮೊದಲನೆಯ ವಾರದ ಕೊನೆಯಲ್ಲಿ ಆಗುವುದರಿಂದ, ಅದರಲ್ಲಿರುವ ವಸ್ತುಗಳು ಸುಮಾರು 20 ದಿನಗಳ ಕಾಲ ಒದಗಿ ಬರುತ್ತವೆ. ನಿಲಯವಾಸಿಗಳು, ಹೊಸ ಸರಬರಾಜು ವಸತಿನಿಲಯಗಳಿಗೆ ತಲುಪವವರೆಗೂ ಕಾಯಬೇಕು, ಇಲ್ಲವೇ ತಮ್ಮ ವೈಯಕ್ತಿಕ ಸಂಪನ್ಮೂಲಗಳಿಂದ ಖರೀದಿಸಬೇಕು.

ವಿದ್ಯಾರ್ಥಿಗಳೊಡನೆ ವೈಯಕ್ತಿಕ ಅಂತರ್‌ಕ್ರಿಯೆಯ ಸಂದರ್ಭದಲ್ಲಿ, ಕಿಟ್‌ನಲ್ಲಿರುವ ವಸ್ತುಗಳ ಗುಣಮಟ್ಟದ ಬಗ್ಗೆ ಅವರು ಎಷ್ಟು ತೃಪ್ತರು ಎಂದು ಕೇಳಿದ ಪ್ರಶ್ನೆಗೆ ಶೇಕಡ 24ರಷ್ಟು ವಿದ್ಯಾರ್ಥಿಗಳು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಅವರ ಅಭಿಪ್ರಾಯದಲ್ಲಿ ಕಿಟ್‌ನಲ್ಲಿರುವ ವಸ್ತುಗಳ ಗುಣಮಟ್ಟ ಯಾವಾಗಲೂ ಒಂದೇ ತೆರನಾಗಿರುವುದಿಲ್ಲ.

ವಸತಿನಿಲಯಗಳ ನಿವಾಸಿಗಳಲ್ಲಿ ಅನೇಕರು, ತಮ್ಮ ಬಳಿ ಹಣಕಾಸು ಸಂಪನ್ಮೂಲವಿದ್ದಲ್ಲಿ ತಮ್ಮ ಆಯ್ಕೆಯ ವಸ್ತುಗಳನ್ನು ಕೊಳ್ಳುತ್ತಾರೆ. ಅಧ್ಯಯನಕ್ಕೆ ಒಳಪಟ್ಟವರಲ್ಲಿ ಎಷ್ಟು ಮಂದಿ ಹೊರಗಿನ ಮಾರುಕಟ್ಟೆಯಿಂದ ಕಿಟ್‌ನಲ್ಲಿರುವ ಪ್ರಸಾಧನಗಳನ್ನು ಕೊಳ್ಳುತ್ತಾರೆ ಎಂದು ತಿಳಿಯಲೆತ್ನಿಸಲಾಯಿತು. ಸಂಬಂಧಿಸಿದ ಮಾಹಿತಿ ಕೋಷ್ಟಕ ಸಂಖ್ಯೆ 7 ಮತ್ತು ಚಿತ್ರ ಸಂಖ್ಯೆ 6ರಲ್ಲಿ ಲಭ್ಯವಿದೆ.

**ಕೋಷ್ಟಕ 7: ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿ ವಿದ್ಯಾರ್ಥಿಗಳಿಂದ ಹೆಚ್ಚುವರಿ/ಇತರ ಬ್ರಾಂಡುಗಳ ಪ್ರಸಾಧನಗಳ ಕೊಳ್ಳುವಿಕೆ**

| ಜಿಲ್ಲೆ | ಮೆಟ್ರಿಕ್ ಪೂರ್ವ ವಸತಿನಿಲಯಗಳು | | | ಮೆಟ್ರಿಕ್ ನಂತರದ ವಸತಿನಿಲಯಗಳು | | | ಒಟ್ಟು |
|---|---|---|---|---|---|---|---|
| | ಕೊಳ್ಳುವವರು | ಕೊಳ್ಳದವರು | ಒಟ್ಟು | ಕೊಳ್ಳುವವರು | ಕೊಳ್ಳದವರು | ಒಟ್ಟು | ಒಟ್ಟು |
| ಚಾಮರಾಜನಗರ | 774 (95.32) | 38 (4.68) | **812** | 375 (90.80) | 38 (9.20) | **413** | **1225** |
| ಚಿತ್ರದುರ್ಗ | 52 (37.14) | 88 (62.86) | **140** | 65 (76.47) | 20 (23.53) | **85** | **225** |
| ಹಾವೇರಿ | 24 (28.92) | 59 (71.08) | **83** | 73 (89.02) | 09 (10.98) | **82** | **165** |
| ಕಲಬುರ್ಗಿ | 671 (46.28) | 779 (53.72) | **1450** | 419 (78.17) | 117 (21.82) | **536** | **1986** |
| ಕೋಲಾರ | 965 (83.84) | 186 (16.16) | **1151** | 350 (86.21) | 56 (13.79) | **406** | **1557** |
| ಮೈಸೂರು | 148 (67.58) | 71 (32.42) | **219** | 73 (90.12) | 08 (9.88) | **81** | **300** |
| ರಾಯಚೂರು | 220 (100) | ---- | **220** | 160 (100) | ---- | **160** | **380** |
| ವಿಜಯಪುರ | 1120 (1120) | ---- | **1120** | 316 (98.75) | 04 (1.25) | **320** | **1440** |
| ಬಳ್ಳಾರಿ | 130 (58.30) | 93 (41.70) | **223** | 77 (77.78) | 22 (22.22) | **99** | **322** |
| **ಒಟ್ಟು** | 4104 (75.75) | 1314 (24.25) | **5418** | 1908 (87.44) | 274 (12.56) | **2182** | **7600** |

**(ಬ್ರಾಕೆಟ್‌ನಲ್ಲಿರುವ ಅಂಕಿಗಳು ಶೇಕಡಾವಾರನ್ನು ತೋರಿಸುತ್ತವೆ)**

**ಚಿತ್ರ 6: ಶುಚಿಸಂಭ್ರಮ ಕಿಟ್‌ನಲ್ಲಿ ಒದಗಿಸಿರುವ ವಸ್ತುಗಳ ಪ್ರಮಾಣದ ಬಗ್ಗೆ ಕಂಡು ಬರುವ ತೃಪ್ತಿಯ ಮಟ್ಟ**




ಕೋಷ್ಟಕ 7 ಮತ್ತು ಚಿತ್ರ 6ರಲ್ಲಿ ನಮೂದಿತವಾಗಿರುವ ಮಾಹಿತಿಯಿಂದ ತಿಳಿದು ಬರುವುದೇನೆಂದರೆ. ಶೇಕಡ 76ರಷ್ಟು ಮೆಟ್ರಿಕ್ ಪೂರ್ವ ವಸತಿನಿಲಯಗಳ ವಿದ್ಯಾರ್ಥಿಗಳು ಹಾಗೂ ಶೇಕಡ 87ರಷ್ಟು ಮೆಟ್ರಿಕ್ ನಂತರದ ವಸತಿನಿಲಯಗಳ ವಿದ್ಯಾರ್ಥಿಗಳು ವಸ್ತುಗಳನ್ನು ಕೊಳ್ಳುತ್ತಾರೆ. ಹಾವೇರಿ ಜಿಲ್ಲೆಯಲ್ಲಿ ಮಾತ್ರ ಹೆಚ್ಚಿನ ಸಂಖ್ಯೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳು, ಹೆಚ್ಚುವರಿ ವಸ್ತುಗಳನ್ನು ತಾವು ಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

## ಶುಚಿ ಸಂಭ್ರಮ ಕಿಟ್ ವಿತರಣೆಯಲ್ಲಿನ ಕ್ರಮಬದ್ಧತೆ ಹಾಗೂ ಪ್ರತಿ ತಿಂಗಳೂ ಸರಬರಾಜಿಗೆ ತಗಲುವ ಸರಾಸರಿ ಸಮಯ

ಈ ಅಧ್ಯಯನಕ್ಕೆ ಸಂಪರ್ಕಿಸಿದ ಎಲ್ಲ ವಿದ್ಯಾರ್ಥಿಗಳೂ ತಿಂಗಳಿಗೊಮ್ಮೆ ಕಿಟ್ ವಿತರಣೆಯಾಗುವುದಾಗಿ ತಿಳಿಸಿದರು. ಮುಂದಿನ ಸರಬರಾಜು ಬರುವ ಮುನ್ನವೇ ಕಿಟ್‌ನಲ್ಲಿರುವ ವಸ್ತುಗಳು ಮುಗಿದು ಹೋದರೆ, ತಕ್ಷಣ ಅವುಗಳ ಪೂರೈಕೆಯಾಗುವುದಿಲ್ಲ. ಸಾಮಾನ್ಯವಾಗಿ ತಿಂಗಳ ಮೊದಲನೆಯ ವಾರದಲ್ಲಿ ಕಿಟ್‌ನ ವಿತರಣೆಯಾಗುವುದಾಗಿ ಎಲ್ಲ ವಿದ್ಯಾರ್ಥಿಗಳೂ ತಿಳಿಸಿದರು.

ನಿಲಯಪಾಲಕರೊಡನೆ ನಡೆದ ಆಳವಾದ ಸಂದರ್ಶನಗಳಲ್ಲಿ ದೊರೆತ ಮಾಹಿತಿಯಿಂದ ತಿಳಿದು ಬಂದಿದ್ದೇನೆಂದರೆ, ನಿಗದಿತ ಸಮಯದಲ್ಲಿ ಅವರಿಗೆ ಕಿಟ್‌ಗಳನ್ನು ವಿತರಣೆ ಮಾಡಲು ಸಾಧ್ಯವಾಗುತ್ತದೆ ಎಂಬುದು. ಕೋಷ್ಟಕ ಸಂಖ್ಯೆ 8 ಹಾಗೂ ಚಿತ್ರ 7ರಿಂದ ತಿಳಿದು ಬರುವ ವಿಚಾರವೆಂದರೆ, ಹೆಚ್ಚಿನ ಸಂಖ್ಯೆಯ ನಿಲಯಪಾಲಕರು (53.33) ಸರಬರಾಜು ತಿಂಗಳಿಗೊಮ್ಮೆ ಆಗುತ್ತದೆ ಎಂದು ಹೇಳಿರುವುದು. ಶೇಕಡ 5.77ರಷ್ಟು ನಿಲಯಪಾಲಕರು ಸರಬರಾಜು ಮೂರು ತಿಂಗಳಿಗೊಮ್ಮೆ ಬರುತ್ತದೆ ಎಂದರೆ, ಶೇಕಡ 40.88ರಷ್ಟು ನಿಲಯಪಾಲಕರು ಸರಬರಾಜು ಆರು ತಿಂಗಳಿಗೊಮ್ಮೆಯಾಗುತ್ತದೆ ಎಂದಿದ್ದಾರೆ.

ಕೋಷ್ಟಕ 8 ಮತ್ತು ಚಿತ್ರ 7ರಲ್ಲಿ ಮೂಡಿ ಬಂದಿರುವ ಅಂಕಿ ಅಂಶಗಳಿಂದ ತಿಳಿದು ಬರುವುದೇನೆಂದರೆ, ಕಿಟ್‌ಗಳ ಸರಬರಾಜು ಒಂದರಿಂದ ಆರು ತಿಂಗಳವರೆಗೆ ಯಾವ ಸಮಯದಲ್ಲಾದರೂ ಆಗಬಹುದು ಎಂಬ ವಿಷಯ. ಆದರೆ ವಸತಿನಿಲಯದ ನಿವಾಸಿಗಳಿಗೆ ಕಿಟ್‌ಗಳನ್ನು ಪ್ರತಿ ತಿಂಗಳೂ ವಿತರಿಸುವ ವ್ಯವಸ್ಥೆಯಲ್ಲೇನೂ ವ್ಯತ್ಯವ್ಯವಾಗುವುದಿಲ್ಲ. ಒಮ್ಮೆ ತಯಾರಿಕಾ ಘಟಕದಿಂದ ಸರಬರಾಜಾಗುವ ಕಿಟ್‌ಗಳು, ಮುಂದಿನ ಸರಬರಾಜಾಗುವವರೆಗೂ ಸಾಮಾನ್ಯವಾಗಿ ಸಾಕಾಗುತ್ತವೆ ಎನ್ನುವುದು ನಿಲಯಪಾಲಕರ ಅಭಿಪ್ರಾಯ.

## ಕೋಷ್ಟಕ 8: ಅಧ್ಯಯನ ಜಿಲ್ಲೆಗಳಲ್ಲಿ ಶುಚಿ ಸಂಭ್ರಮ ಕಿಟ್‌ಗಳ ಸರಬರಾಜಿನಲ್ಲಿ ಕ್ರಮಬದ್ಧತೆ: ನಿಲಯಪಾಲಕರ ನೋಟಗಳು

| ಜಿಲ್ಲಾವಾರು ಸರಬರಾಜು | ಚಾಮರಾಜನಗರ | ಚಿತ್ರದುರ್ಗ | ಹಾವೇರಿ | ಕಲಬುರ್ಗಿ | ಕೋಲಾರ | ಮೈಸೂರು | ರಾಯಚೂರು | ವಿಜಯಪುರ | ಬಳ್ಳಾರಿ | ಒಟ್ಟು |
|---|---|---|---|---|---|---|---|---|---|---|
| ಪ್ರತಿ ತಿಂಗಳು | 3 (16) | 2 (29) | 3 (60) | 87 (100) | 6 (17) | 4 (31) | 1 (20) | - | 14 (100) | 120 (53.33) |
| ಮೂರು ತಿಂಗಳಿಗೊಮ್ಮೆ | 6 (32) | 1 (14) | - | - | 6 (17) | - | - | - | - | 13 (5.77) |
| ಮೂರು ತಿಂಗಳಿಗೊಮ್ಮೆ | 10 (53) | 4 (57) | 2 (40) | - | 23 (66) | 9 (69) | 4 (80) | 40 (100) | - | 92 (40.88) |
| ಒಟ್ಟು | **19** | **07** | **5** | **87** | **35** | **13** | **5** | **40** | **14** | **225** |

(ಬ್ರಾಕೆಟ್‌ನಲ್ಲಿರುವ ಅಂಕಿಗಳು ಶೇಕಡಾವಾರನ್ನು ತೋರಿಸುತ್ತವೆ)

## ಚಿತ್ರ 7: ಅಧ್ಯಯನ ಜಿಲ್ಲೆಗಳಲ್ಲಿ ಶುಚಿ ಸಂಭ್ರಮ ಕಿಟ್‌ಗಳ ಸರಬರಾಜಿನಲ್ಲಿ ಕ್ರಮಬದ್ಧತೆ: ನಿಲಯಪಾಲಕರ ನೋಟಗಳು




ಅಧ್ಯಯನಕ್ಕಾಗಿ ಸಂಪರ್ಕಕ್ಕೆ ಬಂದ ಬಹುತೇಕ ಸಮಾಜ ಕಲ್ಯಾಣ ಇಲಾಖಾಧಿಕಾರಿಗಳು ಕಿಟ್‌ಗಳು ಮೂರು ತಿಂಗಳಿಗೊಮ್ಮೆ ಸಾಮಾನ್ಯವಾಗಿ ಸರಬರಾಜಾಗುತ್ತವೆ ಎಂದು ತಿಳಿಸಿದರು. ಒಬ್ಬರೇ ಅಧಿಕಾರಿ, ತಯಾರಿಕಾ ಘಟಕದಿಂದ ಸರಬರಾಜು ಯಾವಾಗ ಆಗುತ್ತದೆ ಎನ್ನುವುದರ ಮೇಲೆ ಕಿಟ್‌ಗಳು ಯಾವಾಗ ವಸತಿನಿಲಯಗಳನ್ನು ತಲುಪುತ್ತವೆ ಎಂಬುದು ನಿಂತಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು, ನಿಲಯಪಾಲಕರು ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳೊಡನೆ ನಡೆದ ಸಂದರ್ಶನಗಳಿಂದ ತಿಳಿದು ಬಂದ ವಿಚಾರವೆಂದರೆ ಶುಚಿ ಸಂಭ್ರಮ ಕಿಟ್‌ಗಳ ಸರಬರಾಜು ಒಂದು ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿದೆ ಎಂಬುದು.

## ಕಾರ್ಯಕ್ರಮದ ತಲುಪುವಿಕೆ (Reach): ದುರುಪಯೋಗದ ಪ್ರಕರಣಗಳೇನಾದರೂ ಇವೆಯೇ ?

ಅಧ್ಯಯನಕ್ಕೆ ಒಳಪಟ್ಟ ಎಲ್ಲ ವಿದ್ಯಾರ್ಥಿಗಳೂ ಕಿಟ್ಟನ್ನು ಪಡೆಯಲು ಅರ್ಹರಾಗಿರುವವರೆಂದೂ ಅಂಥ ಅರ್ಹತೆ ಇದ್ದವರಿಗೆ ಮಾತ್ರ ಕಿಟ್ ಸರಬರಾಜು ಆಗುತ್ತಿದೆ ಎಂದು ತಿಳಿಸಿದರು. ಕಿಟ್ ಯೋಜನೆಯ ನಿಯಮಗಳ ಪ್ರಕಾರವೇ ಕಿಟ್‌ಗಳ

ವಿತರಣೆಯಾಗುತ್ತದೆ, ಆದ್ದರಿಂದ ಇಲ್ಲಿ ಅರ್ಹರಲ್ಲದವರಿಗೆ ಅದರ ನೀಡುವಿಕೆಯ ಪ್ರಶ್ನೆ ಬರುವುದೇ ಇಲ್ಲ. ಮತ್ತೊಂದು ಗಮನಾರ್ಹವಾದ ವಿಷಯವೆಂದರೆ ಶುಚಿ ಸಂಭ್ರಮ ಕಿಟ್ ಯೋಜನೆ ಎಲ್ಲ ಸರ್ಕಾರಿ ವಸತಿನಿಲಯಗಳಲ್ಲಿ ಜಾರಿಯಲ್ಲಿರುವುದಿರಂದ ಈ ನಿಲಯಗಳಲ್ಲಿ ವಾಸಿಸುವ ಎಲ್ಲ ವಿದ್ಯಾರ್ಥಿಗಳೂ ಈ ಯೋಜನೆಯಡಿಯಲ್ಲಿ ಬರುತ್ತಾರೆ. ವಸತಿನಿಲಯಗಳ ನಿಲಯಪಾಲಕರು ಸರಬರಾಜಾದ ಕಿಟ್‌ಗಳನ್ನು ದಾಖಲು ಮಾಡಿಕೊಂಡು, ಅವುಗಳನ್ನು ವಿತರಿಸುವಾಗ ಎಲ್ಲ ವಿದ್ಯಾರ್ಥಿಗಳಿಂದ ಸಹಿಯನ್ನು ಪಡೆದಿರುತ್ತಾರೆ. ಇಲಾಖೆಯ ಮೇಲಧಿಕಾರಿಗಳಿಗೆ ಈ ವಿತರಣಾ ಪ್ರಕ್ರಿಯೆಯ ಬಗ್ಗೆ ಆಗಿಂದಾಗ್ಗೆ ವರದಿಗಳನ್ನು ಸಲ್ಲಿಸುತ್ತಿರಬೇಕು, ಹಾಗೆ ಮಾಡದಿದ್ದಲ್ಲಿ ಅವರ ವೇತನಕ್ಕೆ ಸಂಬಂಧಿಸಿದ ಕಡತಗಳಿಗೇ ತಡೆ ಹಾಕುವ ಸಾಧ್ಯತೆಯಿದೆ.

ಕ್ಷೇತ್ರಾಧ್ಯಯನದಲ್ಲಿ ಭಾಗಿಗಳಾದ ಎಲ್ಲ ಸಮಾಜ ಕಲ್ಯಾಣ ಇಲಾಖಾಧಿಕಾರಿಗಳೂ ಕೂಡ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಕಿಟ್‌ಗಳು ತಲುಪುತ್ತಿವೆ ಎಂಬುದನ್ನು ಸಾಬೀತು ಪಡಿಸಿದರು.

ಕೇಂದ್ರೀಕೃತ ಗುಂಪು ಸಂದರ್ಶನಗಳು ನಡೆದಾಗ ಕೆಲವೆಡೆಗಳಲ್ಲಿ ಕಿಟ್‌ಗಳಲ್ಲಿರುವ ಕೆಲ ವಸ್ತುಗಳನ್ನು ವಸತಿನಿಲಯಗಳ ಕೆಲ ಸಿಬ್ಬಂದಿ ತೆಗೆದುಕೊಳ್ಳುತ್ತಾರೆ ಎಂಬ ಮಾತುಗಳು ಕೇಳಿ ಬಂದವು. ಈ ವಿಚಾರವನ್ನು ಕುರಿತಂತೆ ಪರಿಶೀಲನೆಯ ಅಗತ್ಯವಿದೆ.

## ದಾಖಲಿಕೆ ಮತ್ತು ಉಸ್ತುವಾರಿ ವ್ಯವಸ್ಥೆ

ಅಧ್ಯಯನದಲ್ಲಿ ಪಾಲ್ಗೊಂಡ ಎಲ್ಲ ನಿಲಯಪಾಲಕರೂ, ಸ್ವತಃ ತಾವೇ ಶುಚಿ ಸಂಭ್ರಮ ಕಿಟ್ ಯೋಜನೆಗೆ ಸಂಬಂಧಿಸಿದ ದಾಖಲೆಗಳನ್ನು ತಯಾರಿಸಿ – ನಿರ್ವಹಿಸುವುದಾಗಿ ತಿಳಿಸಿದರು. ಕ್ಷೇತ್ರಾಧ್ಯಯನಕ್ಕೆ ತೆರಳಿದ್ದ ತಂಡಕ್ಕೆ ದಾಖಲೆಗಳನ್ನು ಪರಿಶೀಲಿಸಲು ಅವಕಾಶಮಾಡಿಕೊಟ್ಟ ನಿಲಯಪಾಲಕರು, ಅವುಗಳ ಚಿತ್ರ ತೆಗೆಯಲಾಗಲಿ, ಫೋಟೊಕಾಪಿ ಪ್ರತಿಗಳನ್ನು ಪಡೆಯಲಾಗಲಿ ಅನುಮತಿ ನೀಡಲಿಲ್ಲ. ದಾಖಲೆಗಳ ಪ್ರತಿಗಳು ಬೇಕಾದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಛೇರಿಗಳಿಗೆ ಭೇಟಿ ನೀಡಿ ಅವುಗಳನ್ನು ಪಡೆಯಬಹುದೆಂದು ತಿಳಿಸಿದರು.

**ಕೋಷ್ಟಕ 9: ಕಿಟ್‌ಗಳನ್ನು ಪಡೆಯುವ ಮತ್ತು ವಿತರಿಸುವ ಪ್ರಕ್ರಿಯೆಗಳ ದಾಖಲಿಕೆ**

| ಜಿಲ್ಲೆಗಳು → <br> ಶುಚಿ ಸಂಭ್ರಮ ಯೋಜನೆಯ ದಾಖಲೆಗಳ ನಿರ್ವಹಣಾ ಪ್ರಕ್ರಿಯೆ ↓ | ಚಾಮರಾಜನಗರ | ಚಿತ್ರದುರ್ಗ | ಹಾವೇರಿ | ಕಲಬುರ್ಗಿ | ಕೋಲಾರ | ಮೈಸೂರು | ರಾಯಚೂರು | ವಿಜಯಪುರ | ಬಳ್ಳಾರಿ | ಒಟ್ಟು |
|---|---|---|---|---|---|---|---|---|---|---|
| ದಾಖಲೆಗಳ ನಿರ್ವಹಣೆ | 19 | 7 | 5 | 87 | 35 | 13 | 5 | 40 | 14 | 225 |
| ಸ್ಟಾಕ್ ರಿಜಿಸ್ಟರ್ ನಿರ್ವಹಣೆ | 19 | 7 | 5 | 87 | 35 | 13 | 5 | 40 | 14 | 225 |
| ಮೇಲಧಿಕಾರಿಗಳ ಭೇಟಿ | 5 | 7 | 5 | 6 | 35 | 13 | 5 | 40 | 14 | 130 |
| ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶೀಲನೆ | 19 | 7 | 5 | 87 | 35 | 13 | 5 | 40 | 14 | 225 |
| ಕಿಟ್ ವಿತರಣೆಯ ಪುಸ್ತಕದಲ್ಲಿ ವಿದ್ಯಾರ್ಥಿಗಳ ಸಹಿ ಪಡೆಯುವಿಕೆ | 19 | 7 | 5 | 87 | 35 | 13 | 5 | 40 | 14 | 225 |

### ಚಿತ್ರ 8: ಕಿಟ್‌ಗಳನ್ನು ಪಡೆಯುವ ಮತ್ತು ವಿತರಿಸುವ ಪ್ರಕ್ರಿಯೆಗಳ ದಾಖಲಿಕೆ




ಎಲ್ಲ ನಿಲಯಪಾಲಕರೂ ತಾಲ್ಲೂಕು ಮಟ್ಟದ ಅಧಿಕಾರಿಗಳು ತಮ್ಮ ವಸತಿನಿಲಯಗಳಿಗೆ ಭೇಟಿಯಿತ್ತು ದಾಖಲೆಗಳನ್ನು ಪರಿಶೀಲಿಸುತ್ತಾರೆ ಎಂದು ತಿಳಿಸಿದ್ದಾರೆ.

### ಕೋಷ್ಟಕ 10: ಮೇಲಧಿಕಾರಿಗಳಿಂದ ವಸತಿನಿಲಯಗಳ ಭೇಟಿಯ ಪರಿ

| ಜಿಲ್ಲೆ | ವಾರಕ್ಕೊಮ್ಮೆ | ತಿಂಗಳಿಗೊಮ್ಮೆ | ಎರಡು ತಿಂಗಳಿಗೊಮ್ಮೆ | ಯಾವಾಗಲಾದರೂ ಒಮ್ಮೆ | ಒಟ್ಟು |
|---|---|---|---|---|---|
| **ಚಾಮರಾಜನಗರ** | - | 4 | - | - | 04 |
| **ಚಿತ್ರದುರ್ಗ** | 1 | 2 | 1 | 2 | 06 |
| **ಹಾವೇರಿ** | - | 5 | - | 1 | 06 |
| **ಕಲಬುರ್ಗಿ** | 1 | 5 | 1 | 1 | 08 |
| **ಕೋಲಾರ** | 3 | - | 1 | 1 | 05 |
| **ಮೈಸೂರು** | - | 1 | - | 3 | 04 |
| **ರಾಯಚೂರು** | - | 4 | - | 1 | 05 |
| **ವಿಜಯಪುರ** | - | 2 | 2 | 2 | 06 |
| **ಬಳ್ಳಾರಿ** | - | 3 | - | 2 | 05 |
| **ಒಟ್ಟು** | **05** | **26** | **05** | **13** | **49** |

ವಿದ್ಯಾರ್ಥಿಗಳಿಂದ ಹಾಗೂ ಕೇಂದ್ರೀಕೃತ ಗುಂಪು ಸಂದರ್ಶನಗಳಿಂದ ಹೊರಬಂದ ಮಾಹಿತಿ ನಿಲಯಪಾಲಕರು ನೀಡಿದ ಮಾಹಿತಿಯನ್ನು ಪುಷ್ಠೀಕರಿಸಿದೆ. ಸಂದರ್ಶನ ತಂಡ ಭೇಟಿ ಮಾಡಿದ ಇಲಾಖಾ ಅಧಿಕಾರಿಗಳು ಸಾಮಾನ್ಯವಾಗಿ ಎರಡು ತಿಂಗಳಿಗೊಮ್ಮೆಯಾದರೂ ತಾವು ವಸತಿನಿಲಯಗಳಿಗೆ ಭೇಟಿ ನೀಡುವುದಾಗಿ ಹೇಳಿದರು. ಕೋಷ್ಟಕ 10ರಲ್ಲಿ ನೀಡಿರುವ ಅಂಕಿ – ಅಂಶಗಳು ಇದನ್ನು ಎತ್ತಿ ಹಿಡಿದಿವೆ.

ಸಂದರ್ಶನ ತಂಡದೊಡನೆ ವಿದ್ಯಾರ್ಥಿಗಳು ತಮಗೆ ಕಿಟ್ ವಿತರಣಾ ಪ್ರಕ್ರಿಯೆಯ ಬಗ್ಗೆ ಸಂಪೂರ್ಣ ತಿಳಿವಳಿಕೆ ಇರುವುದಾಗಿ ತಿಳಿಸಿದರು. ಎಲ್ಲ ದಾಖಲೆಗಳ ನಿರ್ವಹಣೆ ಸಮರ್ಪಕವಾಗಿರುವುದು ಅವರಿಂದ ತಿಳಿದು ಬಂತು. ಕಿಟ್‌ಗಳನ್ನು ಸ್ವೀಕಾರ ಮಾಡಿದಾಗ ರಿಜಿಸ್ಟರ್‌ನಲ್ಲಿ ತಮ್ಮ ಸಹಿ ಪಡೆದುಕೊಳ್ಳುವುದಾಗಿ ವಿದ್ಯಾರ್ಥಿಗಳು ತಿಳಿಸಿದರು. ಕೆಲ ವಿದ್ಯಾರ್ಥಿಗಳು ಹೇಳಿದ ಪ್ರಕಾರ, ಮೂರು ತಿಂಗಳಿಗೂ ಮುಂಚೆಯೇ ನಿಲಯಪಾಲಕರು ಕಿಟ್‌ಗಳಿಗೆ ಬೇಡಿಕೆಯನ್ನು ಸಲ್ಲಿಸುತ್ತಾರೆ, ಆದ್ದರಿಂದ ಅವುಗಳ ವಿತರಣೆಯಲ್ಲಿ ಯಾವುದೇ ಅಡಚಣೆ ಇರುವುದಿಲ್ಲ.

## ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳ ಮೇಲೆ ಶುಚಿ ಸಂಭ್ರಮ ಕಿಟ್ ಯೋಜನೆಯ ಪ್ರಭಾವ

ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಜಾರಿಗೆ ಬಂದ ಶುಚಿ ಸಂಭ್ರಮ ಯೋಜನೆ, ವಿಶೇಷವಾಗಿ ವಿದ್ಯಾರ್ಥಿಗಳ ಚರ್ಮದ ರಕ್ಷಣೆ ಮತ್ತು ತಲೆ ಹೇನಿನಿಂದ ರಕ್ಷಣೆ ಪಡೆಯಲು ನೆರವಾಗಿದೆ. ಅವರ ಸಾಮಾನ್ಯ ಆರೋಗ್ಯ ಸ್ಥಿತಿಯಲ್ಲೇ ಈ ಯೋಜನೆ ಸಕಾರಾತ್ಮಕ ಪ್ರಭಾವವನ್ನು ಬೀರಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಊಟ ಮಾಡುವ ಮೊದಲು ಹಾಗೂ ಶೌಚಾಲಯವನ್ನು ಬಳಸಿದ ನಂತರ ಕೈಗಳನ್ನು ತೊಳೆಯುವ ಅಭ್ಯಾಸ ಅವರಲ್ಲಿ ಬೆಳೆದದ್ದು. ಈ ಅಭ್ಯಾಸ ಅನೇಕರಲ್ಲಿ ಯಾವ ಮಟ್ಟಿಗೆ ಬೇರೂರಿದೆಯೆಂದರೆ, ಅವರು ಶೌಚಾಲಯವನ್ನು ಬಳಸಿದ ನಂತರ ಸಾಬೂನನ್ನು ಬಳಸಿ ಕೈಗಳನ್ನು ತೊಳೆಯುತ್ತಾರೆ. ಇದು ಯೋಜನೆಯ ಯಶಸ್ಸುಗಳಲ್ಲಿ ಒಂದು. ವಸತಿನಿಲಯಕ್ಕೆ ದಾಖಲಾಗುವ ಮುನ್ನ ಅನೇಕ ಮಕ್ಕಳು, ತುರಿಗಜ್ಜಿ (scabies) ಯಂಥ ಚರ್ಮರೋಗದಿಂದ ನರಳುತ್ತಿದ್ದು, ಈಗ ಈ ಸಮಸ್ಯೆಯಿಂದ ಹೊರ ಬಂದಿದ್ದಾರೆ. ಅದಕ್ಕೆ ಮುಖ್ಯ ಕಾರಣವೆಂದರೆ, ವೈಯಕ್ತಿಕ ಶುಚಿತ್ವವನ್ನು ಕಾಪಾಡಿಕೊಳ್ಳಲು ಅವರಿಗೆ ಕಿಟ್ ನೀಡಿದ ಅವಕಾಶ. ಮೆಟ್ರಿಕ್ ಪೂರ್ವ ವಸತಿನಿಲಯಗಳ ವಿದ್ಯಾರ್ಥಿಗಳು, ತಾವು ಅಲ್ಲಿ ವಾಸವಿರಲು ಆರಂಭಿಸಿದ ಮೇಲೆ ಅತಿಸಾರ ಭೇದಿಯ ಸಮಸ್ಯೆಯಿಂದ ಹೆಚ್ಚು-ಕಡಿಮೆ ಹೊರಬಂದಿರುವುದಾಗಿ ತಿಳಿಸಿರುವುದು ಶುಚಿ ಸಂಭ್ರಮ ತಂದಿರುವ ಸತ್ಪರಿಣಾಮಗಳಲ್ಲಿ ಒಂದು. ಅಧ್ಯನಯಕ್ಕೆ ಒಳಪಟ್ಟ ವಿದ್ಯಾರ್ಥಿಗಳು ಆರೋಗ್ಯ ರಕ್ಷಣೆಯ ಮೇಲೆ ತಾವು ಖರ್ಚು ಮಾಡುತ್ತಿದ್ದ ಹಣದಲ್ಲಿ ಅರ್ಧದಷ್ಟು (48%-3648/7660) ಇಳಿಮುಖವಾಗಿದೆ ಎಂದು ಹೇಳಿದ್ದಾರೆ. ಈ ಪ್ರವೃತ್ತಿ ಎಲ್ಲ ವಸತಿನಿಲಯಗಳಲ್ಲೂ ಕಂಡು ಬಂದಿದ್ದು ಗಮನಾರ್ಹ. ಶುಚಿ ಸಂಭ್ರಮ ಕಿಟ್ ಯೋಜನೆ ತಮ್ಮ ಬದುಕಿನಲ್ಲಿ ತಂದಿರುವ ಧನಾತ್ಮಕ ಬದಲಾವಣೆಗಳ ಬಗ್ಗೆ ಅವರು ಸಂತುಷ್ಟಿಯನ್ನು ವ್ಯಕ್ತಪಡಿಸಿದರು.

ಅನೇಕ ವಿದ್ಯಾರ್ಥಿಗಳು ಹಾಗೂ ಅವರ ಕುಟುಂಬಗಳ ಸದಸ್ಯರಿಗೆ ನೈರ್ಮಲ್ಯ ರಕ್ಷಕ ಸಾಧನಗಳನ್ನು ಮಾರುಕಟ್ಟೆಯಿಂದ ಖರೀದಿಸಲು ಹಣಕಾಸಿನ ತೊಂದರೆಯಿದ್ದುದ್ದರಿಂದ, ಎಲ್ಲ ಕುಟುಂಬಗಳಲ್ಲಿಯೂ ಎಲ್ಲ ಅಗತ್ಯ ವಸ್ತುಗಳನ್ನು ಖರೀದಿಸಲು ಸಾಧ್ಯವಿಲ್ಲ. ಆದರೆ ತಮ್ಮ ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳಬೇಕಾದರೆ, ಕಿಟ್‌ನಲ್ಲಿರುವ ವಸ್ತುಗಳನ್ನು ನಿರಂತರವಾಗಿ ಬಳಸುತ್ತಲೇ ಇರಬೇಕು ಎಂಬ ಸೂಕ್ಷ್ಮತೆಯನ್ನು ಅವರು ಬೆಳೆಸಿಕೊಂಡಿದ್ದಾರೆ. ವೈದ್ಯರ ಭೇಟಿ ಕಡಿಮೆಯಾದಾಗ ಸಹಜವಾಗಿಯೇ ಹಣದ ಉಳಿತಾಯವಾಗಿ, ಅದನ್ನು ಮತ್ಯಾವುದೇ ಅಗತ್ಯ ವಸ್ತುಗಳ ಖರೀದಿಗೆ ಬಳಸಬಹುದು. ಅದರ ಆರ್ಥಿಕ ಆಯಾಮ ಹೇಗೆ ಇರಲಿ, ಶುಚಿ ಸಂಭ್ರಮ ಕಿಟ್ ಯೋಜನೆ ವಿದ್ಯಾರ್ಥಿಗಳ ಕುಟುಂಬಗಳಿಗೆ ವೈಯಕ್ತಿಕ ನೈರ್ಮಲ್ಯದ ಮಹತ್ವವನ್ನು ಕುರಿತ ಜ್ಞಾನ ವರ್ಗಾವಣೆಗೆ ಎಡೆಮಾಡಿಕೊಟ್ಟಿರುವುದನ್ನು ವಿಶೇಷವಾಗಿ ಇಲ್ಲಿ ಸ್ಮರಿಸಬೇಕಾಗುತ್ತದೆ.

ವಿದ್ಯಾರ್ಥಿಗಳು ವಿಶೇಷವಾಗಿ ಪ್ರಸ್ತಾಪ ಮಾಡಿದ ಮತ್ತೊಂದು ವಿಷಯವೆಂದರೆ ಬಾಯಿಯ ನೈರ್ಮಲ್ಯವನ್ನು ರಕ್ಷಣೆ ಮಾಡಿರುವ ವಿಚಾರಕ್ಕೆ ಸಂಬಂಧಿಸಿದ್ದು. ಒಸಡುಗಳಿಗೆ ಸೋಂಕು ತಗಲುವುದು ಅಥವಾ ಬಾಯಿಯ ದುರ್ನಾತ ಅನೇಕ ಸಂದರ್ಭಗಳಲ್ಲಿ ಅವರಿಗೆ ಮುಜುಗರವನ್ನು ತರುತ್ತಿತ್ತು. ಆದರೆ ಕಿಟ್‌ನಲ್ಲಿ ಒದಗಿಸಿರುವ ಟೂತ್ ಪೇಸ್ಟ್ ಮತ್ತು ಬ್ರಷ್‌ನಿಂದಾಗಿ,

ಅವರು ದಿನವೂ ಹಲ್ಲುಜ್ಜುತಿದ್ದು ಈ ಹಿಂಸೆಯಿಂದ ಮುಕ್ತಿ ದೊರೆತಿದೆ. ವಸತಿನಿಲಯಕ್ಕೆ ಬರುವ ಮುನ್ನ ಅವರು ದಂತ ವೈದ್ಯರ ಬಳಿ ಹೋಗುತ್ತಿರಲಿಲ್ಲವಾಗಿ, ಇಲ್ಲ ದಂತಬೇನೆಯನ್ನು ಅನುಭವಿಸುತ್ತಿದ್ದರು ಅಥವಾ ಗೃಹೌಷಧಿಗಳನ್ನು ತೆಗೆದುಕೊಂಡು ಸಮಸ್ಯೆಯ ಶಮನಕ್ಕೆ ಪ್ರಯತ್ನಿಸುತ್ತಿದ್ದರು. ಕೇಂದ್ರೀಕೃತ ಸಂದರ್ಶನಗಳ ಅವಧಿಯಲ್ಲಿ ತಿಳಿದು ಬಂದುದ್ದೇನೆಂದರೆ ಕೆಲ ಕುಟುಂಬಗಳಲ್ಲಿ ಸಾಬೂನು, ಟೂತ್ ಪೇಸ್ಟ್ ಅಥವಾ ಹಲ್ಲುಜ್ಜುವ ಪುಡಿ ಹಾಗೂ ಟೂತ್ ಬ್ರಷ್‌ಗಳನ್ನು ಬಳಸುವ ಪದ್ಧತಿ ಇತ್ತು. ಆದರೆ ಇದನ್ನು ಬಳಸುತ್ತಿದ್ದವರು ಆ ಕುಟುಂಬಗಳಲ್ಲಿದ್ದ ಪುರುಷರು ಮಾತ್ರ. ಸ್ನಾನ ಮಾಡುವಾಗಲಾಗಲಿ, ಕೈ ತೊಳೆಯಲಾಗಲಿ ಸಾಬೂನನ್ನು ಬಳಸಲು ಮಹಿಳಿಯರಿಗೆ ಅವಕಾಶವೇ ಇರಲಿಲ್ಲ. ಆದರೆ ಹೆಣ್ಣು ಮಕ್ಕಳು ವಸತಿನಿಲಯಗಳಿಗೆ ಬರಲಾರಂಭಿಸಿದ ಮೇಲೆ ಅವರು ಅಲ್ಲಿ ಕಲಿತ ನೈರ್ಮಲ್ಯ ಸಂಬಂಧಿ ಅಭ್ಯಾಸಗಳ ಬಗ್ಗೆ ತಮ್ಮ ಕುಟುಂಬದ ಮಹಿಳೆಯರಿಗೂ ತಿಳಿಸಿಕೊಟ್ಟಾಗ, ವಿಶೇಷವಾಗಿ ಋತುಚಕ್ರದ ಸಂದರ್ಭದಲ್ಲಿಯಾದರೂ ಅವರು ಕೂಡ ಕೆಲ ಪ್ರಸಾಧನ ಗಳನ್ನು ಬಳಸಲಾರಂಭಿಸಿದ್ದಾರೆ.

ಶುಚಿ ಸಂಭ್ರಮ ಕಿಟ್ ಯೋಜನೆ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಬೇಕಾದರೆ, ಆ ವಸತಿನಿಲಯಗಳಲ್ಲಿ ಮೂಲ ಸೌಕರ್ಯಗಳ ಲಭ್ಯತೆ ಬಹು ಮುಖ್ಯ. ಈ ವಿಷಯವನ್ನು ಕುರಿತಂತೆ ಪ್ರತ್ಯೇಕ ಹಾಗೂ ವಿಷದವಾದ ಅಧ್ಯಯನದ ಅಗತ್ಯವಿದೆ.

ಪ್ರಸಕ್ತ ಮೌಲ್ಯಮಾಪನ ಅಧ್ಯಯನ, ಶುಚಿ ಸಂಭ್ರಮ ಕಿಟ್ ಯೋಜನೆಯ ಒಟ್ಟಾರೆ ಪ್ರಯೋಜನಗಳನ್ನು ಹೊರತಂದಿದೆ. ಈ ಯೋಜನೆಯ ಎಲ್ಲ ಫಲಾನುಭವಿಗಳೂ ಕಿಟ್‌ನಿಂದ ಆಗಿರುವ ಅನುಕೂಲಗಳನ್ನು ಗುರುತಿಸಿದ್ದಾರೆ ಹಾಗೂ ಈ ಯೋಜನೆ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳೆರಡರಲ್ಲೂ ಮುಂದುವರೆಯಬೇಕೆಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಆದರೆ ಕಿಟ್‌ನೊಳಗೆ ಇನ್ನೂ ಕೆಲ ವಸ್ತುಗಳ ಸೇರ್ಪಡೆಯಾಗಬೇಕೆಂದು ಸಲಹೆ ಮಾಡಿದ್ದಾರೆ (ಶಿಫಾರಸ್ಸುಗಳನ್ನು ನೋಡಿ).

# IV

# ಶಿಫಾರಸ್ಸುಗಳು

## ಶಿಫಾರಸ್ಸುಗಳು

ಅಧ್ಯಯನದ ಶಿಫಾರಸ್ಸುಗಳನ್ನು ಈ ಕೆಳಕಂಡ ಮೂರು ವರ್ಗಗಳಲ್ಲಿ ವಿಂಗಡಿಸಲಾಗಿದೆ:

- ❖ ಕಿಟ್‌ಗಳಲ್ಲಿ ಸುಧಾರಣೆ
- ❖ ಆರೋಗ್ಯ ಸೇವೆ ಮತ್ತು ಆಪ್ತ ಸಮಾಲೋಚನೆ
- ❖ ಯೋಜನೆಯ ಮೇಲುಸ್ತುವಾರಿ

ಕಿಟ್‌ನಲ್ಲಿರಬೇಕಾದ ವಸ್ತುಗಳಲ್ಲಿ ಆಗಬೇಕಾದ ಬದಲಾವಣೆಯಿಂದ ಆರಂಭಿಸೋಣ

## ಕಿಟ್‌ನಲ್ಲಿ ಆಗಬೇಕಾಗಿರುವ ಬದಲಾವಣೆ

ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಎರಡೂ ವಸತಿನಿಲಯಗಳಲ್ಲಿ ಶುಚಿ ಸಂಭ್ರಮ ಕಿಟ್ ಯೋಜನೆಯನ್ನು ಮುಂದುವರೆಸಬೇಕು. ಆದರೆ, ಕೆಲವೊಂದು ಪದಾರ್ಥಗಳನ್ನು ಕಿಟ್‌ನಲ್ಲಿ ಸೇರಿಸಬೇಕಿದೆ. ಕೋಷ್ಟಕ 11ರಲ್ಲಿ ಇದಕ್ಕೆ ಸಂಬಂಧಿಸಿದ ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ 11: ಕಿಟ್‌ನಲ್ಲಿ ಹಾಲಿ ಇರುವ ವಸ್ತುಗಳ ಸಂಖ್ಯೆ ಮತ್ತು ಪ್ರಮಾಣ ಮತ್ತು ಈಗ ಶಿಫಾರಸ್ಸು ಮಾಡಿರುವುದು**

| | **ವಸ್ತು** | **ಹಾಲಿ ಇರುವ ವಸ್ತುಗಳು** | **ಶಿಫಾರಸ್ಸು ಮಾಡಿರುವ ವಸ್ತುಗಳು ಮತ್ತು ಪ್ರಮಾಣ** |
|---|---|---|---|
| **ಬಾಲಕಿಯರು** | 1. ಮೈಸೂರು ಸ್ಯಾಂಡಲ್ ಸಾಬೂನು<br>2. ಮೈಸೂರು ಸ್ಯಾಂಡಲ್‌ನ ಕೊಬ್ಬರಿ ಎಣ್ಣೆ<br>3. ಮೈಸೂರು ಸ್ಯಾಂಡಲ್ ಪೌಡರ್<br>4. ಎಂ.ಡಿ.ಸಿ. ಡಿಟರ್ಜೆಂಟ್ ಸಾಬೂನು<br>5. ಅಜಂತಾ ಟೂತ್ ಪೇಸ್ಟ್ ಮತ್ತು ಬ್ರಷ್ | 75 ಗ್ರಾಂ<br>100 ಎಂ.ಎಲ್<br>50 ಗ್ರಾಂ<br>150 ಗ್ರಾಂ<br>ಅಜಂತಾ ಟೂತ್ ಪೇಸ್ಟ್ – 50 ಗ್ರಾಂ<br>ಅಜಂತಾ ಟೂತ್ ಬ್ರಷ್ - 1 | 1. ಸ್ಯಾಂಡಲ್ ಸಾಬೂನು: 2 ಪ್ರತಿಯೊಂದು 75 ಗ್ರಾಂ<br>2. ಎಣ್ಣೆ: 150 ಎಂ.ಎಲ್<br>3. ಟಾಲ್ಕಂ ಪೌಡರ್: ಬದಲಾವಣೆಯ ಅಗತ್ಯವಿಲ್ಲ<br>4. ಡಿಟರ್ಜೆಂಟ್ ಸೋಪ್: 150 ಗ್ರಾಂ -3<br>5. ಟೂತ್ ಪೇಸ್ಟ್: 100 ಗ್ರಾಂ<br>**ಹೊಸದಾಗಿ ಸೇರ್ಪಡೆಯಾಗಬೇಕಾದದ್ದು**<br>6. ತಲೆ ಹೇನಿಗೆ ಮೆಡಿಕೇರ್: 1 ಶೀಷೆ<br>7. ಶಾಂಪೂ: 100 ಎಂ.ಎಲ್ ಶೀಷೆ |

| | | | |
|---|---|---|---|
| **ಬಾಲಕರು** | 1. ಮೈಸೂರು ಸ್ಯಾಂಡಲ್ ಸಾಬೂನು<br>2. ಮೈಸೂರು ಸ್ಯಾಂಡಲ್‌ನ ಕೊಬ್ಬರಿ ಎಣ್ಣೆ<br>3. ಎಂ.ಡಿ.ಸಿ. ಡಿಟರ್ಜೆಂಟ್ ಸಾಬೂನು<br>4. ಅಜಂತಾ ಟೂತ್ ಪೇಸ್ಟ್ ಮತ್ತು ಬ್ರಷ್ | 75 ಗ್ರಾಂ, 1<br>100 ಎಂ.ಎಲ್ – 1<br>50 ಗ್ರಾಂ – 1<br>150 ಗ್ರಾಂ – 2<br>ಅಜಂತಾ ಟೂತ್ ಪೇಸ್ಟ್ – 50 ಗ್ರಾಂ 1<br>ಅಜಂತಾ ಟೂತ್ ಬ್ರಷ್ - 1 | 1. ಸೋಪು: 2 (75 ಗ್ರಾಂ)<br>2. ಎಣ್ಣೆ: ಇನ್ನೂ 50 ಗ್ರಾಂ<br>3. ಡಿಟರ್ಜೆಂಟ್ ಸೋಪು: 150 ಗ್ರಾಂ 3<br>4. ಟೂತ್ ಪೇಸ್ಟ್: 100 ಗ್ರಾಂ<br>**ಹೊಸದಾಗಿ ಸೇರ್ಪಡೆಯಾಗಬೇಕಾದ್ದು**<br>5. ಟಾಲ್ಕಂ ಪೌಡರ್: 50 ಗ್ರಾಂ<br>6. ತಲೆ ಹೇನಿಗೆ ಮೆಡಿಕೇರ್: 1 ಶೀಷೆ<br>7. ಶಾಂಪೂ: 100 ಎಂ.ಎಲ್<br>8. ಶೇವಿಂಗ್ ಕಿಟ್ |

## ಆರೋಗ್ಯ ಸೇವೆ ಮತ್ತು ಆಪ್ತ ಸಮಾಲೋಚನೆ

- ಶುಚಿ ಸಂಭ್ರಮ ಯೋಜನೆಯ ಅನುಷ್ಠಾನದಿಂದ ಕುಟುಂಬಗಳು, ಅತಿಸಾರ ಭೇದಿ ಹಾಗೂ ತುರಿಗಜ್ಜಿ ಖಾಯಿಲೆಗಳ ಚಿಕಿತ್ಸೆಗೆ ಆಸ್ಪತ್ರೆಗಳಿಗೆ ಅಲೆದಾಡುವುದು ಶೇಕಡ 50ರಷ್ಟು ಕಡಿಮೆಯಾಗಿರುವುದರಿಂದ, ಈ ಯೋಜನೆಯು ಆರೋಗ್ಯ ರಕ್ಷಣೆಗಾಗಿ ಹೆಚ್ಚುವರಿ ಹಣ ಖರ್ಚಾಗುವುದನ್ನು ತಡೆಯುತ್ತದೆ. ಈ ಹಿನ್ನಲೆಯಲ್ಲಿ ನಿರಂತರ ಆರೋಗ್ಯ ತಪಾಸಣೆ ಅತಿ ಮುಖ್ಯವಾಗುತ್ತದೆ.
- ವಸತಿನಿಲಯಗಳಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸುವುದರಿಂದ ವಯೋಮಾನಕ್ಕನುಗುಣವಾಗಿ ಹಾಗೂ ಜೀವನ ಶೈಲಿಯಿಂದಾಗಿ ಬರಬಹುದಾದ ಕಾಯಿಲೆಗಳನ್ನು ಗುರುತಿಸಿ, ಸೂಕ್ತ ಔಷಧೋಪಚಾರ ಹಾಗೂ ಆರೋಗ್ಯ ಸಲಹೆ ನೀಡುವುದರಿಂದ ಶುಚಿ ಸಂಭ್ರಮ ಕಾರ್ಯಕ್ರಮವನ್ನು ಮತ್ತಷ್ಟು ಬಲಪಡಿಸಬಹುದು.
- ಎಲ್ಲಾ ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಆಪ್ತ ಸಮಾಲೋಚನಾ ಕೇಂದ್ರಗಳಿರುತ್ತವೆ. ಈ ಕೇಂದ್ರಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿರುವ ವೈದ್ಯರು ತಮ್ಮ ವ್ಯಾಪ್ತಿಯಲ್ಲಿ ಬರುವ ವಸತಿನಿಲಯಗಳಿಗೆ ತಿಂಗಳಿಗೆ ಒಮ್ಮೆಯಾದರೂ ಭೇಟಿಕೊಟ್ಟು ವಸತಿನಿಲಯಗಳಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ ಆಪ್ತ ಸಮಾಲೋಚನೆ ನಡೆಸಬೇಕು.
- 104 ಟೋಲ್ ಫ್ರೀ ಕಾಲ್ ಸೆಂಟರ್ (ಸಹಾಯವಾಣಿ) ನಂಬರ್ ಆಗಿದ್ದು, ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತದೆ. 104 ಆರೋಗ್ಯ ಹೆಲ್ಪ್‌ಲೈನ್ ಸಣ್ಣ ಪುಟ್ಟ ಆರೋಗ್ಯದ ಸಮಸ್ಯೆಗಳಿಗೆ ಕಾಲ್ ಸೆಂಟರ್‌ಗೆ ಕರೆ ಮಾಡಿದಾಗ, ಉಚಿತ ಫೋನ್ ಕರೆಯ ಮೂಲಕ ಚಿಕಿತ್ಸೆ ನೀಡುವುದರ ಜೊತೆಗೆ, SMSನ ಮೂಲಕ ಔಷಧಿಯನ್ನು ತೆಗೆದುಕೊಳ್ಳಲು ಸಲಹೆಯನ್ನು ನೀಡಲಾಗುತ್ತದೆ. ಅಲ್ಲದೆ ತಜ್ಞರು, ಆಪ್ತ ಸಮಾಲೋಚನೆಯ ಮೂಲಕ ಖಿನ್ನತೆ, ಆತ್ಮಹತ್ಯಾ ಪ್ರವೃತ್ತಿ, ಮಾದಕ ವಸ್ತುಗಳ ಚಟ ಹಾಗೂ ಇನ್ನೂ ಮುಂತಾದ ಹಲವು ಖಾಯಿಲೆಗಳಿಗೆ ದೈಹಿಕ – ಮಾನಸಿಕ ಚಿಕಿತ್ಸೆಯನ್ನು ನೀಡುವರು. ಈ ಸೌಲಭ್ಯವನ್ನು ಕರ್ನಾಟಕದ ಆರೋಗ್ಯ ಮತ್ತು ಕುಟುಂಬಕಲ್ಯಾಣ ಇಲಾಖೆಯ ವತಿಯಿಂದ ಜಾರಿಗೆ ತರಲಾಗಿದೆ. ಆರೋಗ್ಯ Helpline 104 ಬಗ್ಗೆ ಮಾಹಿತಿ ಎಲ್ಲಾ ವಸತಿನಿಲಯಗಳಲ್ಲಿ ಲಭ್ಯವಿರಬೇಕು. ಹಾಗೆಯೇ 104 Helpline ಅನ್ನು ವಿದ್ಯಾರ್ಥಿಗಳು ಬಳಸಲು ಒಂದು ಕಾರ್ಯನಿರತ ದೂರವಾಣಿ ಸೌಲಭ್ಯವನ್ನು ವಸತಿನಿಲಯಗಳಲ್ಲಿ ಒದಗಿಸಬೇಕು.

## ಯೋಜನೆಯ ಮೇಲುಸ್ತುವಾರಿ

- ಕಿಟ್‌ನಲ್ಲಿ ಒದಗಿಸಲಾಗಿರುವ ಎಲ್ಲಾ ಸಾಮಗ್ರಿಗಳ ಗುಣಮಟ್ಟವನ್ನು ಆಗಿಂದಾಗ್ಗೆ ಪರಿಶೀಲಿಸಬೇಕು.
- ವಸತಿನಿಲಯಗಳ ನಿಲಯಪಾಲಕರು ಹೊಸದಾಗಿ ಬಂದವರಿಗೆ ಪರಿಚಯಾತ್ಮಕ ಕಾರ್ಯಕ್ರಮವನ್ನು ಆಯೋಜಿಸಿ, ಕಿಟ್‌ನಲ್ಲಿರುವ ಸಾಮಗ್ರಿಗಳ ಬಳಕೆಯ ಬಗ್ಗೆ ಹಾಗೂ ಅದು ಏಕೆ ಮತ್ತು ಹೇಗೆ ಬಳಸಬೇಕು ಎಂಬುದನ್ನು ತಿಳಿಸಬೇಕು.
- ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿರುವ ಮೂಲ ಸೌಕರ್ಯಗಳ ಸ್ಥಿತಿಯನ್ನು ಪರಿಶೀಲಿಸಬೇಕಾಗುತ್ತದೆ, ಮತ್ತು ಮೂಲ ಸೌಕರ್ಯಗಳ ವೃದ್ಧಿಗಾಗಿ ಬೇಕಾಗುವ ಕಾರ್ಯಯೋಜನೆಯನ್ನು ಜಾರಿಗೊಳಿಸಬೇಕು. ಈ ಕಾರ್ಯಕ್ರಮವು ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕಾದರೆ, ಮೂಲ ಸೌಕರ್ಯದ ಅವಶ್ಯಕತೆಯನ್ನು ಶುಚಿ ಸಂಭ್ರಮ ಯೋಜನೆಯ ನೀತಿ ನಿಯಮಾವಳಿಗಳ ದಾಖಲೆ (Document)ಯಲ್ಲಿ ಸೇರಿಸಬೇಕಾಗಿದೆ.
- ಶಾಲೆ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು (School Development and Monitoring Committee-SDMC) ತಮ್ಮ ವ್ಯಾಪ್ತಿಗೆ ಬರುವ ಶಾಲೆಗಳಿಗೆ ದಾಖಲಾಗುವ ವಿದ್ಯಾರ್ಥಿ – ವಿದ್ಯಾರ್ಥಿನಿಯರು ಮೆಟ್ರಿಕ್ ಪೂರ್ವ ವಸತಿನಿಲಯಗಳಲ್ಲಿದ್ದರೆ, ಅಂಥ ನಿಲಯಗಳಲ್ಲಿ ಶುಚಿ ಸಂಭ್ರಮ ಯೋಜನೆಯ ಕಾರ್ಯನಿರ್ವಹಣೆಯ ಜವಾಬ್ದಾರಿಯನ್ನು ಈ ಸಮಿತಿಗಳಿಗೆ ವಹಿಸಬೇಕು. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಮುಖ್ಯ ಆಶಯವೇ ಶಾಲೆಗಳ ಶೈಕ್ಷಣಿಕ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಉತ್ತಮ ಪಡಿಸುವುದೇ ಆಗಿರುವುದರಿಂದ ಸಮಿತಿಯ ಸದಸ್ಯರು ತಮ್ಮ ಶಾಲೆಯ ಮಕ್ಕಳು ಎಲ್ಲಿ ನೆಲೆಸಿರುವರೋ ಅಂತಹ ಕಡೆ ವರ್ಷಕ್ಕೆ ಎರಡು ಬಾರಿಯಾದರೂ ಭೇಟಿ ನೀಡಬೇಕಾಗುತ್ತದೆ.
- ಶಾಲೆಗಳ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ರಾಜ್ಯ ಮತ್ತು ನಾಗರಿಕ ಸಮಾಜದ ಪ್ರತಿನಿಧಿಗಳನ್ನು ಒಳಗೊಂಡಿರುವುದರಿಂದ, ಶುಚಿ ಸಂಭ್ರಮ ಯೋಜನೆಯ ಪರಿಣಾಮಕಾರಿ ನಿರ್ವಹಣೆಗೆ ಅಗತ್ಯವಾಗಿ ಬೇಕಾಗಿರುವ ಕೆಲವು ಸೌಲಭ್ಯಗಳಾದ ಪೆಟ್ಟಿಗೆಗಳು, ಅಲಮಾರುಗಳು, ಟ್ರಂಕ್‌ಗಳು ಮತ್ತು ಕೀಲಿಗಳನ್ನು ಇವರ ನೆರವಿನಿಂದ ಪಡೆಯಬಹುದು.
- ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯೊಳಗೆ ಬರುವ ವಸತಿನಿಲಯಗಳಿಗೆ ಹಿರಿಯ ಅಧಿಕಾರಿಗಳ ಭೇಟಿಯ ಸಂಖ್ಯೆ ಹೆಚ್ಚಾಗಬೇಕಾದ ಅಗತ್ಯವಿದೆ. ಉಪ-ನಿರ್ದೇಶಕರು ತಮ್ಮ ಜಿಲ್ಲೆಯಲ್ಲಿರುವ ವಸತಿನಿಲಯಗಳಿಗೆ ಮೂರು ತಿಂಗಳಿಗೊಮ್ಮೆ ಭೇಟಿ ನೀಡಬೇಕು ಹಾಗೂ ಸಮಾಜಕಲ್ಯಾಣ ಇಲಾಖೆಯ ಆಯುಕ್ತರು, ಎಲ್ಲಾ ವಸತಿನಿಲಯ ಗಳಿಗೂ ಆರು ತಿಂಗಳಿಗೊಮ್ಮೆಯಾದರೂ ಭೇಟಿ ನೀಡಬೇಕು.
- ಶುಚಿ ಸಂಭ್ರಮ ಕಿಟ್ ಯೋಜನೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ವಸತಿನಿಲಯಗಳಲ್ಲಿರುವವ ರೆಲ್ಲರೂ ತಮ್ಮ ಅನುಭವವನ್ನು ಹಂಚಿಕೊಳ್ಳಲು, ಕಾಳಜಿಗಳನ್ನು ವ್ಯಕ್ತಪಡಿಸಲು ಹಾಗೂ ಸಲಹೆಗಳನ್ನು ನೀಡಲು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಒಂದು Online Portal ಅನ್ನು ಸೃಷ್ಟಿಮಾಡಬೇಕು.

******************

ಅನುಬಂಧ-I

# ಸಂಶೋಧನಾ ತಂಡ

| ಕ್ರಮ ಸಂಖ್ಯೆ | ಹೆಸರು | ನಿರ್ವಹಿಸಿದ ಜವಾಬ್ದಾರಿ |
|---|---|---|
| 1. | ಪ್ರೊ. ಆರ್. ಇಂದಿರಾ | ಪ್ರಧಾನ ಸಂಶೋಧಕರು |
| 2. | ಡಾ. ಸುಮನ್ ಕೆ. ಮೂರ್ತಿ | ತಂಡದ ಪ್ರಥಮ ಸದಸ್ಯರು |
| 3. | ಪ್ರೊ. ರಾಸ್‌ಬಾಗ್ ವಾಸುದೇವ | ತಂಡದ ಎರಡನೆಯ ಸದಸ್ಯರು |
| 4. | ಶ್ರೀ ಎನ್. ಡಿ. ತಿವಾರಿ | ಔಟ್‌ರಿಚ್‌ನ ಕಾರ್ಯನಿರ್ವಾಹಕ ನಿರ್ದೇಶಕರು |
| 5. | ಡಾ. ಶಾಂತಿ ಜಿ | ತಂಡದ ಸದಸ್ಯರು |
| 6. | ಸುಷ್ಮ ಸುವಾರಿಸ್ | ಮಾಹಿತಿ ನಮೂದು ಮತ್ತು ವಿಶ್ಲೇಷಣೆ |
| 7. | ಸುಜಾತ ಎಮ್. ನಾಯಕ್ | ಮಾಹಿತಿ ನಮೂದು ಮತ್ತು ವಿಶ್ಲೇಷಣೆ |
| 8. | ಐಲೀನ್ ಸ್ಯಾಮ್‌ಸನ್ | ಮಾಹಿತಿ ನಮೂದು ಮತ್ತು ವಿಶ್ಲೇಷಣೆ |
| 9. | ಕಿಲೇದಾರ್ | ಕ್ಷೇತ್ರ ಸಹಾಯಕರು |
| 10. | ಅಲ್ಕ ಸಂಗೀತ | ಕ್ಷೇತ್ರ ಸಹಾಯಕರು |
| 11. | ನಂಜುಂಡಯ್ಯ | ಕ್ಷೇತ್ರ ಸಹಾಯಕರು |
| 12. | ಸವಿತ ಹೂಗಾರ್ | ಕ್ಷೇತ್ರ ಸಹಾಯಕರು |
| 13. | ಸುರೇಶ್ | ಕ್ಷೇತ್ರ ಸಹಾಯಕರು |
| 14. | ಸೌಭಾಗ್ಯ | ಕ್ಷೇತ್ರ ಸಹಾಯಕರು |

**ಅನುಬಂಧ-II**

# I.S. No. 1
# Evaluation of Suchi Sambhrama Kit for SC/ST Girls in Karnataka
# Interview Schedule to collect data from students of Post Matric and Pre-Matric hostels.
# ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳ ವಿದ್ಯಾರ್ಥಿಗಳಿಂದ ಮಾಹಿತಿ ಸಂಗ್ರಹಿಸಲು ಬಳಸುವ ಸಂದರ್ಶನ ಕೈಪಿಡಿ

---

Name of the Interviewer:
ಸಂದರ್ಶಕರ ಹೆಸರು:

Date of Interview:
ಸಂದರ್ಶನದ ದಿನಾಂಕ :

Interviewer's Signature:
ಸಂದರ್ಶಕರ ಸಹಿ:

District:
ಜಿಲ್ಲೆ:

Number of Students in the hostel:
ವಸತಿನಿಲಯದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ:

---

Taluk:
ತಾಲ್ಲೂಕು

Castewise composition of students in the hostel:
ವಿದ್ಯಾರ್ಥಿಗಳ ಜಾತಿಗಳ ಬಗ್ಗೆ ಮಾಹಿತಿ

SC : ST: OBC: Others :

Name of the hostel and address:
ವಸತಿನಿಲಯದ ಹೆಸರು ಮತ್ತು ವಿಳಾಸ:

---

## Background Information of the Respondents
## ಉತ್ತರಿಸುವವರ ವೈಯುಕ್ತಿಕ ಮಾಹಿತಿ

1. Name of the student:
   ವಿದ್ಯಾರ್ಥಿಯ ಹೆಸರು :

2. Gender:
   ಲಿಂಗ:

3. Age:
   ವಯಸ್ಸು:

4. Educational level — Father — Mother
   ಶೈಕ್ಷಣಿಕ ಮಟ್ಟ — ತಂದೆ — ತಾಯಿ

5. Occupation — Father — Mother
   ಉದ್ಯೋಗ — ತಂದೆ — ತಾಯಿ

6. Grade/marks scored in the last academic year by the student
   ಕಳೆದ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಯು ಪಡೆದ ಅಂಕ/ ದರ್ಜೆ/ ಶ್ರೇಣಿ

7. Class in which studying currently:
   ಪ್ರಸ್ತುತ ಯಾವ ತರಗತಿಯಲ್ಲಿ ಓದುತ್ತಿರುವುದು?

8. School in which studying with address:
   ಶಾಲೆಯ ಹೆಸರು ಮತ್ತು ವಿಳಾಸ

9. When did you join the hostel?
   ಈ ವಸತಿನಿಲಯದಲ್ಲಿ ನೀವು ಯಾವಾಗ ಸೇರಿದ್ದು?

10. In which class were you studying when you joined the hostel?
    ಹಾಸ್ಟೆಲ್ ಸೇರಿದಾಗ ನೀವು ಯಾವ ತರಗತಿಯಲ್ಲಿ ಓದುತ್ತಿದ್ದೀರಿ?

11. Residential address and distance from the hostel?
    ಮನೆಯ ವಿಳಾಸ ಮತ್ತು ವಸತಿನಿಲಯದಿಂದ ಇರುವ ದೂರ:

12. Is any of your siblings studying in government residential hostel facility?
    ನಿಮ್ಮ ಒಡಹುಟ್ಟಿದವರಲ್ಲಿ ಯಾರಾದರೂ ಸರ್ಕಾರಿ ವಸತಿ ಶಾಲೆಯಲ್ಲಿ ವಾಸವಾಗಿದ್ದಾರೆಯೇ?

    a. Yes ಹೌದು
    b. No ಇಲ್ಲ

13. To which of the following category do you belong?
ಈ ಕೆಳಗಿನ ಯಾವ ಗುಂಪಿಗೆ ನೀವು ಸೇರುತ್ತೀರಿ?

a) Scheduled Caste (SC)
ಪರಿಶಿಷ್ಟ ಜಾತಿ

b) Scheduled Tribe (ST)
ಪರಿಶಿಷ್ಟ ಬುಡಕಟ್ಟು

c) Other Backward Classes (OBC)
ಇತರ ಹಿಂದುಳಿದ ವರ್ಗಗಳು

## I. Awareness about Suchi Sambhrama Scheme:
## ಶುಚಿ ಸಂಭ್ರಮ ಯೋಜನೆಯ ಬಗ್ಗೆ ಅರಿವು

14. Are you aware of the Suchi Sambhrama Scheme? Yes / No
ಶುಚಿ ಸಂಭ್ರಮ ಯೋಜನೆಯ ಬಗ್ಗೆ ನಿಮಗೆ ತಿಳಿಸಿದೆಯೇ? ಹೌದು / ಇಲ್ಲ

14a. When did you come to know about this scheme?
ಯಾವಾಗ ಈ ಯೋಜನೆಯ ಬಗ್ಗೆ ನಿಮಗೆ ತಿಳಿಯಿತು ?

15. From whom did you learn about it?
ಯಾರಿಂದ ಈ ಯೋಜನೆ ಬಗ್ಗೆ ತಿಳಿದುಕೊಂಡಿರಿ?

## II. Personal Hygiene awareness among the respondents
## ವೈಯಕ್ತಿಕ ಶುಚಿತ್ವದ ಬಗ್ಗೆ ಅರಿವು

16. Has anybody instructed you about personal hygiene?
ವೈಯಕ್ತಿಕ ಶುಚಿತ್ವದ ಬಗ್ಗೆ ಯಾರಾದರೂ ತಿಳಿಸಿ ಹೇಳಿದ್ದಾರೆಯೇ?

a) Yes/ಹೌದು b) No/ಇಲ್ಲ

b) If yes, who instructed you and when?
ಹೌದು ಎಂದಾದರೆ ಯಾರು? ಯಾವಾಗ?

17. Should one wash hands before/ after the following activities?
ಈ ಕೆಳಗಿನ ಚಟುವಟಿಕೆಗಳ ಮೊದಲು/ನಂತರ ಕೈಯನ್ನು ತೊಳೆಯಬೇಕೆ?

Yes/ಹೌದು No/ಇಲ್ಲ

a) after using the toilet
ಶೌಚಾಲಯವನ್ನು ಉಪಯೋಗಿಸಿದ ನಂತರ

b) before eating breakfast, lunch, dinner ಬೆಳಗಿನ
ತಿಂಡಿ, ಮಧ್ಯಾಹ್ನದ ಊಟ ಹಾಗೂ ರಾತ್ರಿಯ ಊಟದ ಮೊದಲು

c) After returning from school
ಶಾಲೆಯಿಂದ ಮರಳಿ ಬಂದಾಗ

d) After coming from playground
ಆಟದ ಮೈದಾನದಿಂದ ಹಿಂದಿರುಗಿ ಬಂದಾಗ

## III. Personal hygiene practice among the respondents:
## ಉತ್ತರಿಸುವವರಲ್ಲಿ ವೈಯಕ್ತಿಕ ನೈರ್ಮಲ್ಯದ ಆಚರಣೆ

18. How many times do you brush your teeth in the course of a day?
ಒಂದು ದಿನದಲ್ಲಿ ಎಷ್ಟು ಬಾರಿ ಹಲ್ಲನ್ನು ಉಜ್ಜುತ್ತೀರಿ ?

19. Once in the morning after waking up only
ಬೆಳಿಗ್ಗೆ ಎದ್ದ ತಕ್ಷಣ ಮಾತ್ರ

a) Yes/ಹೌದು b) No/ಇಲ್ಲ

20. Once in the morning & once before going to bed at night?
ಬೆಳಿಗ್ಗೆ ಒಂದು ಬಾರಿ ಮತ್ತು ರಾತ್ರಿ ಮಲಗುವ ಮೊದಲು

a) Yes/ಹೌದು b) No/ಇಲ್ಲ

21. After every meal
ಪ್ರತಿ ಬಾರಿ ಊಟ ಮಾಡಿದ ನಂತರ

a) Yes/ಹೌದು b) No/ಇಲ್ಲ

22. Do you wash your hands before eating a meal?
ಊಟ/ತಿಂಡಿ ಮಾಡುವ ಮೊದಲು ನೀವು ಕೈತೊಳಿಯುತ್ತೀರಾ?

a) Yes/ಹೌದು b) No/ಇಲ್ಲ

23. Do you wash your hands after each visit to the toilet?
ಪ್ರತಿ ಬಾರಿ ಶೌಚಾಲಯ ಬಳಸಿದನಂತರ ನೀವು ಕೈ ತೊಳೆಯುತ್ತಿರಾ?

a) Yes/ಹೌದು b) No/ಇಲ್ಲ

24. Do you take bath every day?
ನೀವು ದಿನವೂ ಸ್ನಾನ ಮಾಡುತ್ತೀರಾ?

a) Yes/ಹೌದು b) No/ಇಲ್ಲ

25. If no give reason
ಇಲ್ಲ ಎಂದಾದರೆ ಏಕೆ ಮಾಡುವುದಿಲ್ಲ?

26. Do you wash your feet after:
ನೀವು ಈ ಕೆಳಗಿನವುಗಳಲ್ಲಿ ಯಾವುದನ್ನು ಮಾಡಿದಾಗ ಕಾಲನ್ನು ತೊಳೆಯುತ್ತೀರಿ.

a) Yes/ಹೌದು b) No/ಇಲ್ಲ

a. Using the toilet
ಶೌಚಾಲಯವನ್ನು ಬಳಸಿದಾಗ

b. Returning from school
ಶಾಲೆಯಿಂದ ಮರಳಿ ಬಂದಾಗ

c. Playing outside
ಹೊರಗಡೆ ಆಟ ಆಡಿ ಬಂದಾಗ

27. How often do you comb your hair?
ನೀವು ತಲೆಯನ್ನು ಎಷ್ಟು ಬಾರಿ ಬಾಚುತ್ತೀರಿ?

28. How often do you wash your hair?
ನೀವು ಎಷ್ಟು ದಿನಗಳಿಗೊಮ್ಮೆ ತಲೆಗೆ ಸ್ನಾನ ಮಾಡುತ್ತೀರಿ?

29. How often do you change your clothes in the course of the day?
ಒಂದು ದಿನದಲ್ಲಿ ಎಷ್ಟು ಬಾರಿ ಬಟ್ಟೆಗಳನ್ನು ಬದಲಾಯಿಸುತ್ತೀರಿ?

30. How often do you wash the following?
ಈ ಕೆಳಗಿನವುಗಳನ್ನು ಎಷ್ಟು ದಿನಗಳಿಗೊಮ್ಮೆ ಒಗೆಯುತ್ತೀರಿ?

   a. Uniform
   ಸಮವಸ್ತ್ರ

   b. Daily Clothes that you wear
   ದಿನನಿತ್ಯ ತೊಡುವ ಬಟ್ಟೆಗಳು

   c. Towels
   ಟವಲುಗಳು

   d. Handkerchief
   ಕರ್ಚಿಫು

   e. Socks
   ಕಾಲುಚೀಲ

31. How often do you cut your nails?
ನಿಮ್ಮ ಉಗುರುಗಳನ್ನು ಎಷ್ಟು ದಿನಗಳಿಗೊಮ್ಮೆ ಕತ್ತರಿಸುತ್ತೀರಿ?

32. Do you use footwear on a regular basis?
ನೀವು ಯಾವಾಗಲು ಪಾದರಕ್ಷೆಗಳನ್ನು ಬಳಸುತ್ತೀರಾ?

a) Yes/ಹೌದು b) No/ಇಲ್ಲ

33. For girl students only
ಬಾಲಕಿಯರಿಗೆ ಮಾತ್ರ

**During your monthly period do you: ಋತುಮತಿಯಾದಾಗ**

a. take bath daily
ದಿನವೂ ಸ್ನಾನ ಮಾಡುತ್ತೀರಾ ?

b. use sanitary pads
ಪ್ಯಾಡ್‌ಗಳನ್ನು ಬಳಸುತ್ತೀರಾ

c. use old clothes
ಹಳೆ ಬಟ್ಟೆಗಳನ್ನು ಬಳಸುತ್ತೀರಾ

d. dispose sanitary pads in designated place
ನಿಗದಿತ ಜಾಗದಲ್ಲಿ ಪ್ಯಾಡ್‌ಗಳನ್ನು ಎಸೆಯುತ್ತೀರಾ

e. wash and dry used old clothes in designated place
ನಿಗದಿತ ಜಾಗದಲ್ಲಿ ಪ್ಯಾಡ್ ಹಳೆ ಬಟ್ಟೆಗಳನ್ನು ಒಗೆಯುತ್ತೀರಾ

## IV. Infrastructure availability for personal hygiene practice in the hostels:
## ವೈಯಕ್ತಿಕ ನೈರ್ಮಲ್ಯ ಆಚರಣೆಗೆ ಸಂಬಂಧಿಸಿದಂತೆ ವಸತಿನಿಲಯದಲ್ಲಿ ಲಭ್ಯವಿರುವ ಮೂಲ ಸೌಕರ್ಯಗಳು

34. Do you have separate space in hostel to keep your things?
ನಿಮಗೆ ನಿಮ್ಮ ವಸ್ತುಗಳನ್ನು ಇಟ್ಟುಕೊಳ್ಳಲು ಹಾಸ್ಟೆಲ್‌ನಲ್ಲಿ ಬೇರೆ ಜಾಗ ಇದೆಯೇ?

a) Yes/ಹೌದು b) No/ಇಲ್ಲ

If no, where do you keep your personal things?
ಇಲ್ಲ ಎಂದಾದರೆ ವಸ್ತುಗಳನ್ನು ಎಲ್ಲಿ ಇಡುತ್ತೀರಾ

35. Where do you keep the SSK kit?
ಈ SSK ಕಿಟ್‌ನ್ನು ನೀವು ಎಲ್ಲಿ ಇಟ್ಟುಕೊಳ್ಳುವಿರಿ?

36. Is there regular water supply in your hostel?
ನಿಮ್ಮ ವಸತಿನಿಲಯದಲ್ಲಿ ಯಾವಾಗಲು ನೀರು ಬರುತ್ತದೆಯೇ?

a) Yes/ಹೌದು b) No/ಇಲ್ಲ

37. How many bathrooms are there in your hostel?
ನಿಮ್ಮ ವಸತಿನಿಲಯದಲ್ಲಿ ಎಷ್ಟು ಸ್ನಾನದ ಮನೆಗಳಿವೆ?

38. Do you always get hot water for bath?
ನಿಮಗೆ ಸ್ನಾನ ಮಾಡಲು ಯಾವಾಗಲು ಬಿಸಿ ನೀರು ದೊರಕುತ್ತದೆಯೇ?

a) Yes/ಹೌದು b) No/ಇಲ್ಲ

39. How many toilets are there in your hostel?
ನಿಮ್ಮ ವಸತಿನಿಲಯದಲ್ಲಿ ಎಷ್ಟು ಶೌಚಾಲಯಗಳಿವೆ?

40. Is there a water tap with continuous water supply in toilets?
ಶೌಚಾಲಯದಲ್ಲಿ ಯಾವಾಗಲು ನೀರು ಬರುತ್ತದೆಯೇ?

a) Yes/ಹೌದು b) No/ಇಲ್ಲ

41. If No, do you have to carry water from outside?
ಇಲ್ಲದಿದ್ದಲ್ಲಿ ನೀವು ನೀರನ್ನು ಹೊರಗಡೆಯಿಂದ ತರಬೇಕೆ?

a) Yes/ಹೌದು b) No/ಇಲ್ಲ

42. if yes, where do you bring the water from?
ಹಾಗಾದರೆ ನೀರನ್ನು ಎಲ್ಲಿಂದ ತರುತ್ತೀರಿ?

43. How often are the toilets are cleaned in your hostel?
ಶೌಚಾಲಯಗಳನ್ನು ದಿನದಲ್ಲಿ ಎಷ್ಟು ಬಾರಿ ಶುಚಿಗೊಳಿಸುತ್ತೀರಾ

44. What do you recommend as changes required in the hostel environment?
ವಸತಿನಿಲಯದ ವಾತಾವರಣದಲ್ಲಿ ಯಾವ ಬದಲಾವಣೆಗಳನ್ನು ತರಬೇಕೆಂದು ನೀವು ಸೂಚಿಸುತ್ತೀರ?

## V. Infrastructure availability for personal hygiene practice in the homes of respondents:
## ಪ್ರತಿಸ್ಪಂದಿತರ ಮನೆಯಲ್ಲಿ ವೈಯಕ್ತಿಕ ನೈರ್ಮಲ್ಯ ಅಭ್ಯಾಸಕ್ಕಾಗಿ ಮೂಲಸೌಕರ್ಯ ಲಭ್ಯತೆ

45. Do you have proper bathroom and toilet facility at your home? Yes/No
ನಿಮ್ಮ ಮನೆಯಲ್ಲಿ ವ್ಯವಸ್ಥಿತ ಶೌಚಾಲಯದ ಸೌಲಭ್ಯವಿದೆಯೇ ? ಹೌದು/ಇಲ್ಲ

46. Does the toilet at your home have running water supply? Yes/No
ನಿಮ್ಮ ಮನೆಯ ಶೌಚಾಲಯದಲ್ಲಿ ಸದಾಕಾಲವೂ ನೀರಿನ ಸೌಲಭ್ಯವಿದೆಯೇ? ಹೌದು/ಇಲ್ಲ

## VI. Personal hygiene practices adopted by the respondents at home:
## ಮನೆಯಲ್ಲಿ ಪ್ರತಿಸ್ಪಂದಕರು ಅಳವಡಿಸಿಕೊಂಡ ವೈಯಕ್ತಿಕ ನೈರ್ಮಲ್ಯ ಅಭ್ಯಾಸಗಳು

47. Prior to joining the hostel, were you using all the items that are in the kit at your home?
ವಸತಿನಿಲಯವನ್ನು ಸೇರುವ ಮೊದಲು, ನೀವು ಈ ಕಿಟ್‌ನಲ್ಲಿರುವ ಎಲ್ಲಾ ವಸ್ತುಗಳನ್ನು ಬಳಸುತ್ತಿದ್ದೀರಾ?

48. When you go home during vacations, do you continue to use the items that are in the kit?
ನೀವು ರಜೆಯಲ್ಲಿ ಮನೆಗೆ ಹೋದಾಗ ಈ ಕಿಟ್‌ನಲ್ಲಿರುವ ಎಲ್ಲಾ ವಸ್ತುಗಳ ಬಳಕೆಯನ್ನು ಮುಂದುವರೆಸುತ್ತೀರಾ?

a) Yes/ಹೌದು b) No/ಇಲ್ಲ

49. If yes, do you buy them? Yes /No
ಹೌದು ಎಂದಾದರೆ ನೀವು ಅವುಗಳನ್ನು ಕೊಂಡುಕೊಳ್ಳುತ್ತೀರಾ? ಹೌದು/ಇಲ್ಲ

50. How much do you spend on purchasing these items ?
ಈ ವಸ್ತುಗಳನ್ನು ಕೊಂಡುಕೊಳ್ಳಲು ನೀವು ಎಷ್ಟು ಹಣ ಖರ್ಚು ಮಾಡುತ್ತೀರಿ?

## VII. Process of kit distribution/ refill:
## ಕಿಟ್ ವಿತರಣೆ /ಮರುತುಂಬಿಸು

51. Have you received the Suchi Sambhrama Kit?
ನಿಮಗೆ ಶುಚಿ ಸಂಭ್ರಮ ಕಿಟ್ ನೀಡಲಾಗಿದೆಯೇ?

a) Yes/ಹೌದು b) No/ಇಲ್ಲ

52. How many times in a year have you received the kit?
ಒಂದು ಶೈಕ್ಷಣಿಕ ವರ್ಷದಲ್ಲಿ ಎಷ್ಟು ಬಾರಿ ಈ ಕಿಟ್ ನಿಮಗೆ ದೊರೆತಿದೆ?

53. What are the items in the kit?
ಕಿಟ್ಟಿನ ಒಳಗೆ ಯಾವ-ಯಾವ ಸಾಮಾನುಗಳಿರುತ್ತವೆ?

54. Are all the items re-filled in time?
ಎಲ್ಲಾ ವಸ್ತುಗಳನ್ನು ಮುಗಿದ ನಂತರ ಹೊಸ SSK ಸಿಗುತ್ತದೆ

a) Yes/ಹೌದು b) No/ಇಲ್ಲ

55. How much time does it take to refill the kit?
ಹೊಸ ಕಿಟ್ ನೀಡಲು ಎಷ್ಟು ಸಮಯ ಹಿಡಿಸುತ್ತದೆ?

## VIII. Opinion of respondents with regard to utility and adequacy of SSK
## ಶುಚಿ ಸಂಭ್ರಮ ಕಿಟ್ ಕುರಿತ ಅಭಿಪ್ರಾಯ

56. Do you use all the items provided in the kit?
ಈ ಕಿಟ್ಟಿನಲ್ಲಿರುವ ಎಲ್ಲ ವಸ್ತುಗಳನ್ನು ನೀವು ಉಪಯೋಗಿಸುತ್ತೀರಾ

a) Yes/ಹೌದು b) No/ಇಲ್ಲ

57. What are the items you use and do not use?
ನೀವು ಬಳಸುವ ಹಾಗೂ ಬಳಸದಿರುವ ವಸ್ತುಗಳು ಯಾವುವು? ತಿಳಿಸಿ

58. Do the things provided in kit last for one full month.
ಕಿಟ್ಟಿನಲ್ಲಿ ಕೊಡುವ ಪದಾರ್ಥಗಳು ನಿಮ್ಮ ಒಂದು ತಿಂಗಳ ಅವಶ್ಯಕತೆಗಳಿಗೆ ಸಾಕಾಗುತ್ತದೆಯೇ?

a) Yes/ಹೌದು b) No/ಇಲ್ಲ

59. If no, what do you do if the items get over before the refill?
ಕಿಟ್ಟಿನಲ್ಲಿರುವ ವಸ್ತುಗಳು ಸಮಯಕ್ಕೆ ಮುಂಚೆಯೇ ಮುಗಿದು ಹೋದರೆ ಏನು ಮಾಡುತ್ತೀರಿ?

60. Besides the items given to you, do you need any other items to be provided? Name the items
ನಿಮಗೆ ಕಿಟ್ಟಿನಲ್ಲಿ ನೀಡಿರುವ ವಸ್ತುಗಳ ಜೊತೆ ಮತ್ತ್ಯಾವುದಾದರೂ ವಸ್ತುಗಳ ಅಗತ್ಯವಿದೆಯೇ? ಅವುಗಳನ್ನು ಹೆಸರಿಸಿ.

61. Do you buy any other items related to personal hygiene from outside?
ನಿಮ್ಮ ವೈಯಕ್ತಿಕ ನೈರ್ಮಲ್ಯಕ್ಕೆ ಸಂಬಧಿಸಿದ ಯಾವುದಾದರು ವಸ್ತುಗಳನ್ನು ನೀವು ಹೊರಗಿನಿಂದ ಕೊಳ್ಳುತ್ತೀರಾ

a) Yes/ಹೌದು b) No/ಇಲ್ಲ

62. If yes, what are those items?
ಹೌದು ಎಂದಾದರೆ ಅವುಗಳು ಯಾವುವು?

63. How much do you spend on buying these items?
ಈ ವಸ್ತುಗಳನ್ನು ಕೊಳ್ಳುವುದರ ಮೇಲೆ ಎಷ್ಟು ಹಣವನ್ನು ಖರ್ಚು ಮಾಡುತ್ತೀರಾ?

64. Where do you raise the money for purchasing these items?
ಈ ವಸ್ತುಗಳನ್ನು ಕೊಳ್ಳಲು ಯಾವ ಮೂಲದಿಂದ ಹಣವನ್ನು ಒದಗಿಸುತ್ತೀರಾ?

a) Yes/ಹೌದು b) No/ಇಲ್ಲ

65. Do you want any more items to be added to the kit? Do you recommend any brands
ಈ ಕಿಟ್‌ನಲ್ಲಿ ಇನ್ನ್ಯಾವುದಾದರೂ ವಸ್ತುಗಳನ್ನು ಸೇರಿಸಬೇಕೇ? ಅದು ಯಾವುದಾದರೂ ವಿಶೇಷ ಬ್ರಾಂಡ್ ಆಗಿರಬೇಕು ಎಂದು ನೀವು ಸಲಹೆ ಮಾಡುತ್ತೀರಾ?

## IX. Perception about SSK benefits
## ಅನುಕೂಲಗಳ ಬಗ್ಗೆ ಗ್ರಹಿಸುವುದು

66. Can you tell us about your health condition before the kit was given?
ಈ ಕಿಟ್ಟನ್ನು ಕೊಡುವ ಮೊದಲು ನಿಮ್ಮ ಆರೋಗ್ಯ ಪರಿಸ್ಥಿತಿ ಹೇಗಿತ್ತು.?

67. Has the kit improved your health situation and that of your hostel inmates? How?
ನೀವು ಹಾಗೂ ನಿಮ್ಮ ವಸತಿನಿಲಯದಲ್ಲಿ ಇರುವವರ ಆರೋಗ್ಯ ಪರಿಸ್ಥಿತಿಯನ್ನು ಈ ಕಿಟ್ ಸುಧಾರಿಸಿದೆಯೇ? ಹೇಗೆ

68. What were the common health problems you face before the kit was supplied? Name them
ಕಿಟ್ ನೀಡುವ ಮೊದಲು ನೀವು ಎದುರಿಸುತ್ತಿದ್ದ ಆರೋಗ್ಯ ಸಮಸ್ಯೆಗಳಾವುವು? ಅವುಗಳನ್ನು ಹೆಸರಿಸಿ

69. Do you or your hostel mates have the following issues?
ನಿಮಗೆ ಅಥವಾ ನಿಮ್ಮ ಹಾಸ್ಟೆಲಿನಲ್ಲಿ ವಾಸವಾಗಿರುವ ಇತರರಿಗೆ ಈ ಕೆಳಗಿನ ಯಾವುದಾದರೂ ಸಮಸ್ಯೆಗಳಿವೆಯೇ?

a. Lice in the hair Yes/No
ಕೂದಲಲ್ಲಿ ಹೇನು ಹೌದು/ಇಲ್ಲ

b. Skin Infections Yes/No
ಚರ್ಮದ ಸೋಂಕು ಹೌದು/ಇಲ್ಲ

c. Bad Mouth odor Yes/No
ಬಾಯಿಯ ವಾಸನೆ ಹೌದು/ಇಲ್ಲ

d. Teeth Problems Yes/No
ಹಲ್ಲಿನ ಸಮಸ್ಯೆ ಹೌದು/ಇಲ್ಲ

e. Diarrhea. Yes/No
ಅತಿಸಾರ ಹೌದು/ಇಲ್ಲ

70. Do you think your health has improved only because of the kit?
ಈ ಕಿಟ್‌ನಿಂದ ಮಾತ್ರ ನಿಮ್ಮ ಆರೋಗ್ಯ ಸುಧಾರಿಸಿದೆ, ಎಂದು ನಿಮಗೆ ಅನಿಸುತ್ತಿದೆಯೇ?

a) Yes/ಹೌದು b) No/ಇಲ್ಲ

## X. Identification of beneficiaries for SSK scheme:
## SSK ಯೋಜನೆಗಾಗಿ ಫಲಾನುಭವಿಗಳ ಗುರುತಿಸುವಿಕೆ

71. What are the criteria used to select students in your hostel to receive the kit?
ನಿಮ್ಮ ವಸತಿನಿಲಯದಲ್ಲಿ ಕಿಟ್ಟನ್ನು ಪಡೆಯಲು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಉಪಯೋಗಿಸುವ ಮಾನದಂಡಗಳಾವುವು?

72. Have all the students in your hostel who are eligible to get the kit received it?
ನಿಮ್ಮ ವಸತಿನಿಲಯದಲ್ಲಿ ಈ ಯೋಜನೆಯಿಂದ ಪ್ರಯೋಜನವನ್ನು ಪಡೆಯಲು ಅರ್ಹರಾಗಿರುವ ಎಲ್ಲರಿಗೂ ಈ ಕಿಟ್ ದೊರೆತಿದೆಯೇ?

a) Yes/ಹೌದು b) No/ಇಲ್ಲ

73. Are students who are not eligible to receive the kit also receiving it?
ಈ ಕಿಟ್ಟನ್ನು ಪಡೆಯಲು ಅರ್ಹರಲ್ಲದಿದ್ದವರಿಗೂ ಅದನ್ನು ಕೊಡಲಾಗಿದೆಯೇ?

a) Yes/ಹೌದು b) No/ಇಲ್ಲ

74. Do children in your school who stay in other hostel ask you about the kit and its contents?
ಬೇರೆ ವಸತಿನಿಲಯಗಳಲ್ಲಿ ವಾಸವಾಗಿರುವ ನಿಮ್ಮ ಶಾಲೆಯಲ್ಲಿರುವ ಮಕ್ಕಳು ಈ ಕಿಟ್ ಹಾಗೂ ಅದರಲ್ಲಿರುವ ವಸ್ತುಗಳ ಬಗ್ಗೆ ನಿಮ್ಮನ್ನು ಕೇಳುತ್ತಾರೆಯೇ?

75. Do they also desire that the kit be provided to them?
ತಮಗೂ ಕಿಟ್ಟಿನ ಅಗತ್ಯವಿದೆ ಎಂದು ಅವರು ಹೇಳುತ್ತಾರೆಯೇ?

## XI. Demand / Supply chain management:
## ಬೇಡಿಕೆ / ಒದಗಿಸುವಿಕೆಯ ನಿರ್ವಹಣೆ

76. Do all SC/ST students in the hostel receive the kit?
ಎಲ್ಲಾ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೂ ಈ ಕಿಟ್ ದೊರೆಯುತ್ತದೆಯೇ?

a) Yes/ಹೌದು b) No/ಇಲ್ಲ

If no, ಇಲ್ಲವೆಂದಾದರೆ

75.a. How was the shortage addressed?
ಕಡಿಮೆಯಾಗಿದ್ದಲ್ಲಿ ಸಮಸ್ಯೆಯನ್ನು ಹೇಗೆ ಪರಿಹರಿಸಲಾಗುತ್ತದೆ.

77. If the number of kits, exceeds the number of students, does the warden distribute them to others?
ಕಿಟ್‌ಗಳ ಸಂಖ್ಯೆ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಾಗಿದ್ದಲ್ಲಿ ನಿಲಯಪಾಲಕರು ಅವುಗಳನ್ನು ಬೇರೆಯವರಿಗೆ ನೀಡುತ್ತಾರಾ?

## XII. Level of Satisfaction about SSK among the respondents:
## ಪ್ರತಿಕ್ರಿಯಿಸಿದವರಲ್ಲಿ SSK ಬಗ್ಗೆ ತೃಪ್ತಿಯ ಮಟ್ಟ:

78. Are you satisfied with the quality of items in the kit being supplied to you?
ನಿಮಗೆ ನೀಡಿರುವ ಕಿಟ್‌ನಲ್ಲಿರುವ ವಸ್ತುಗಳ ಗುಣ ಮಟ್ಟದ ಬಗ್ಗೆ ನಿಮಗೆ ಸಮಾಧಾನವಿದೆಯೇ

79. If no, ಇಲ್ಲವೆಂದಾದರೆ ಏಕೇ

80. Do you want this scheme to continue?
ಈ ಯೋಜನೆ ಮುಂದುವರಿಯಬೇಕೆಂದು ನೀವು ಹೇಳುತ್ತೀರಾ?

a) Yes/ಹೌದು b) No/ಇಲ್ಲ

81. Give your suggestions making the Suchi Sambhrama scheme better?
ಶುಚಿ ಸಂಭ್ರಮ ಯೋಜನೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ನಿಮ್ಮ ಸಲಹೆಗಳೇನು?

Interviewers are requested to physically verify the items in the kit
ಸಂದರ್ಶಕರು ಮಕ್ಕಳಿಗೆ ಕೊಡುವ ಕಿಟ್ಟನ್ನು ಪರಿಶೀಲಿಸಬೇಕು

# I S No. 2
# OUTREACH
# Evaluation of Suchi Sambhrama Kit for SC/ST Boys and Girls in Karnataka
## Interview Schedule to collect data from wardens of Pre-Matric and Post-Matric hostels.
## ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳ ನಿಲಯಪಾಲಕರಿಂದ ಮಾಹಿತಿ ಸಂಗ್ರಹಿಸಲು ಬಳಸುವ ಸಂದರ್ಶನ ಕೈಪಿಡಿ

---

Interviewer's Name:
ಸಂದರ್ಶಕರ ಹೆಸರು

Date of Interview:
ಸಂದರ್ಶನದ ದಿನಾಂಕ :

Interviewer's Signature:
ಸಂದರ್ಶಕರ ಸಹಿ

---

District:
ಜಿಲ್ಲೆ:

Number of Students in the hostel:
ವಿದ್ಯಾರ್ಥಿ ನಿಲಯದ ಹೆಸರು ಮತ್ತು ವಿಳಾಸ :

Name of the warden with signature:
ನಿಲಯಪಾಲಕರ ಹೆಸರು ಮತ್ತು ಸಹಿ :

---

**Background information about the hostel inmates**
**ವಸತಿನಿಲಯದಲ್ಲಿ ಇರುವವರ ಬಗ್ಗೆ ಮೂಲ ಮಾಹಿತಿ**

1. Number of the students in the hostel :
   ವಿದ್ಯಾರ್ಥಿ ನಿಲಯದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ:

2. Caste wise breakup of students:
   ವಿದ್ಯಾರ್ಥಿಗಳ ಜಾತಿವಾರು ಸಂಖ್ಯೆ : SC : ST: OBC: Others :

3. What classes are the students in the hostel studying?
   ವಿದ್ಯಾರ್ಥಿಗಳು ಯಾವ ಯಾವ ತರಗತಿಗಳಲ್ಲಿ ಓದುತಿದ್ದಾರೆ?

## I. Responsibilities of the Warden
## ನಿಲಯಪಾಲಕರ ಜವಾಬ್ದಾರಿಗಳು

4. Is the warden staying in the hostel? Yes ಹೌದು / No ಇಲ್ಲ

   ನಿಲಯಪಾಲಕರು ವಿದ್ಯಾರ್ಥಿನಿಲಯದಲ್ಲೇ ವಾಸಿಸುತ್ತಾರಾ

4 (a) If no, where are you staying and how far is your place of residence from the hostel?
   ಇಲ್ಲ ಎಂದಾದರೆ, ನೀವು ಎಲ್ಲಿ ವಾಸವಾಗಿದ್ದೀರಿ ಮತ್ತು ನಿಲಯದಿಂದ ನಿಮ್ಮ ಮನೆ ಎಷ್ಟು ದೂರದಲ್ಲಿದೆ?

5. What are your working hours in the hostel?
   ವಸತಿನಿಲಯದಲ್ಲಿ ನಿಮ್ಮ ಕೆಲಸದ ವೇಳೆ ಏನು?

6. Give a list of your job responsibilities as warden.
   ನಿಲಯಪಾಲಕರಾಗಿ ನೀವು ಮಾಡುವ ಕೆಲಸಗಳನ್ನು ಪಟ್ಟಿ ಮಾಡಿ

7. How long have you been working as a warden?
   ನಿಲಯಪಾಲಕರಾಗಿ ನೀವು ಎಷ್ಟು ವರ್ಷಗಳು/ತಿಂಗಳುಗಳಿಂದ ಕಾರ್ಯ ನಿರ್ವಹಿಸುತ್ತಿದ್ದೀರಿ?

## II. Distribution of Suchi Sambhrama Kits
## ಶುಚಿ ಸಂಭ್ರಮ ಕಿಟ್‌ಗಳ ವಿತರಣೆ

8. How long have you been associated with the distribution of suchi sambhrama kit scheme?
   ನೀವು ಎಷ್ಟು ಸಮಯದಿಂದ SSK ಯೋಜನೆಯನ್ನು ನಿರ್ವಹಿಸುತ್ತಿದ್ದೀರಾ?

9. Who are groups to which kits are given?
   ಈ ಕಿಟ್ಟನ್ನು ನಿಮ್ಮ ವಿದ್ಯಾರ್ಥಿ ನಿಲಯಯದಲ್ಲಿ ಯಾವ ಯಾವ ಗುಂಪಿನ ವಿದ್ಯಾರ್ಥಿಗಳಿಗೆ ನೀಡುತ್ತಾರೆ ?

   SC ಪರಿಶಿಷ್ಟ ಜಾತಿ

   ST ಪರಿಶಿಷ್ಟ ವರ್ಗ

   OBC ಇತರ ಹಿಂದುಳಿದ ವರ್ಗಗಳು

   All students ಎಲ್ಲ ವಿದ್ಯಾರ್ಥಿಗಳು

10. Is the supply of kit regular to your hostel?
ನಿಮ್ಮ ವಿದ್ಯಾರ್ಥಿನಿಲಯಕ್ಕೆ ಕಿಟ್ಟಿನ ಸರಬರಾಜು ನಿಯತವಾಗಿದೆಯೇ ?

a)Yes ಹೌದು b)No ಇಲ್ಲ

10) a. If yes, how often is it supplied?
ಹೌದಾದರೆ, ಎಷ್ಟು ಬಾರಿ ಕಿಟ್ಟನ್ನು ಸರಬರಾಜು ಮಾಡಲಾಗುತ್ತದೆ ?

10) b. If no, how many times during the course of a year is it supplied?
ಇಲ್ಲ ಎಂದಾದರೆ, ಒಂದು ವರ್ಷದ ಅವಧಿಯಲ್ಲಿ ಎಷ್ಟು ಬಾರಿ ಸರಬರಾಜು ಮಾಡಲಾಗುತ್ತದೆ?

## III. Supply/ demand issues and maintenance of registers
## ಸರಬರಾಜು/ ಬೇಡಿಕೆ ವಿಚಾರಣೆಗಳು ಮತ್ತು ದಾಖಲೆಗಳ ನಿರ್ವಹಣೆ

11. What is the procedure followed in the distribution of kits?
ಕಿಟ್‌ಗಳನ್ನು ವಿತರಿಸುವಾಗ ಅನುಸರಿಸುವ ಕ್ರಮಗಳಾವುವು ?

12. Is the supply and distribution as per demand?
ಕಿಟ್‌ಗಳ ಸರಬರಾಜು ಬೇಡಿಕೆಗೆ ಅನುಗುಣವಾಗಿದೆಯೇ?

13. Is there shortage or excess in the supply of kits? If yes, how do you handle these situations?
ಕಿಟ್‌ಗಳ ಸರಬರಾಜಿನಲ್ಲಿ ಕೊರತೆ ಅಥವಾ ಹೆಚ್ಚುವರಿ ಎನಿಸುವಂಥ ಪರಿಸ್ಥಿಗಳು ಬಂದಿವೆಯೇ ? ಅಂಥ ಸಂದರ್ಭಗಳು ಬಂದಾಗ ಹೇಗೆ ನಿರ್ವಹಿಸುತ್ತೀರಿ ?

14. What is the process of documenting the receipt and distribution of kits in the hostel?
ಕಿಟ್‌ಗಳನ್ನು ಪಡೆದುಕೊಳ್ಳುವುದು ಹಾಗು ವಿತರಣೆ ಮಾಡುವುದು ಈ ಎರಡು ಪ್ರಕ್ರಿಯೆಗಳನ್ನು ಹೇಗೆ ದಾಖಲು ಮಾಡಿಕೊಳ್ಳುತ್ತೀರಿ?

15. How do you account for the kits received and distributed to the Department of social welfare?
ನೀವು ವಸತಿನಿಲಯದಲ್ಲಿ ಅವುಗಳನ್ನು ಹಂಚುವ ಕ್ರಮವನ್ನು ಸಮಾಜ ಕಲ್ಯಾಣ ಇಲಾಖೆಗೆ ಹೇಗೆ ವರದಿ ಮಾಡುತ್ತೀರಾ ಅಥವಾ ಹೇಗೆ ಲೆಕ್ಕ ನೀಡುತ್ತೀರಾ?

## IV. Personal hygiene -awareness and practices
## ವೈಯಕ್ತಿಕ ನೈರ್ಮಲ್ಯ- ಅರಿವು ಮತ್ತು ಆಚರಣೆಗಳು

16. What is the level of awareness of students about personal hygiene ?
    ತಮ್ಮ ವೈಯಕ್ತಿಕ ನೈರ್ಮಲ್ಯವನ್ನು ಕುರಿತಂತೆ ವಿದ್ಯಾರ್ಥಿಗಳ ತಿಳುವಳಿಕೆಯ ಮಟ್ಟ ಹೇಗಿದೆ ?

17. Do you find any difference between children of different classes and age groups in understanding the importance of personal hygiene?
    ಬೇರೆ-ಬೇರೆ ತರಗತಿಗಳಲ್ಲಿರುವ ಮಕ್ಕಳು ಹಾಗು ಅವರ ವಯಸ್ಸಿನ ಆಧಾರದ ಮೇಲೆ ವೈಯಕ್ತಿಕ ನೈರ್ಮಲ್ಯದ ಪ್ರಾಮುಖ್ಯತೆಯನ್ನು ತಿಳಿಯುವಲ್ಲಿ ನೀವು ಏನಾದರು ವ್ಯತ್ಯಾಸಗಳನ್ನು ಕಾಣುತ್ತೀರಾ?

18. How do you keep track of whether children use the items supplied to them in the kit, when they are out of the hostel? In the hostel?
    ವಸತಿನಿಲಯದಿಂದ ಹೊರಗಿರುವಾಗ ಮಕ್ಕಳು ಈ ಕಿಟ್ಟಿನಲ್ಲಿರುವ ವಸ್ತುಗಳ ಬಳಕೆಯನ್ನು ಮುಂದುವರಿಸಿಕೊಂಡು ಹೋಗುತ್ತಾರೋ ಇಲ್ಲವೊ ನೀವು ಹೇಗೆ ಗಮನಿಸುತ್ತೀರಾ?

19. Have you provided separate places for safe keeping of the kits in your hostel? Where do the children keep then kits?
    ಕಿಟ್‌ಗಳನ್ನಿಡಲು ನೀವು ಪ್ರತ್ಯೇಕ ಸ್ಥಳವನ್ನು ಒದಗಿಸಿದ್ದೀರಾ? ಮಕ್ಕಳು ತಮ್ಮ ಕಿಟ್‌ಗಳನ್ನು ಸುರಕ್ಷಿತವಾಗಿ ಎಲ್ಲಿ ಇಡುತ್ತಾರೆ ?

## V. Access to Suchi Sambhrama
## ಶುಚಿ ಸಂಭ್ರಮ ಯೋಜನೆಯ ಲಭ್ಯತೆ

20. Who are groups to which kits are given?
    ಈ ಕಿಟ್‌ನ್ನು ನಿಮ್ಮ ವಿದ್ಯಾರ್ಥಿ ನಿಲಯದಲ್ಲಿ ಯಾವ ಯಾವ ಗುಂಪಿನ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ ?

    SC ಪರಿಶಿಷ್ಟ ಜಾತಿ

    ST ಪರಿಶಿಷ್ಟ ವರ್ಗ

    OBC ಇತರ ಹಿಂದುಳಿದ ವರ್ಗಗಳು

    All students ಎಲ್ಲ ವಿದ್ಯಾರ್ಥಿಗಳು

21. Do you think that these kits must be provided in all hostels and Ashram Schools?
